ಮಹಿಳಾ ಸಹಕಾರಿ ಸಂಘದಿಂದ ಮಹಿಳಾ ಸಬಲೀಕರಣ
ಕುಂದಾಪುರ ತಾಲೂಕು ಒಂದು ಅಧ್ಯಯನ

ಎಂ. ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರ

ಪಡಿಸಿದ ಸಂಪ್ರಬಂಧ

(ಅಭಿವೃದ್ಧಿ ಅಧ್ಯಯನ)

ಸಂಶೋಧಕರು

ರವಿಚಂದ್ರ

ನೋಂದಣೆ ಸಂಖ್ಯೆ: ೧೪೧೧೧೧೦೫೦೦೬೭

ಮಾರ್ಗದರ್ಶಕರು

ಡಾ. ದುಗ್ಗಪ್ಪ ಕಜೆಕಾರ್

೨೦೧೫

ಕರ್ನಾಟಕ ಥಿಯೋಲಾಜಿಕಲ್ ಸಂಶೋಧನ ಕೇಂದ್ರ

ಬಲ್ಮಠ, ಮಂಗಳೂರು ೫೭೫೦೦೧

ಮಹಿಳಾ ಸಹಕಾರಿ ಸಂಘದಿಂದ ಮಹಿಳಾ ಸಬಲೀಕರಣ

ಕುಂದಾಪುರ ತಾಲೂಕು ಒಂದು ಅಧ್ಯಯನ

ಎಂ. ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರ

ಪಡಿಸಿದ ಸಂಪ್ರಬಂಧ

(ಅಭಿವೃದ್ಧಿ ಅಧ್ಯಯನ)

ಸಂಶೋಧಕರು

ರವಿಚಂದ್ರ

ನೋಂದಣೆ ಸಂಖ್ಯೆ: ೧೪೧೧೧೧೦೩೦೦೬೭

ಮಾರ್ಗದರ್ಶಕರು

ಡಾ. ದುಗ್ಗಪ್ಪ ಕಜೆಕಾರ್

೨೦೧೫

ಕರ್ನಾಟಕ ತಿಯೋಲಾಜಿಕಲ್ ಸಂಶೋಧನ ಕೇಂದ್ರ

ಬಲ್ಮಠ, ಮಂಗಳೂರು ೫೭೫೦೦೧

ಯೋಗ್ಯತಾ ಪತ್ರ

ರವಿಚಂದ್ರ ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಮಹಿಳಾ ಸಹಕಾರಿ ಸಂಘದಿಂದ ಮಹಿಳಾ ಸಬಲೀಕರಣ ಕುಂದಾಪುರ ತಾಲೂಕು ಒಂದು ಅಧ್ಯಯನ ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್ ಪದವಿ ಪ್ರಾಪ್ತಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕೆಂದು ಸಿದ್ಧಪಡಿಸಿದ್ದಾರೆ. ಈ ಸಂಪ್ರಬಂಧವು ಸಂಶೋಧಕರ ಸ್ವಂತ ಪರಿಶ್ರಮ,ವಿಶ್ಲೇಷಣೆ,ಅಭಿಪ್ರಾಯ ಸಂಗ್ರಹ ಮತ್ತು ಸಂಶೋಧನೆಯ ಫಲ ಸ್ವರೂಪವಾಗಿದೆ. ಇವರು ಈ ಸಂಪ್ರಬಂಧವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇನ್ನಿತರ ಉದ್ದೇಶಗಳಿಗಾಗಿಯಾಗಲಿ ಬಳಸಿಕೊಂಡಿಲ್ಲ.

ಸ್ಥಳ : ಮಂಗಳೂರು

ದಿನಾಂಕ : 23-07-2015

ಡಾ.ದುಗ್ಗಪ್ಪ ಕಜೆಕಾರ್

ಸಂಶೋಧನಾ ಮಾರ್ಗದರ್ಶಕರು

ಕರ್ನಾಟಕ ಥಿಯೋಲಾಜಿಕಲ್

ಸಂಶೋಧನ ಕೇಂದ್ರ ಬಲ್ಮಠ

ಮಂಗಳೂರು

Dr. DUGGAPPA KAJEKAR
Co-ordinator
Department of P.G. Studies in Social Work
Govt. First Grade College
Thenkanidiyur, Udupi - 576 106

ಪ್ರಮಾಣ ಪತ್ರ

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ.ಫಿಲ್ ಪದವಿಗಾಗಿ ಸಾದರ ಪಡಿಸಿದ ಮಹಿಳಾ ಸಹಕಾರಿ ಸಂಘದಿಂದ ಮಹಿಳಾ ಸಬಲೀಕರಣ ಕುಂದಾಪುರ ತಾಲೂಕು ಒಂದು ಅಧ್ಯಯನ ಎಂಬ ಈ ಸಂಪ್ರಬಂಧವು ನನ್ನ ಸ್ವಂತ ಕೃತಿಯಾಗಿದ್ದು ವಿಶ್ಲೇಷಣೆ ಮತ್ತು ಅಧ್ಯಯನದ ಫಲ ಶ್ರುತಿಯಾಗಿದೆ. ಕರ್ನಾಟಕ ತಿಯೋಲಾಜಿಕಲ್ ಸಂಶೋಧನಾ ಕೇಂದ್ರದಲ್ಲಿ ಡಾ.ದುಗ್ಗಪ್ಪ ಕಜೆಕಾರ್ ಅವರ ಮಾರ್ಗದರ್ಶನದಲ್ಲಿ ಸಿದ್ದಪಡಿಸಿದ ಈ ಸಂಪ್ರಬಂಧವನ್ನು ಬೇರಾವುದೇ ಪದವಿ, ಡಿಪ್ಲೋಮಾ ಅಥವಾ ತತ್ವಮಾನ ಉಪಾಧಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಬಿಡಿಯಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ದೃಢಪಡಿಸುತ್ತೇನೆ.

ಸ್ಥಳ: ಮಂಗಳೂರು

ದಿನಾಂಕ: 23-07-2015

ರವಿಚಂದ್ರ

ಸಂಶೋಧಕರು

ಕರ್ನಾಟಕ ತಿಯೋಲಾಜಿಕಲ್

ಸಂಶೋಧನ ಕೇಂದ್ರ ಬಲ್ಮಠ

ಮಂಗಳೂರು.

ಮಹಿಳಾ ಸಹಕಾರಿ ಸಂಘದಿಂದ ಮಹಿಳಾ ಸಬಲೀಕರಣ

ಕುಂದಾಪುರ ತಾಲೂಕು - ಒಂದು ಅಧ್ಯಯನ

ಅಧ್ಯಯನದ ವಿವರಗಳು

ಅಧ್ಯಾಯ: ೧

ಸಹಕಾರ ಮತ್ತು ಸಹಕಾರ ತತ್ವ

ಅಧ್ಯಾಯಗಳು: ೧

ಸಹಕಾರ ಮತ್ತು ಸಹಕಾರ ತತ್ವ

೧.೧: ಪೀಠಿಕೆ

ಸಹಕಾರ ಎಂಬುವಂತದ್ದು ಭೂಮಿಯ ಉಗಮದೊಂದಿಗೆ ಪ್ರಕೃತಿ ದತ್ತವಾಗಿ ಬಂದಿರುವಂತದ್ದು ಎನ್ನಬಹುದು. ಸಹಕಾರವೆಂಬುವುದು ಸಾಮಾನ್ಯವಾಗಿ ಪ್ರಾಣಿ ಪಕ್ಷಿಗಳಲ್ಲಿ ಮಾತ್ರವಲ್ಲದೇ ಮನುಷ್ಯನ ಜೀವನದಲ್ಲಿ ಅತೀ ಅವಶ್ಯವಾಗಿವೆ. ಅಂದರೆ ಜೇನು ಹುಳುಗಳು ಪರಸ್ಪರ ಒಗ್ಗಟ್ಟಿನಿಂದ ದುಡಿದು ತಮ್ಮ ಆಹಾರವನ್ನು ತಾವೇ ತಯಾರಿಸುತ್ತವೆ. ಅದೇ ರೀತಿಯಾಗಿ ಇರುವೆಗೆ ತನಗೆ ಬೇಕಾದ ಆಹಾರ ವಸ್ತುವನ್ನು ಬೇರೆ ಇರುವೆಗಳ ಸಹಕಾರದಿಂದ ಎಳೆದುಕೊಂಡು ಬಂದು ಒಗ್ಗಟ್ಟಿನಲ್ಲಿ ಬಲವಿದೆ ಎನ್ನುವ ನುಡಿಯಂತೆ ಪರಸ್ಪರ ಸಹಕಾರದಿಂದ ತಮ್ಮ ಬದುಕನ್ನು ಸಾಗಿಸುತ್ತವೆ. ಅಂದರೆ ಸಹಕಾರವು ಮನುಷ್ಯನಲ್ಲಿ ಮತ್ರವಲ್ಲದೆ ಪ್ರಾಣಿ ಪಕ್ಷಿಗಳಲ್ಲಿ ಅಗತ್ಯವಿರುತ್ತವೆ ಎಂದು ತಿಳಿಯಬಹುದು.

ಮನುಷ್ಯನು ಆರ್ಥಿಕವಾಗಿ ಸಾಮಾಜಿಕವಾಗಿ ಸಬಲರಾಗಬೇಕಾದರೆ ತನ್ನ ಒಬ್ಬನಿಂದಲೇ ಸಾದ್ಯವಿಲ್ಲ,ಇನ್ನೊಬ್ಬರ ಸಹಾಯ ಪಡೆಯಲೇಬೇಕಾಗುತ್ತದೆ. ಹಾಗೆಯೇ ಶ್ರೀಮಂತನಾದ ವ್ಯಕ್ತಿಗಳು ಒಂದಲ್ಲ ಒಂದು ಸಂದರ್ಭದಲ್ಲಿ ಬೇರೆಯವರ ಸಹಕಾರ ಪಡೆದು ತನ್ನ ಜೀವನವನ್ನು ಸಾದಿಸಬೇಕಾಗುತ್ತದೆ. ಅಂದರೆ ಸಹಕಾರವು ಇಂದಿನ ಸಮಾಜದಲ್ಲಿ ಬಹು ಮುಖ್ಯ ಕಾರ್ಯವನ್ನು ನಿರ್ವಹಿಸುತ್ತದೆ. ಹೀಗೆ ಮನುಷ್ಯನು ಪುರಾತನ ಕಾಲದಲ್ಲಿ ವಸ್ತುಗಳ ವಿನಿಮಯದಿಂದ ತನಗೆ ಬೇಕಾದ ಅಗತ್ಯ ವಸ್ತುಗಳನ್ನು ಬೇರೆಯವರಿಂದ ಪಡೆಯುತ್ತಿದ್ದಂತೆ ಕಾಲಕ್ರಮೇಣ ಹಣದ ಚಲಾವಣೆಯು ವಸ್ತುಗಳನ್ನು ಕೊಂಡುಕೊಳ್ಳುವಲ್ಲಿ ಪ್ರಮುಖವಹಿಸಿತು.ಅಂದರೆ ಕೈಯಲ್ಲಿ ಹಣವಿದ್ದರೆ ತನಗೆ ಬೇಕಾದ ಯಾವುದೇ ವಸ್ತುವನ್ನು ಕೊಂಡುಕೊಳ್ಳಬಹುದಾಯಿತು. ಕಾಲಕ್ರಮೇಣ ಹಣದ ಬೆಳವಣಿಗೆಯ ವಸ್ತುಗಳ ಉತ್ಪಾದನೆ,ಮಾರಾಟ, ಖರೀದಿ ಹೀಗೆ ಆರ್ಥಿಕವಾಗಿ, ಸಾಮಾಜಿಕವಾಗಿಯೂ ಸಬಲನಾಗಲು ಸಾದ್ಯವಾಗುವಂತೆ ಮಾಡಿತು.

ಆರ್ಥಿಕವಾಗಿ ಹಿಂದುಳಿದ ಜನರು ತಮಗೆ ಬೇಕಾದ ವಸ್ತುಗಳನ್ನು ಕೊಂಡುಕೊಳ್ಳಲು ಅಸಮರ್ಥರಾದಗ ಅವರ ನೆರವಿಗೆ ಸಹಕಾರ ಚಳುವಳಿಗಳು ಸಹಾಯಕವಾದವು. ಸಹಕಾರ ಚಳುವಳಿಗಳ ಮೂಲಕ ಮನುಷ್ಯನಿಗೆ ಬೇಕಾದ ವಸ್ತುಗಳನ್ನು ಉತ್ಪಾದಿಸಲು,ಖರೀದಿಸಲು ಗುಡಿಕೈಗಾರಿಕೆಗಳ ಅಭಿವೃದ್ದಿಗೂ ಸಹಕಾರ ಚಳುವಳಿಗಳ ಮೂಲಕ ಆರ್ಥಿವಾಗಿ ಸದೃಡ ವಾಗುವಂತೆ ಮಾಡಲಾಯಿತು. ಈ ಸಹಕಾರ ಚಳುವಳಿಗಳು ಸಮಾಜದಲ್ಲಿದ್ದ ಸಾಹುಕಾರ ದಲ್ಲಾಳಿಗಳು ಎನ್ನುವ ವರ್ಗವನ್ನು ಮುಕ್ತಿಗೊಳಿಸಿ ತಾವೇ ವಸ್ತುಗಳನ್ನು ಉತ್ಪಾದಿಸಿ ತಮ್ಮ ಆರ್ಥಿಕ ಸ್ಥಿತಿ ಮತ್ತು ಜೀವನ ಮಟ್ಟವನ್ನು ಸುದಾರಿಸಲು ಸಾದ್ಯವಾಯಿತು ಮತ್ತು ಸಹಕಾರ ಚಳುವಳಿಯ ಮುಖ್ಯ ಗುರಿ ಮತ್ತು ಉದ್ದೇಶವಾಯಿತು.

ಸಹಕಾರ ಎನ್ನುವ ಪದಕ್ಕೆ ಬೇರೆ ಬೇರೆ ರೀತಿಯಾದ ಅರ್ಥವಿದೆ. ಅಂದರೆ ಅದು ವಿಶಾಲ ಅರ್ಥವನ್ನು ಹೊಂದಿದೆ. ಸರ್ವ ಸದಸ್ಯರ ಹಕ್ಕು ಬಾದ್ಯತೆಗಳನ್ನು ಕಾರ್ಯತತ್ಪರತೆಯಲ್ಲಿ ರಚನಾತ್ಮಕವಾಗಿ ನೆಡೆಸುವುದೇ ಸಹಕಾರ. ಸ; ಎಂದರೆ

ಸರ್ವಸದಸ್ಯರ ಹ;ಎಂದರೆ ಹಕ್ಕು ಬಾದ್ಯತೆಗಳನ್ನು ಕಾ;ಎಂದರೆ ಕಾರ್ಯ ತತ್ವರತೆಯಲ್ಲಿ ರ;ಎಂದರೆ ರಚನಾತ್ಮಕವಾಗಿರುವುದೇ ಸಹಕಾರ (ಬಸವಾ ಕೆ.ಡಿ ೧೯೮೫) [೧]

ದಿವಾನ್ ಬಹದ್ದೂರ್ ಎಚ್. ಎಲ್ ಶಾಜಿರವರು ಸಹಕಾರ ಸಂಘವನ್ನು ಈ ಕೆಳಗಿನಂತೆ ಹೇಳಿದ್ದಾರೆ. ಆರ್ಥಿಕ ಮುಗ್ಗಟ್ಟನ್ನು ಎದುರಿಸಿದ ಕೆಲವು ಜನರು ತಮ್ಮ ಸ್ಥಾನಗಳನ್ನು ಭದ್ರಪಡಿಸಿಕೊಳ್ಳಬೇಕೆಂದೂ ತಮ್ಮ ಆರ್ಥಿಕ ಸ್ಥಿತಿಯನ್ನು ಸುದಾರಿಸಿಕೊಳ್ಳಬೇಕೆಂದೂ ನಿರ್ದರಿಸಿ ಆ ಉದ್ದೇಶ ಸಾಪಲ್ಯಕ್ಕಾಗಿ ಉತ್ಪಾದನೆ,ವಿವರಣೆ, ವಿನಿಮಯ ಮೊದಲಾದ ಆರ್ಥಿಕ ಕ್ರಮಗಳನ್ನು ಅನುಸರಿಸುತ್ತಾರೆ. ಈ ರೀತಿಯಲ್ಲಿ ದೊರಕಿದ ಲಾಭವನ್ನು ಸಮಾನಾಗಿ ಹಂಚಿಕೊಳ್ಳುತ್ತಾರೆ. ಹೀಗೆ ರಚಿಸಿಕೊಂಡ ಸಂಸ್ಥೆಗೆ ಸಹಕಾರಿ ಸಂಘವೆಂದು ಕರೆಯುವರು. (ಹರಕರ ಕಡೂರ್ ೧೯೭೯)[೨]

ಒಬ್ಬ ಎಲ್ಲಾರಿಗೂ ,ಎಲ್ಲಾರು ಒಬ್ಬರಿಗಾಗಿ ಇದು ಸಹಕಾರದ ತಿರುಳು,ಸಂಘದ ಸದಸ್ಯರಲ್ಲಿ ಮಿತಿವ್ಯಯ ಉಳಿತಾಯ ,ಸ್ವಸಹಾಯ ಮತ್ತು ಸಹಕಾರಿ ಮನೋಭಾವನೆಯನ್ನು ಉಂಟು ಮಾಡುವುದೇ ಅದರ ಸಾಮಾನ್ಯ ಉದ್ದೇಶವಾಗಿವೆ.

ಸಹಕಾರ ಎಂದರೆ ಜನರು ತಮ್ಮ ಸ್ವಾರ್ಥವನ್ನು ಮರೆತು ಒಗ್ಗೂಡಿ ಪರಸ್ಪರರ ಹಿತ್ತಾಶಕ್ತಿಗಳನ್ನು ಕಾಪಾಡಲು ಸಾಂಘಿಕವಾಗಿ ಪ್ರಯತ್ನಿಸುವ ಒಂದು ವ್ಯವಸ್ಥೆಯಾಗಿದೆ. ತಮ್ಮ ಆರ್ಥಿಕ ಹಿತ್ತಾಶಕ್ತಿಗಳನ್ನು ಕಾಪಾಡಲು ಜನರು ಸಮಾನತೆಯ ಆಧಾರದ ಮೇಲೆ ಸ್ವ ಇಚ್ಚೆಯಿಂದ ಸಂಘಟಿತರಾಗುವುದೇ ಸಹಕಾರಿ ಸಂಘ. ತಾನು ಎಲ್ಲರಿಗಾಗಿ,ಎಲ್ಲಾರೂ ತನಗಾಗಿ ಎಂಬುದು ಸಹಕಾರದ ಮೂಲ ತತ್ವವಾಗಿದೆ.(ಕೃಷ್ಣಮೂರ್ತಿ ೨೦೦೨)[೩]

ಸಹಕಾರವು ಪ್ರಜಾಪ್ರಭುತ್ವದ ತಳಹದಿಯ ಮೇಲೆ ನಿಂತಿದೆ.ಪರಸ್ಪರರ ಸಹಾಯಕ್ಕಾಗಿ ಸಾಮಾಜಿಕ,ಆರ್ಥಿಕ ಹಾಗೂ ಸಾಂಸ್ಕೃತಿಕ ಹಿತಸಾಧನೆಗೆ ಒಗ್ಗೂಡುವ ಜನತೆಯ ಬಂದು ಸಂಘಟನೆಯಾಗಿದ್ದು ಅದು ಅವರ ಬೇಡಿಕೆಗಳನ್ನು ಈಡೇರಿಸುವ ಗುರಿ ಹೊಂದಿದ್ದು ಇದರ ಉತ್ಪಾದನೆ ಮತ್ತು ವಿತರಣೆ ಲಾಭದ ದೃಷ್ಟಿಗೆ ಬದಲಾಗಿ ಸದಸ್ಯರ ಸೇವಾ ದೃಷ್ಟಿಯಿಂದ ಕೂಡಿರುತ್ತದೆ.ಇದನೇ ಸಹಕಾರ ಎನ್ನಲಾಗುತ್ತದೆ.

ನಾವು ನಿಮಗಾಗಿ,ನೀವು ನಮಗಾಗಿ,ಎಲ್ಲರೂ ಎಲ್ಲರಿಗಾಗಿ ಈ ತತ್ವವು ಪ್ರಪಂಚದಲ್ಲೆಡೆಯೂ ಪ್ರಚಲಿತವಾಗಿರುವ ಅತೀ ಶ್ರೇಷ್ಠವಾದ ಸಹಕಾರ ತತ್ವವಾಗಿದೆ.ಇದರ ಮಹತ್ವವನ್ನು ಅರಿತ ನಮ್ಮ ಪೂರ್ವಜರು ''ಸರ್ವೆ ಜನಾಃ ಸುಖಿನೋ ಭವಂತು'' ಎಂಬ ಪ್ರಾರ್ಥನೆಗೆ ಆದ್ಯತೆ ನೀಡಿರುವುದನ್ನು ಗಮನಿಸಬಹುದು.ನಮ್ಮ ಸಮಾಜ ವ್ಯವಸ್ಥೆಯೂ ಈ ತತ್ವದ ಮೇಲೆ ನಿಂತಿದೆ.ಶೋಷಣೆರಹಿತವಾದ ಹಾಗೂ ಸುಖ,ಶಾಂತಿ,ನೆಮ್ಮದಿಯ ಸಮಾಜದ ಗುರಿ ಸಾಧಿಸಲು ಸಹಕಾರವೇ ಸಾಧನವಾಗಿದೆ.ಇದನ್ನು ಈಗಿನ ಆಧುನಿಕ ಯುಗದಲ್ಲಿಯೂ ಅಲ್ಲಗಳೆಯುವಂತಿಲ್ಲ ಪ್ರಪಂಚದಲ್ಲಿ ಸಹಕಾರದ ಮಹತ್ವವನ್ನು ಅರಿತ ಅನೇಕ ದೇಶದ ಪ್ರತಿನಿಧಿಗಳು ಅಂತರಾಷ್ಟ್ರೀಯ ಸಹಕಾರ ಮೈತ್ರಿಕೂಟವನ್ನು ರಚಿಸಿದ್ದಾರೆ ಮತ್ತು ಸಹಕಾರ ಯಶಸ್ವಿಗಾಗಿ ನೆಡೆಯುವುದಕ್ಕೆ ಅನೇಕ ನೀತಿ ಸೂತ್ರಗಳನ್ನು ರಚಿಸಿದ್ದಾರೆ.ಅದರಲ್ಲಿ ಪ್ರಜಾಪ್ರಭುತ್ವ ಎಂಬುದು ಬಂದು ಸೂತ್ರವಾಗಿದೆ. ನಮ್ಮ ದೇಶದಲ್ಲಿ ಸ್ವಾತಂತ್ರ್ಯದ ನಂತರ ಉತ್ತಮ ಆಡಳಿತ ಪದ್ದತಿಯನ್ನು ಅಂಗೀಕರಿಸುವುದು

ಸಮಾಜಕ್ಕೆ ಒಂದು ವರದಾನವಾಗಿದೆ. ಹೀಗೆ ದೇಶದ ಆಡಳಿತ ಹಳ್ಳಿಯ ಪಂಚಾಯಿತಿನಿಂದ ದೆಹಲಿಯ ಪಾರ್ಲಿಮೆಂಟನವರೆಗೆ ಪ್ರಾಜಾಪ್ರಭುತ್ವ ಆಡಳಿತ ಇರುವುದನ್ನು ನಾವು ನೋಡಬಹುದು.

ಭಾರತದ ವಿಶಾಲವಾದ ದೇಶಕ್ಕೆ ಸಹಕಾರ ಚಳುವಳಿ ಒಂದು ವರದಾನವಾಗಿದೆ ಎಂದರೆ ತಪ್ಪಾಗಲಾರದು.ಸಹಕಾರ ಸಂಘಕ್ಕಿರುವುದು ಹಣ ಬಲವಲ್ಲ ಜನ ಬಲ,ಎಂತಹ ಜನಬಲ ಪರಸ್ಪರ ವಿಶ್ವಾಸದಿಂದ ಒಟ್ಟುಗೂಡಿ ಎಲ್ಲರ ಹಿತದಷ್ಟಿಯಿಂದ ಕೆಲಸ ಮಾಡುವ ಜನಬಲ,ಸಹಕಾರದ ಮುಖ್ಯ ಉದ್ದೇಶ ಸದಸ್ಯರ ಆರ್ಥಿಕ ಅಭಿವೃದ್ಧಿ ಸಾಧಿಸುವುದಾಗಿದೆ.ಸಹಕಾರದಲ್ಲಿ ಪ್ರಜಾಪ್ರಭುತ್ವ ಪದ್ದತಿಯ ಆಡಳಿತ ಇರಬೇಕಾದ ನೀತಿಯಂತೆಯೇ ಪ್ರಜಾಪ್ರಭುತ್ವ ಪದ್ದತಿ ದೇಶದ ಆಡಳಿತದ ಯಶಸ್ವಿಗೆ ಸಹಕಾರವು ಅಗತ್ಯವಿದೆ.

೧.೨: ಸಹಕಾರ ಚಳುವಳಿಯ ಉಗಮ ಮತ್ತು ಅಭಿವೃದ್ಧಿ

ಜಗತ್ತಿನ ಇತಿಹಾಸದಲ್ಲಿ ಸಹಕಾರಿ ಆಂದೋಲನಕ್ಕೆ ಸುಮಾರು ಒಂದೂವರೆ ಶತಮಾನದ ಇತಿಹಾಸವಿದೆ.ಸ್ವಸಹಾಯಕ್ಕಾಗಿ ಕೂಡಿಕೊಳ್ಳುವ ವ್ಯಕ್ತಿಗಳನ್ನು ಸಂಘಟಿಸುವುದಕ್ಕೆ ಇರುವ ಸಾಂಸ್ಕೃತಿಕ ಚೌಕಟ್ಟನ್ನು ಒಳಗೊಂಡಿರುವ ಸಹಕಾರ ಚಳುವಳಿಯ ಉಗಮಸ್ಥಾನ ಬ್ರಿಟನ್ (ರಂಗಸ್ವಾಮಿ ೨೦೧೦)[೪] ಹದಿನೆಂಟನೇ ಶತಮಾನದಲ್ಲಿ ಬ್ರಿಟನ್‌ನಲ್ಲಿ ಉಂಟಾದ ಕೈಗಾರಿಕಾ ಕ್ರಾಂತಿಯಿಂದಾಗಿ ಅಲ್ಲಿನ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿ ಗತಿಗಳಲ್ಲಿ ಮಹತ್ತರ ಬದಲಾವಣೆಗಳಾದವು ಯಂತ್ರಯುಗದ ಪ್ರಾರಂಭದಿಂದಾಗಿ ಕಾರ್ಮಿಕರಲ್ಲಿ ನಿರುದ್ಯೋಗ,ಹಸಿವು ಬಡತನ ತಾಂಡವಾಡುತ್ತಿತ್ತು. ಇಲ್ಲಿ ಕೃಷಿಕರು,ಕೂಲಿಕಾರ್ಮಿಕರು ವಿಶೇಷವಾಗಿ ಬಡಜನರು ಶೋಷಣೆಗೆ ಒಳಗಾದರು ರಾಬರ್ಟ್ ಒವೆನ್ ರಂತಹ ವಿಚಾರವಾದಿಗಳು ಬಂಡವಾಳ ಶಾಹಿಯ ಶೋಷಣೆಯನ್ನು ತಪ್ಪಿಸುವುದಕ್ಕಾಗಿ ಸಹಕಾರ ವಿಚಾರವನ್ನು ಪ್ರತಿಪಾದಿಸಿದರು.ಇದೇ ಬ್ರಿಟನ್‌ನಲ್ಲಿ ಸಹಕಾರ ಚಳುವಳಿಗೆ ನಾಂದಿಯಾಯಿತು.(ಹಗ್ ಇ.ಎಮ್ ೧೯೯೧) [೫] ಸಹಕಾರ ಪ್ರಕ್ರಿಯೆಯು ಮಾಪನದ ಜೊತೆ ಜೊತೆಯಲ್ಲಿ ಹುಟ್ಟಿ ಬಂದಿದೆಯಾದರೂ ಸಹಕಾರ ಚಳುವಳಿಯು ಇತ್ತೀಚಿನ ಶತಮಾನದಲ್ಲಿ ಅದಿಕೃತವಾಗಿ ಬೆಳೆದು ಬಂದಿರುವುದಾಗಿದೆ. ಇದಕ್ಕೆ ಪ್ರಮುಖ ಕಾರಣಕರ್ತರಾದ ಬ್ರಿಟಿನ್‌ನ ರಾಬರ್ಟ್ ಒವೆನ್‌ರವರನ್ನು ಸಹಕಾರ ಚಳುವಳಿ ಅಥವಾ ಆದೋಲನದ 'ಪಿತಾಮಹ' ಎಂಬುದಾಗಿ ಕರೆಯುತ್ತೇವೆ.(ನಂಜೇಶ್ ಚಿಂಚನಕರ್ ೧೯೭೫)[೬].ರಾಬರ್ಟ್ ಒವೆನ್‌ರವರು ಒಂದು ಸಾಮಾನ್ಯ ಬಡ ಕುಟುಂಬದಲ್ಲಿ ಜನಿಸಿದರು.ತನ್ನ ಒಂಭತ್ತನೇ ವಯಸ್ಸಿಗೆ ಬಾಲಕಾರ್ಮಿಕವಾಗಿ ಕೆಲಸಕ್ಕೆ ಸೇರಿ ಪರಿಶ್ರಮದಿಂದ ದುಡಿಯಬೇಕಾಯಿತು.ಆದುದರಿಂದ ಅವರಿಗೆ ಸಣ್ಣ ವಯಸ್ಸಿನಲ್ಲಿಯೇಜನರ ಕಷ್ಟದ ಅರಿಯಾಯಿತು.ಕಾಲ ಕ್ರಮೇಣ ಅವರ ಒಳ್ಳೆತನ,ಜಾಣ್ಮೆ,ಸಾಹಸ,ಪ್ರವೃತ್ತಿಯಿಂದಾಗಿ ನೂರಾರು ಮಂದಿಕಾರ್ಮಿಕರಿರುವ ನೂಲಿನ ಗಿರಣಿಯೊಂದರ ಮಾಲೀಕರಾದರು. ತನ್ನ ಕಾರ್ಮಿಕರ ಅನುಕೂಲಕ್ಕಾಗಿ ಹತ್ತು ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದರು.ಬ್ರಿಟನ್‌ನ ಇತರ ಗಿರಣಿ ಮಾಲೀಕರನ್ನು ತನ್ನಂತೆಯೇ ಕಾರ್ಮಿಕರಿಗೆ ಸಕಲ ಸೌಕರ್ಯ ಕಲ್ಪಿಸಿಕೊಡುವಂತೆ ಮನವೊಲಿಸುವ ಪ್ರಯತ್ನ ಮಾಡಿ ಸೋಲುತ್ತಾರೆ,ಆದ್ದರಿಂದ ಸಹಕಾರಿ ಗ್ರಾಮಗಳನ್ನು ಸ್ಥಾಪಿಸಿ ಅವುಗಳ ಮೂಲಕ ಎಲ್ಲಾ ಕಾರ್ಮಿಕ ವರ್ಗದವರಿಗೂ ಅನುಕೂಲ ಮಾಡುವಂತೆ ಸಹಕಾರ ಮತ್ತು ಸಂಸತ್ ಸದಸ್ಯರುಗಳನ್ನು ಕೇಳಿಕೊಳ್ಳುತ್ತಾರೆ.ಇವೆಲ್ಲ ಕಾರಣಗಳಿಂದಾಗಿ ಅವರನ್ನು ಇಂಗ್ಲೇಂಡಿನ ಸಮಾಜವಾದದ ಹಾಗೂ ಸಹಕಾರ ಮೂಲ ಪುರುಷವೆಂದು ಪರಿಗಣಿಸಲಾಗುತ್ತದೆ.ರಾಬರ್ಟ್ ಒವೆನ್‌ರವರು ಸಹಕಾರ ಚಳುವಳಿಯು

ಶಕ್ತಿಶಾಲಿಯಾಗಿ ಕೆಲಸ ಮಾಡುತ್ತದೆ ಎಂದು ನಂಬಿದ್ದರು ಹಾಗೂ ಅದರಂತೆ ಕೆಲಸ ಮಾಡುತ್ತಿದ್ದರು.ಬ್ರಿಟನ್‌ನಲ್ಲಿ ಪ್ರಾರಂಭವಾದ ಈ ಸಹಕಾರ ಚಳುವಳಿಯು ವಿಶ್ವದ ವಿವಿಧ ರಾಷ್ಟಗಳಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದೆ.ಇದು ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಮುಂತಾದ ಬಹುಮುಖ ಕಾರ್ಯಗಳನ್ನು ನಿರ್ವಹಿಸುತ್ತ ಅಭಿವೃದ್ದಿ ಚಟುವಟಿಕೆಗಳಗೆ ಪೂರಕವಾಗಿದೆ.ಎಂದು ಹೇಳಿದರೆ ತಪ್ಪಾಗಲಾರದು.ಪ್ರಪಂಚದಲ್ಲಿ ಸಹಕಾರವು ನಾಗರೀಕತೆಯ ಉಗಮದೊಂದಿಗೆ ಅಸ್ತಿತ್ವದಲ್ಲಿದ್ದರೂ ಅದು ತನ್ನದೇ ಆದ ಸ್ವರೂಪವನ್ನು ಉತ್ತಮ ಪಡಿಸಿಕೊಂಡು ಯಶ್ವಸಿಯಾಗಲು ವಿವಿಧ ಕಾಲ ಘಟ್ಟಗಳಲ್ಲಿ ವಿವಿಧ ಮಜಲುಗಳಲ್ಲಿ ಬೆಳೆದು ಬಂದಿದೆ.ನಿಸರ್ಗದಲ್ಲಿ ಎಲ್ಲಾ ಜೀವಿಗಳು ಒಂದಕ್ಕೊಂದು ಸಹಬಾಳ್ವೆ ನೆಡೆಸುವಾಗ ತಮ್ಮದೇ ಆದ ತತ್ವಗಳನ್ನು ಅಳವಡಿಸಿಕೊಂಡಿರುತ್ತವೆ.ಇಂತಹದೇ ತತ್ವಗಳನ್ನು ಸಹಕಾರ ವ್ಯವಸ್ಥೆಯಲ್ಲಿ ಅಳವಡಿಸಿಕೊಂಡಿರುವುದು ಒಂದು ಸೂಕ್ತವಾದ ಸಂಗತಿಯಾಗಿದೆ.(ರಂಗಸ್ವಾಮಿ ೨೦೧೦) [೭]

ಸಹಕಾರದಿಂದಾಗಿ ವ್ಯಕ್ತಿಯೊಬ್ಬನ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವೃದ್ದಿಯಾಗುವುದು.ಮಾತ್ರವಲ್ಲದೆ ಗ್ರಾಮೀಣ ಅಭಿವೃದ್ದಿಗೂ ಪೂರಕವಾಗಿದೆ.ಶೋಷಣೆಗೊಳಗಾದ ವ್ಯಕ್ತಿಯು ತನ್ನ ಸ್ವಸಾಮರ್ಥ್ಯ ಬೆಳೆಸಲು ಸಹಾಯಕವಾಗುತ್ತದೆ.ಸಹಕಾರ ಸಂಘದಲ್ಲಿ ಸದಸ್ಯರು ಸಕ್ರೀಯವಾಗಿ ಪಾಲ್ಗೊಳ್ಳುವುದರ ಮೂಲಕ ಪ್ರಜಾಪ್ರಭುತ್ವದ ಉದ್ದೇಶ,ತತ್ವಗಳನ್ನು ಅರ್ಥಮಾಡಿಕೊಂಡು ಮುಂದೆ ಆ ದೇಶದ ಉತ್ತಮ ಪ್ರಜೆಯಾಗಲು ಅನುವು ಮಾಡಿಕೊಡುತ್ತದೆ.ಸಹಕಾರಿ ಸಂಘದಿಂದ ಆರ್ಥಿಕ ಅಭಿವೃದ್ದಿ ಹೇಗೆ ಸಾದ್ಯವೂ ಹಾಗೆಯೇ ರಾಷ್ಟೀಯ ಅಭಿವೃದ್ದಿಯೂ ಸಾಧ್ಯವಿದೆ.ಒಟ್ಟಾರೆಯಾಗಿ ಸಹಕಾರಿ ತತ್ವದಿಂದ ಆರ್ಥಿಕ,ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವೃದ್ದಿಯ ಜೊತೆಗೆ ರಾಷ್ಟದ ಅಭಿವೃದ್ದಿಯು ಸಾದ್ಯವಿದೆ ಎನ್ನಬಹುದು.

೧.೩: ಭಾರತದಲ್ಲಿ ಸಹಕಾರ ಚಳುವಳಿಯ ಉಗಮ ಮತ್ತು ಅಭಿವೃದ್ದಿ

ಇಂದು ದೇಶದಲ್ಲಿ ಎಲ್ಲಾ ಕ್ಷೇತ್ರದಲ್ಲಿಯೂ ಅಭಿವೃದ್ದಿಯು ಮಿಂಚಿನ ವೇಗದಲ್ಲಿದೆ.ವಿಜ್ಞಾನ,ತಂತ್ರಜ್ಞಾನದ ಅವಿರತ ಬೆಳೆವಣಿಗೆಯಿಂದ ವಿಶ್ವದಲ್ಲಿ ಭಾರತವು ಅನ್ಯರಾಷ್ಟೀಯರನ್ನು ನಿಬ್ಬೆರಗು ಆಗುವಂತೆ ಮಾಡಿದೆ. ಭಾರತವು ವಿಶ್ವದ ಏಳನೇಯ ದೊಡ್ಡ ರಾಷ್ಟವಾಗಿದ್ದು ಕೃಷಿಯು ಪ್ರಧಾನ ಕಸುಬಾಗಿದೆ. ಕೃಷಿಗೆ ಮಳೆಯನ್ನೇ ನಂಬಿರುವ ನಮ್ಮ ರೈತರ ಬದುಕು ಮಳೆಯೊಂದಿಗೆ ಜೂಜಾಟವಾಗಿದೆ ಎನ್ನಬಹುದು.ಕೃಷಿಯು ತುಂಡುಭೂಮಿಗಳಿಂದ ಕೂಡಿರುವುದರಿಂದ ದೊಡ್ಡ ಪ್ರಮಾಣದಲ್ಲಿ ಉತ್ಪಾದನೆ ಸಾದ್ಯವಾಗದೇ ಕೃಷಿಕರು ಸರಿಯಾದ ಬೆಳೆಯನ್ನು ಪಡೆಯಲಾಗದೇ ಕಷ್ಟ ನಷ್ಟಗಳನ್ನು ಅನುಭವಿಸುತ್ತಾರೆ.(ಶೆಟ್ಟರ್ ೧೯೬೬)[೮]

ಜನಸಾಮಾನ್ಯರು ತಮ್ಮ ಆರ್ಥಿಕ ಅಭಿವೃದ್ದಿಗಾಗಿ ಶ್ರೀಮಂತರ ಅಥವಾ ಲೇವಾದೇವಿದಾರದಿಂದ ಸಾಲ ಪಡೆಯುವ ಪರಿಪಾಠ ಬಹಳ ಹಿಂದಿನ ಕಾಲದಿಂದಲೂ ನೆಡೆದುಕೊಂಡು ಬಂದಿದೆ.ಬಿಟಿಷರು ಭಾರತಕ್ಕೆ ಬಂದ ನಂತರ ಜನರ ಆರ್ಥಿಕ ಪರಿಸ್ಥಿತಿಗಳು ಬಹಳಷ್ಟು ಬದಲಾವಣೆಗಳಾದವು.ಆರ್ಥಿಕ ಕ್ಷೇತ್ರದಲ್ಲಿ ಚಳುವಳಿಯೊಂದರ ಉಗಮವಾಯಿತು.ಅದೇ ಸಹಕಾರ ಚಳುವಳಿ ಸಾಮ್ರಾಜ್ಯಶಾಹಿ ವಿಸ್ತರಣೆಯ ಪರಿಣಾಮವಾಗಿ,ನಿರುದ್ಯೋಗ ಸಮಸ್ಯೆ ಹೆಚ್ಚಿ ಕೂಲಿ ಕಾರ್ಮಿಕರು,ಶ್ರೀಮಂತ ವರ್ಗದವರಿಂದ ಶೋಷಣೆಯನ್ನು ಅನುಭವಿಸಬೇಕಾಯಿತು.ಇದನ್ನು ತಪ್ಪಿಸುವ

ಸಲುವಾಗಿ ದಕ್ಷಿಣ ಭಾರತದ ರೈತರು ಪರಸ್ಪರ ಸಹಕಾರಕ್ಕಾಗಿ ೧೮೯೦ರಲ್ಲಿ ಚಳುವಳಿಯನ್ನು ಪ್ರಾರಂಭಿಸಿದರು. ಇದು ಜನರ ಬಡತನ,ಸಾಲದಲ್ಲಿಯೇ ಹುಟ್ಟಿ ಸಾಲದಲ್ಲಿಯೇ ಬೆಳೆದು ಸಾಲದಲ್ಲಿಯೇ ಸಾಯುವ ಜನರ ಪರವಾಗಿ,ದೀನ ದಲಿತರನ್ನು ಆರ್ಥಿಕವಾಗಿ ದುರ್ಬಲರಾಗಿರುವವರನ್ನು ಶೋಷಣೆ ಮಾಡುತ್ತಿರುವರನ್ನು ತಪ್ಪಿಸುವ ಸಲುವಾಗಿ ಈ ಚಳುವಳಿಗಳು ಪ್ರಾರಂಭವಾದವು.

ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ತಮ್ಮ ದೇಶದ ಉತ್ಪಾದನೆಗಳನ್ನು ಭಾರತೀಯರ ಮೇಲೆ ಹೇರುವ ಸಲುವಾಗಿ ಹಾಗೂ ಒಡೆದು ಆಳುವ ನೀತಿಯನ್ನು ಮಾಡುತ್ತಿದ್ದರು ಕೃಷಿಯನೇ ನಂಬಿರುವ ಭಾರತೀಯರು ಅದು ಸರಿಯಾದ ಫಲಕೊಡದೇ ಇರುವಾಗ ರೈತರ ಸ್ಥಿತಿ ಚಿಂತಾಜನಕವಾಯಿತು ಹಾಗೆಯೇ ಸಾಲವು ಹೆಚ್ಚುತ್ತಾ ಹೋಯಿತು(ಸ್ಯಾಂಡರ್ಸ್ ೧೯೮೭)[೯] ಈ ಕಾರಣಗಳಿಂದಾಗಿ ಸಹಕಾರಿ ಸಂಘಗಳನ್ನು ರಚಿಸಿ ರೈತರಿಗೆ ಕಡಿಮೆ ಬಡ್ಡಿದರದಲ್ಲಿ ಅಥವಾ ಬಡ್ಡಿರಹಿತ ಸಾಲಗಳನ್ನು ಕೊಡುವ ಯೋಜನೆಯು ಬಲಗೊಂಡಿತು.

ಭಾರತದಲ್ಲಿ ಸಹಕಾರ ಚಳುವಳಿಯ ಎರಡು ವಿಧಗಳಲ್ಲಿ ವಿಂಗಡಿಸಬಹುದು ಅವುಗಳೆಂದರೆ ಭಾರತೀಯ ಸ್ಥಳೀಯ ಸಹಕಾರ ಮತ್ತು ಸಹಕಾರವು ಪ್ರಾರಂಬಿಸಿದ ಸಹಕಾರ ಪದ್ದತಿ.ಪ್ರಾಚೀನ ಕಾಲದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಸ್ಥಳೀಯ ಸಹಕಾರ ಪದ್ದತಿಯು ಅಸ್ತಿತ್ವದಲ್ಲಿತ್ತು. ಅವರುಗಳು ನೇರೆ ಹೊರೆಯವರೊಂದಿಗೆ ತಾತ್ಕಲಿಕವಾಗಿ ಒಡವೆಗಳನ್ನು ತೆಗೆದುಕೊಳ್ಳುವುದು,ಕೊಡುವುದು,ಕೃಷಿ ಉಪಕರಣಗಳ ಸಹಾಯ ಪಡೆದು ಮತ್ತೇ ಹಿಂತಿರುಗಿಸುವುದು ಹೀಗೆ ಒಬ್ಬರ ಸಮಸ್ಯೆಗೆ ಇನ್ನೊಬ್ಬರು ತೋರಿಸುವ ಸಹಾನುಭೂತಿ ಬಂದು ಬಗೆಯ ಸಹಕಾರ ಪದ್ದತಿಯೆಂದು ಹೇಳಬಹುದು.ಅಂದರೆ ಕುಟುಂಬದ ಸದಸ್ಯರು,ನೆರೆಹೊರೆಯವರು ಪರಸ್ಪರ ಒಬ್ಬರೂಬ್ಬರು ಸಹಕಾರಿಗಳಾಗಿ ತಮ್ಮ ಊರಿನ ಕಾರ್ಯ ಕ್ರಮಗಳನ್ನು ಅಚ್ಚುಕಟ್ಟಾಗಿ ನೆಡೆಸಿಕೊಂಡು ಹೋಗುತ್ತಿದ್ದರು,ಹೀಗೆ ಆರ್ಥಿಕವಾಗಿ,ಸಾಮಾಜಿಕವಾಗಿ ಸಹಕಾರವು ಎದ್ದು ತೋರುತ್ತಿತ್ತು. ಅನೇಕ ಸಮಾಜ ಸುಧಾರಕರ ಪರಿಶ್ರಮ ಫಲವಾಗಿ ಭಾರತದಲ್ಲಿ ಸಹಕಾರಿ ಸಂಘಗಳ ಸ್ಥಾಪನೆಯ ಮಸೂದೆಯನ್ನು ಬ್ರಿಟನ್ನಿನ ಸಾಮಾನ್ಯ ಸಭೆಯಲ್ಲಿ ೧೯೦೧ರಲ್ಲಿ ಮಂಡಿಸಿದ ನಂತರ ಭಾರತದಲ್ಲಿ ಸಹಕಾರ ಸಂಘಗಳ ಪ್ರಾರಂಭಕ್ಕೆ ಅನುಮೋದನೆ ದೊರೆಯಿತು.ಭಾರತ ಸರ್ಕಾರವು ಕೈಗೊಂಡ ನಿರ್ಧಾರಗಳ ಫಲವಾಗಿ ೧೯೦೪ರಲ್ಲಿ ಸಹಕಾರ ಸಂಘಗಳ ಕಾನೂನು ಅನುಮೋದಿಸಲ್ಪಟ್ಟು ಜಾರಿಗೆ ಬಂದಿತು.

೧.೪: ಕರ್ನಾಟಕದಲ್ಲಿ ಸಹಕಾರಿ ಚಳುವಳಿಯ ಉಗಮ ಮತ್ತು ಬೆಳೆವಣಿಗೆ:

ಕರ್ನಾಟಕವು ಭಾರತದ ಸಹಕಾರಿ ಆಂದೋಲನದ ಜನ್ಮ ಭೂಮಿಯಾಗಿದೆ. ಭಾರತದಲ್ಲಿ ಇಂದು ಇರುವ ಅನೇಕ ರೀತಿಯ ಸಹಕಾರಿ ಸಂಘಗಳ ಜನ್ಮ ಭೂಮಿ ನಮ್ಮ ಕರ್ನಾಟಕವೇಯಾಗಿದೆ. ಆ ನಂತರ ದೇಶದಲ್ಲಿ ಸಹಕಾರಿ ಚಳುವಳಿಯು ವೇಗವನ್ನು ಪಡೆದುಕೊಂಡು ಎಲ್ಲಾ ರಾಜ್ಯಗಳಲ್ಲಿ ಅದರ ಅಗತ್ಯಗಳನ್ನು ಮನಗಂಡು ಸಹಕಾರಿ ಸಂಘಗಳನ್ನು ಸ್ಥಾಪಿಸಿದವು. ಕರ್ನಾಟಕವು ಸಹಕಾರಿ ಸಂಘಗಳ ಪ್ರಯೋಗಾಲಯದ ಹಾಗೆ ಆದ್ದರಿಂದ ಕರ್ನಾಟಕಕ್ಕೆ "ಭಾರತದ ಸಹಕಾರಿ ಆಂದೋಲನದ ತೊಟ್ಟಿಲು'' ಎಂದು ಕರೆಯಲಾಗಿದೆ.

ಸಹಕಾರ ಕ್ಷೇತ್ರದಲ್ಲಿ ರಾಜ್ಯವು ಅದ್ಭುತ ಬೆಳವಣಿಗೆಯನ್ನು ಕಂಡಿದೆ. ಸಹಕಾರ ಸಂಘಗಳು ರಾಜ್ಯದ ಸಾಮಾಜಿಕ, ಆರ್ಥಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿವೆ. ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ಕೃಷಿ ಹಾಗೂ ಸಂಬಂಧಿತ ಕ್ಷೇತ್ರದಲ್ಲಿ ಅಭಿವೃದ್ಧಿಗೆ ಸಹಕಾರಿಯಾಗಿವೆ. ಉದಾರೀಕರಣ ಮತ್ತು ಜಾಗತೀಕರಣದಿಂದ ಬದಲಾಗುತ್ತಿರುವ ಆರ್ಥಿಕ ಪರಿಸರದಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತವೆ ಎಂಬುದು ನಮ್ಮ ದೃಢವಾದ ನಂಬಿಕೆ.

ಸಹಕಾರ ಚಳುವಳಿಯು ಎಲ್ಲಾ ಅಭಿವೃದ್ಧಿ ಕ್ಷೇತ್ರಗಳಲ್ಲಿ ಬೃಹದಾಕಾರವಾಗಿ ವಿಸ್ತರಿಸಿದ್ದು, ಸಾಲ, ಮಾರುಕಟ್ಟೆ, ಗ್ರಾಹಕ, ರೇಷ್ಮೆ ಉದ್ಯಮ, ಹಾಲು ಉತ್ಪಾದನೆ, ಮೀನುಗಾರಿಕೆ, ತೋಟಗಾರಿಕೆ, ಸಕ್ಕರೆ, ಗೃಹ ನಿರ್ಮಾಣ, ಗೋದಾಮುಗಳ ನಿರ್ಮಾಣ ಇತ್ಯಾದಿ ಕ್ಷೇತ್ರಗಳಲ್ಲಿ ಪ್ರಭಾವ ಬೀರಿದೆ.

೧.೫: ದೂರದೃಷ್ಟಿ/ಮುನ್ನೋಟ

ಸದಸ್ಯರು ಸಹಕಾರ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸುವುದರ ಮೂಲಕ ಸಹಕಾರ ಸಂಘಗಳ ಬೆಳವಣಿಗೆ, ಸ್ವಾವಲಂಬನೆ, ಸ್ವಾಯತ್ತತೆ ಮತ್ತು ಆರ್ಥಿಕವಾಗಿ ಸಬಲತೆ ಹೊಂದುವಂತೆ ಸಂವರ್ಧನೆಗೊಳಿಸುವುದು ಹಾಗೂ ಉತ್ತೇಜಿಸುವುದು. ಸಹಕಾರ ಕ್ಷೇತ್ರದಲ್ಲಿ ರಾಜ್ಯವು ಅದ್ಭುತ ಬೆಳವಣಿಗೆಯನ್ನು ಕಂಡಿದೆ. ಸಹಕಾರ ಸಂಘಗಳು ರಾಜ್ಯದ ಸಾಮಾಜಿಕ, ಆರ್ಥಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿವೆ. ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ಕೃಷಿ ಹಾಗೂ ಸಂಬಂಧಿತ ಕ್ಷೇತ್ರದಲ್ಲಿ ಅಭಿವೃದ್ಧಿಗೆ ಸಹಕಾರಿಯಾಗಿವೆ. ಉದಾರೀಕರಣ ಮತ್ತು ಜಾಗತೀಕರಣದ ಬದಲಾಗುತ್ತಿರುವ ಆರ್ಥಿಕ ಪರಿಸರದಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತವೆ ಎಂಬುದು ನಮ್ಮ ದೃಢವಾದ ನಂಬಿಕೆ.

ಸಹಕಾರ ಚಳುವಳಿಯು ಎಲ್ಲಾ ಅಭಿವೃದ್ಧಿ ಕ್ಷೇತ್ರಗಳಲ್ಲಿ ಬೃಹದಾಕಾರವಾಗಿ ವಿಸ್ತರಿಸಿದ್ದು, ಸಾಲ, ಮಾರುಕಟ್ಟೆ, ಗ್ರಾಹಕ, ರೇಷ್ಮೆ ಉದ್ಯಮ, ಹಾಲು ಉತ್ಪಾದನೆ, ಮೀನುಗಾರಿಕೆ, ತೋಟಗಾರಿಕೆ, ಸಕ್ಕರೆ, ಗೃಹನಿರ್ಮಾಣ, ಗೋದಾಮುಗಳ ನಿರ್ಮಾಣ ಇತ್ಯಾದಿ. ಸಹಕಾರಿ ಬ್ಯಾಂಕುಗಳಲ್ಲಿ ಉತ್ತಮ ಆಡಳಿತ ನೀಡುವ ದೃಷ್ಟಿಯಿಂದ ಮಾಹಿತಿ ನಿರ್ವಹಣಾ ವ್ಯವಸ್ಥೆಯನ್ನು ಅಳವಡಿಸುವುದು.ಇದರ ಮೂಲಕ ಮಾಹಿತಿ ಯನ್ನು ಆಂತರಿಕ ಮತ್ತು ಬಾಹ್ಯ ವಿಷಯಗಳಿಗೆ ಸಂಬಂದಿಸಿದ್ದಂತೆ ಪಡೆದುಕೊಳ್ಳಲು ಸಾದ್ಯವಾಗಿದೆ. ಈ ವ್ಯವಸ್ಥೆಯ ಮೂಲಕ ಮಾಹಿತಿಯ ಸಂಗ್ರಹಣೆ, ವಿಶ್ಲೇಷಣೆ ಮಾಡುವುದರ ಮೂಲಕ ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳುದಕ್ಕೆ ಅತ್ಯಂತ ಬೇಗವಾಗಿ ಕಾರ್ಯಸಾಧನೆ ಮಾಡಬಹುದಾಗಿದೆ.

೧.೬: ಉದ್ದೇಶಗಳು

೧. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಬಲಪಡಿಸಲು ವ್ಯಾಪಾರ ಅಭಿವೃದ್ಧಿ ಯೋಜನೆಯನ್ನು ಅಳವಡಿಸಿ ಪರಿಣಾಮಕಾರಿಯಾಗಿ ಜಾರಿಗೊಳಿಸುವ ಮೂಲಕ ರೈತರಿಗೆ ಸುಲಭವಾಗಿ ಸಾಲ ತಲುಪಿಸುವ ವ್ಯವಸ್ಥೆಯನ್ನು ಬಲಪಡಿಸುವುದು.

೨. ಎಲ್ಲಾ ಗ್ರಾಮೀಣ ಸಹಕಾರಿ ಸಂಸ್ಥೆಗಳ ಎಲ್ಲಾ ಸದಸ್ಯರುಗಳಿಗೆ ಆರೋಗ್ಯ ರಕ್ಷಣೆ ಯೋಜನೆಯನ್ನು ವಿಸ್ತರಿಸುವುದು.

೩. ಸಹಕಾರ ಚಳುವಳಿಯಲ್ಲಿ ಮಹಿಳೆಯರು ಹಾಗೂ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗದವರು ಸಕ್ರಿಯವಾಗಿ ಪಾಲ್ಗೊಳ್ಳಲು ಉತ್ತೇಜಿಸುವುದು.

೪. ಜಿಲ್ಲಾ ಮಟ್ಟದಲ್ಲಿ ಸಹಕಾರ ಸಂಘಗಳಿಗೆ ಪೂರಕವಾಗುವಂತೆ ಸಮಗ್ರ ಅಭಿವೃದ್ಧಿಯ ಮೂಲಕ ಮೂಲಭೂತ ಸೌಕರ್ಯಗಳು ಮತ್ತು ಆರ್ಥಿಕ ಸ್ಥಿತಿಯನ್ನು ಬಲಪಡಿಸುವುದು.

೫. ಕಾರ್ಯ ಸಮರ್ಥತೆ ಸುಧಾರಿಸಲು ಕಛೇರಿ ನಿರ್ವಹಣಾ ವ್ಯವಸ್ಥೆಯನ್ನು ನಾಗರಿಕ ಸಮಾಜವು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಸ್ಥಾನಮಾನದಿಂದ ವಂಚಿತರಾಗಿರುವವರ ಕುರಿತ ಸವಾಲುಗಳನ್ನು ಎದುರಿಸುವುದು ಪ್ರಮುಖ ಸಮಸ್ಯೆಯಾಗಿರುತ್ತದೆ. ಸಾಮೂಹಿಕ ಪ್ರಯತ್ನಗಳಿಂದ ಈ ಸಮಸ್ಯೆಗಳನ್ನು ನಮ್ಮೊಳಗಿನಿಂದ ದೂರ ಮಾಡಬಹುದಾಗಿರುತ್ತದೆ. ಯಾವುದೇ ಸಂಘಟಿತ ವ್ಯವಸ್ಥೆಗಿಂತ ಅವಿರತ ಸಹಕಾರಿ ಅಭಿವೃದ್ಧಿ ಪ್ರಕ್ರಿಯೆ ಮೂಲಕ ವಂಚಿತರಾದವರ ಸಂಘಟನೆ ಮಾಡಿ ಮಾನವ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಸಮಸ್ಯೆಗಳನ್ನು ನಿವಾರಿಸಿಕೊಳ್ಳಬಹುದಾಗಿರುತ್ತದೆ. ಈ ಪ್ರಕ್ರಿಯೆಯು ಹೊಂದಿಕೊಳ್ಳುವ ಮಾನವ ಸ್ವಭಾವಕ್ಕೆ ಪೂರಕವಾಗಿದ್ದು ಮಹತ್ವದ್ದಾಗಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ಸಹಕಾರಿ ನಿರ್ವಹಣೆಗೆ ಈ ತತ್ವವು ತಳಹದಿಯಾಗಿದ್ದು, ಸ್ವಸಾಮರ್ಥ್ಯವನ್ನು ಹೆಚ್ಚಿಸುವ ಗುರಿ ಹೊಂದಿರುತ್ತದ. ಗ್ರಾಮೀಣ ಭಾಗದ ಬಡಜನರಲ್ಲಿ ಆರ್ಥಿಕ ಸಾಮರ್ಥ್ಯ ಮತ್ತು ಆತ್ಮ ವಿಶ್ವಾಸವನ್ನು ಹೆಚ್ಚಿಸುವಲ್ಲಿ ಸಹಕಾರಿ ತಳಹದಿಯ ನೀತಿಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ

೧.೭: ಇಲಾಖೆಯ ಧ್ಯೇಯ ಎಂದರೆ

೧. ಪ್ರಾಮಾಣಿಕ ಸಹಕಾರಿ ಸಂಸ್ಥೆಗಳನ್ನು ಸಂಘಟಿಸಲು ಹಾಗೂ ಸಹಕಾರ ಮೂಲ ತತ್ವಗಳನುಸಾರ ಸಂಸ್ಥೆಗಳನ್ನು ಸುಸ್ಥಿತಿಯ ಮಾರ್ಗದಲ್ಲಿ ನಡೆಸಲು ಕ್ರಮವಿಡುವುದು.

೨. ರಾಜ್ಯದಲ್ಲಿನ ಸಹಕಾರ ಚಳುವಳಿಯನ್ನು ಅಭಿವೃದ್ಧಿ ಪಡಿಸಿ, ಜನರ ಆರ್ಥಿಕ ಹಿತಾಸಕ್ತಿ ಮತ್ತು ಕ್ಷೇಮಾಭಿವೃದ್ಧಿ ಉತ್ತಮಪಡಿಸಲು ಮಾರ್ಗದರ್ಶನ ನೀಡುವುದು.

೩. ಎಲ್ಲಾ ವಿಧದ ಸಹಕಾರಿ ಸಂಸ್ಥೆಗಳಿಗೆ ಸ್ನೇಹಿತ, ತತ್ವಜ್ಞಾನಿ ಮತ್ತು ಮಾರ್ಗದರ್ಶಕನಾಗಿ ಸೇವೆ ಮಾಡುವುದು.

೧.೮: ಪ್ರಕಾರ್ಯಗಳು

೧. ಇಲಾಖೆಯು ನಿರ್ವಹಿಸುವ ಎಲ್ಲಾ ಕಾಯಿದೆ ಮತ್ತು ನಿಯಮಗಳಿಗೆ ಸೂಕ್ತ ತಿದ್ದುಪಡಿಗಳನ್ನು ತರುವುದು.

೨. ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಮತ್ತು ನಿಯಮಗಳ ಪ್ರಕಾರ ಸಹಕಾರ ಸಂಘಗಳಿಗೆ ಮಾರ್ಗದರ್ಶನ ನೀಡುವುದು ಮತ್ತು ಕ್ರಮವಿಡುವುದು.

೩. ಸಹಕಾರ ಸಂಘಗಳಿಗೆ ಸಂಬಂಧಿಸಿದ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸುವುದು.

೪. ವಿವಿಧ ಅಭಿವೃದ್ಧಿ ಯೋಜನೆಗಳಲ್ಲಿನ ಕ್ಲೇಮುಗಳನ್ನು ಇತ್ಯರ್ಥಪಡಿಸುವ ವಿಧಾನಗಳನ್ನು ಸರಳೀಕರಿಸುವುದು.

೫. ಕಛೇರಿಯ ಮೂಲ ಸೌಕರ್ಯಗಳನ್ನು ಆಧುನೀಕರಣ ಗೊಳಿಸುವುದು ಮತ್ತು ಇಲಾಖೆಯ ಎಲ್ಲಾ ಸಿಬ್ಬಂದಿ ವರ್ಗದವರಿಗೆ ಮಾನವ ಸಂಪನ್ಮೂಲ ಅಭಿವೃದ್ಧಿ ಸಂಬಂಧಿತ ತರಬೇತಿ ನೀಡುವುದು.

೧.೯: ಸಹಕಾರದ ಮೂಲತತ್ವಗಳು

೧) ಸ್ವಇಚ್ಛೆ ಮತ್ತು ಮುಕ್ತ ಸದಸ್ಯತ್ವ

೨) ಪ್ರಜಾಪ್ರಭುತ್ವ ತಳಹದಿಯ ಸದಸ್ಯರ ನಿಯಂತ್ರಣ

೩) ಸದಸ್ಯರ ಆರ್ಥಿಕ ಪಾಲ್ಗೊಳ್ಳುವಿಕೆ

೪) ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ

೫) ಶಿಕ್ಷಣ, ತರಬೇತಿ ಹಾಗೂ ಮಾಹಿತಿ

೬) ಸಹಕಾರಿ ಸಂಸ್ಥೆಗಳ ನಡುವೆ ಸಹಕಾರ

೭) ಸಾಮಾಜಿಕ ಕಳಕಳಿ

೧.೧೦: ಇಲಾಖೆಯ ಬದ್ಧತೆಗಳು

೧) "ಒಬ್ಬನು ಎಲ್ಲರಿಗಾಗಿ ಎಲ್ಲರೂ ಒಬ್ಬನಿಗಾಗಿ" ಎಂಬ ಮನೋಭಾವನೆಯನ್ನು ಜನರಲ್ಲಿ ಮೂಡಿಸುವುದು.

೨) ಸಹಕಾರ ಕ್ಷೇತ್ರಕ್ಕೆ ಸ್ನೇಹಿತ, ತತ್ವಜ್ಞಾನಿ ಮತ್ತು ಮಾರ್ಗದರ್ಶಿಯಾಗಿರುವುದು.

೩) ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿನ ಸಹಕಾರ ಸಂಘಗಳನ್ನು ಕ್ರಿಯಾಶೀಲರನ್ನಾಗಿ ಮಾಡುವುದು.

೪) ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಬಲಪಡಿಸಲು ವ್ಯಾಪಾರ ಅಭಿವೃದ್ಧಿ ಯೋಜನೆಯನ್ನು ಅಳವಡಿಸಿ ಪರಿಣಾಮಕಾರಿಯಾಗಿ ಜಾರಿಗೊಳಿಸುವ ಮೂಲಕ ರೈತರಿಗೆ ಸುಲಭವಾಗಿ ಸಾಲ ತಲುಪಿಸುವ ವ್ಯವಸ್ಥೆಯನ್ನು ಬಲಪಡಿಸುವುದು.

೫) ಎಲ್ಲಾ ಗ್ರಾಮೀಣ ಸಹಕಾರಿ ಸಂಸ್ಥೆಗಳ ಎಲ್ಲಾ ಸದಸ್ಯರುಗಳಿಗೆ ಆರೋಗ್ಯ ರಕ್ಷಣೆ ಯೋಜನೆಯನ್ನು ವಿಸ್ತರಿಸುವುದು.

೬) ಸಹಕಾರ ಚಳುವಳಿಯಲ್ಲಿ ಮಹಿಳೆಯರು ಹಾಗೂ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗದವರು ಸಕ್ರಿಯವಾಗಿ ಪಾಲ್ಗೊಳ್ಳಲು ಉತ್ತೇಜಿಸುವುದು.

೭) ಜಿಲ್ಲಾ ಮಟ್ಟದಲ್ಲಿ ಸಹಕಾರ ಸಂಘಗಳಿಗೆ ಪೂರಕವಾಗುವಂತೆ ಸಮಗ್ರ ಅಭಿವೃದ್ಧಿಯ ಮೂಲಕ ಮೂಲಭೂತ ಸೌಕರ್ಯಗಳು ಮತ್ತು ಆರ್ಥಿಕ ಸ್ಥಿತಿಯನ್ನು ಬಲಪಡಿಸುವುದು.

೮) ಕಾರ್ಯ ಸಮರ್ಥತೆ ಸುಧಾರಿಸಲು ಕಛೇರಿ ನಿರ್ವಹಣಾ ವ್ಯವಸ್ಥೆಯನ್ನು ಆಧುನೀಕರಣ ಗೊಳಿಸುವುದು.

ಇಲಾಖಾ ಸಂಘಟನಾ ರಚನೆ

ಸರ್ಕಾರದ ಮಟ್ಟದಲ್ಲಿ ಸಹಕಾರ ಇಲಾಖೆಯು ಒಂದು ಸಚಿವಾಲಯವನ್ನು ಹೊಂದಿದ್ದು, ರಾಜ್ಯ, ಪ್ರಾಂತ, ಜಿಲ್ಲೆ, ಉಪವಿಭಾಗ ಮತ್ತು ತಾಲ್ಲೂಕು ಮಟ್ಟಗಳನ್ನು ಒಳಗೊಂಡ ಐದು ಹಂತದ ಕ್ಷೇತ್ರ ಇಲಾಖೆಯನ್ನು ಒಳಗೊಂಡಿದೆ. ಸಹಕಾರ ಇಲಾಖೆಯ ಕ್ಷೇತ್ರಾಧಿಕಾರಿಗಳು ಪ್ರಾಂತೀಯ, ಜಿಲ್ಲೆ ಮತ್ತು ತಾಲ್ಲೂಕು ಮಟ್ಟದ ಸಹಕಾರ ಸಂಘಗಳ ವ್ಯವಹಾರಗಳನ್ನು ನಿಯಂತ್ರಿಸುವುದು ಅಲ್ಲದೆ ಇಲಾಖೆಯ ಕಾರ್ಯಕ್ರಮಗಳನ್ನು ಮತ್ತು ಯೋಜನೆಗಳನ್ನು ಕಾರ್ಯಗತಗೊಳಿಸುತ್ತಾರೆ.

ಸಚಿವಾಲಯ:

ಸಹಕಾರ ಇಲಾಖೆಯು ಒಬ್ಬ ಸಂಪುಟ ದರ್ಜೆಯ ಸಚಿವರ ನೇತೃತ್ವದಲ್ಲಿ ಕಾರ್ಯನಿರ್ವಹಿಸ್ಮತ್ತದೆ. ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು, ಸಹಕಾರ ಸಂಘಗಳ ನಿಬಂಧಕರ ಕಛೇರಿ, ಸಹಕಾರ ಲೆಕ್ಕಪರಿಶೋಧನೆ ಇಲಾಖೆ, ಕೃಷಿ ಮಾರಾಟ ಇಲಾಖೆ ಮತ್ತು ಕರ್ನಾಟಕ ರಾಜ್ಯ ಉಗ್ರಾಣ ನಿಗಮ ಇವರುಗಳ ಆಚೂಾ ವಿಭಾಗದ ಕೆಲಸ ಕಾರ್ಯಗಳನ್ನು ನೋಡಿಕೊಳ್ಳುತ್ತಾರೆ. ಸಹಕಾರ ಇಲಾಖೆಯು ಸಚಿವಾಲಯ ಮಟ್ಟದಲ್ಲಿ ಸಹಕಾರ ವಲಯಕ್ಕಾಗಿ ನೀತಿ ರಚನೆ, ಯೋಜನೆ, ಆಯವ್ಯಯ ಮತ್ತಿತರ ಪೂರಕ ಸೇವೆಗಳಿಗೆ ಜವಾಬ್ದಾರಿಯಾಗಿರುತ್ತದೆ. ಇದು ನಿಯಮಗಳನ್ನು ನಿಗದಿಪಡಿಸುತ್ತದೆ ಮತ್ತು ಸಹಕಾರಿ ಸಂಸ್ಥೆಗಳ ಬಲಸಂವರ್ಧನೆಗಾಗಿ ಸ್ಥೂಲ ಮಾರ್ಗಸೂತ್ರಗಳನ್ನು ನೀಡುತ್ತದೆ ಹಾಗೂ ಸಹಕಾರ ಸಂಸ್ಥೆಗಳ ಬೆಳವಣಿಗೆಯನ್ನು ಬಲಪಡಿಸುತ್ತದೆ. ಸಚಿವಾಲಯು ಯೋಜನೆ, ಹಣಕಾಸು ಮತ್ತಿತರ ಇಲಾಖೆಗಳೊಂದಿಗೆ ಮತ್ತು ಭಾರತ ಸರ್ಕಾರದೊಂದಿಗೆ ಸಂಪರ್ಕ ಹೊಂದಿರುತ್ತದೆ. ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಮತ್ತು ನಿಯಮಗಳಡಿಯಲ್ಲಿ ಇದು ಮೇಲ್ಮನವಿ ಪ್ರಾಧಿಕಾರ ಆಗಿರುತ್ತದೆ. ಈ ಇಲಾಖೆಗಳ "ಎ" ಗುಂಪು ಅಧಿಕಾರಿಗಳ ಸಂಬಂಧದಲ್ಲಿ ಸರ್ಕಾರವು ನೇಮಕಾತಿ ಮತ್ತು ಶಿಸ್ತು ಪ್ರಾಧಿಕಾರ ಸಹ ಆಗಿರುತ್ತದೆ.

ರಾಜ್ಯ ಕೇಂದ್ರಸ್ಥಾನ:

ಸಹಕಾರ ಸಂಘಗಳ ನಿಬಂಧಕರು ಸಹಕಾರ ಇಲಾಖೆಯ ಮುಖ್ಯಸ್ಥರಾಗಿರುತ್ತಾರೆ. ಅವರು ಲೇವಾದೇವಿಗಾರರ ಮತ್ತು ಗಿರವಿದಾರರ ಮಹಾರಿಜಿಸ್ಟ್ರಾರರಾಗಿದ್ದಾರೆ. ಅಲ್ಲದೇ ಚೀಟಿ ವ್ಯವಹಾರಗಳ ರಿಜಿಸ್ಟ್ರಾರರಾಗಿದ್ದಾರೆ. ಅವರು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ ೧೯೫೯, ಕರ್ನಾಟಕ ಲೇವಾದೇವಿಗಾರರ ಅಧಿನಿಯಮ ೧೯೬೧, ಕರ್ನಾಟಕ ಗಿರವಿದಾರರ ಅಧಿನಿಯಮ ೧೯೬೧ ಮತ್ತು ಚೀಟಿ ನಿಧಿಗಳ ಅಧಿನಿಯಮ ೧೯೮೨ರ ಅಡಿಯಲ್ಲಿ ಶಾಸನಬದ್ಧ ಅಧಿಕಾರಗಳನ್ನು ಚಲಾಯಿಸುತ್ತಾರೆ. ಸಹಕಾರ ಸಂಘಗಳ ರಿಜಿಸ್ಟ್ರಾರರು ಅಪೆಕ್ಸ್ ಮಟ್ಟದ ಸಹಕಾರ ಸಂಸ್ಥೆಗಳಾದ ಕರ್ನಾಟಕ

ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್, ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್, ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ, ಕರ್ನಾಟಕ ರಾಜ್ಯ ಸಹಕಾರಿ ಮಾರಾಟ ಮಹಾಮಂಡಳ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಮುಂತಾದವುಗಳ ಆಡಳಿತ ಸಮಿತಿಯಲ್ಲಿ ಸಂಧರ್ಬಾನುಸಾರ ಸರ್ಕಾರಿ ನಾಮಿನಿಯಾಗಿರುತ್ತಾರೆ.

ರಾಜ್ಯ , ವಲಯ, ಜಿಲ್ಲೆ, ಉಪ-ವಿಭಾಗೀಯ ಮತ್ತು ತಾಲ್ಲೂಕು ಮಟ್ಟ:

ಸಹಕಾರ ಸಂಘಗಳ ನಿಬಂಧಕರ ಅಧಿಕಾರಗಳನ್ನು ಕೇಂದ್ರ ಕಛೇರಿಯಲ್ಲಿರುವ ಸಹಕಾರ ಸಂಘಗಳ ಅಪರ ನಿಬಂಧಕರು ಮತ್ತು ಸಹಕಾರ ಸಂಘಗಳ ಜಂಟಿ ನಿಬಂಧಕರುಗಳಿಗೆ, ೪ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರುಗಳಿಗೆ, ೩೨ ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರುಗಳಿಗೆ ಹಾಗೂ ೫೧ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳಿಗೆ ಸಹಕಾರ ಸಂಸ್ಥೆಗಳ ನೋಂದಾಯಿತ ಕಾರ್ಯವ್ಯಾಪ್ತಿಯನ್ನು ಆಧರಿಸಿ ನಿಯೋಜಿಸಲಾಗಿರುತ್ತದೆ. ಈ ಅಧಿಕಾರಿಗಳು ಅವರಿಗೆ ನಿಯೋಜಿಸಲ್ಪಟ್ಟ ಅಧಿಕಾರಗಳಿಗನುಸಾರ ಸಹಕಾರಿ ಸಂಸ್ಥೆಗಳ ಮೇಲೆ ಕಾನೂನಾತ್ಮಕ ಮತ್ತು ಆಡಳಿತಾತ್ಮಕ ನಿಯಂತ್ರಣವನ್ನು ಚಲಾಯಿಸುತ್ತಾರೆ ಹಾಗೂ ಅದಕ್ಕನುಸಾರ ಸಹಕಾರ ಸಂಘಗಳ ನೋಂದಣಿ, ವಿಲೀನ, ಸಮಾಪನೆ, ಪರಿವೀಕ್ಷಣೆ, ಅವುಗಳ ಬೈಲಾಗಳ ತಿದ್ದುಪಡಿ ಮಾಡುತ್ತಾರೆ, ಅರೆನ್ಯಾಯಿಕ ಪ್ರಾಧಿಕಾರಗಳಾಗಿ ಕಾರ್ಯನಿರ್ವಹಿಸುತ್ತಾರೆ ಮತ್ತು ಇತರೆ ಎಲ್ಲಾ ಕಾನೂನಾತ್ಮಕ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ.

ಜಿಲ್ಲಾ ವಲಯದ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಜಿಲ್ಲಾ ಉಪ ನಿಬಂಧಕರು ಜಿಲ್ಲಾ ಪಂಚಾಯಿತಿಗಳ ನಿಯಂತ್ರಣದಡಿಯಲ್ಲಿ ಸಹ ಕಾರ್ಯ ನಿರ್ವಹಿಸುತ್ತಾರೆ. ಉಪ-ವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು ರಾಜ್ಯ ಯೋಜನಾ ಕಾರ್ಯಕ್ರಮಗಳ ಮತ್ತು ಜಿಲ್ಲಾ ವಲಯದ ಯೋಜನೆ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಜವಾಬ್ದಾರರಾಗಿರುತ್ತಾರೆ. ಜಿಲ್ಲಾ ವಲಯ ಯೋಜನಾ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಅವರು ತಾಲ್ಲೂಕು ಪಂಚಾಯಿತಿಗಳ ನಿಯಂತ್ರಣದಲ್ಲಿ ಕೆಲಸ ಮಾಡುತ್ತಾರೆ. ಇಲಾಖೆಯಲ್ಲಿ ೨೦೨ ಸಹಕಾರಿ ಅಭಿವೃದ್ಧಿ ಅಧಿಕಾರಿಗಳು, ೧೭೫ ಹಿರಿಯ ನಿರೀಕ್ಷಕರು, ಮತ್ತು ೧೭೮ ಸಹಕಾರಿ ಪರಿವೀಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ.

ಸಹಕಾರ ಇಲಾಖೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಅಧಿನಿಯಮ ಮತ್ತು ನಿಯಮಗಳು

೧. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, ೧೯೫೯ ಮತ್ತು ಕರ್ನಾಟಕ ಸಹಕಾರ ಸಂಘಗಳ ನಿಯಮಾವಳಿಗಳು, ೧೯೬೦.

೨. ಕರ್ನಾಟಕ ಲೇವಾದೇವಿಗಾರರ ಅಧಿನಿಯಮ, ೧೯೬೧ ಮತ್ತು ಕರ್ನಾಟಕ ಲೇವಾದೇವಿ ನಿಯಮಗಳು, ೧೯೬೫.

೩. ಕರ್ನಾಟಕ ಗಿರವಿದಾರರ ಅಧಿನಿಯಮ, ೧೯೬೧ ಮತ್ತು ನಿಯಮಗಳು, ೧೯೬೬.

೪. ೧೯೮೨ ರ ಚೀಟಿನಿಧಿಗಳ ಅಧಿನಿಯಮ ಮತ್ತು ಚೀಟಿನಿಧಿಗಳ (ಕರ್ನಾಟಕ) ನಿಯಮಾವಳಿ, ೧೯೮೩.

೫. ಕರ್ನಾಟಕ ಋಣ ಪರಿಹಾರ ಅಧಿನಿಯಮ, ೧೯೮೦.

೬. ಕರ್ನಾಟಕ ಪಬ್ಲಿಕ್ ಮನಿ (ರಿಕವರಿ ಆಫ್ ಡ್ಯೂಸ್) ಅಧಿನಿಯಮ, ೧೯೮೦.

೭. ಕರ್ನಾಟಕ ಅಗ್ರಿಕಲ್ಚರಲ್ ಕ್ರೆಡಿಟ್ ಆಪರೇಷನ್ಸ್ ಮತ್ತು ಮಿಸಲೇನಿಯಸ್ ಪ್ರಾವಿಷನ್ಸ್ ಕಾಯಿದೆ, ೧೯೭೪.

೮. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ, ೧೯೯೭ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು, ೨೦೦೪.

೯. ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ಅಧಿನಿಯಮ, ೨೦೦೪.

ಕುಂದಾಪುರ ತಾಲೂಕಿನಲ್ಲಿ ಇರುವ ಮಹಿಳಾ ಸಹಕಾರಿ ಸಂಘಗಳು:

೧. ಕಿರಿಮಂಜೇಶ್ವರ ಮಹಿಳಾ ವಿ. ಸ. ಸಂ. ನಿ., ಕಿರಿಮಂಜೇಶ್ವರ

೨. ಕುಂದಾಪುರ ಮಹಿಳಾ ಗ್ರಾ. ವಿ. ಸ. ಸಂ. ನಿ., ಕುಂದಾಪುರ

೩. ಮಹಿಳಾ ವಿ. ಸ. ಸಂ. ನಿ., ಉಪ್ಪುಂದ, ಅ: ಉಪ್ಪುಂದ

೪. ಮಹಿಳಾ ವಿ. ಸ. ಸಂ. ನಿ., ಗಂಗೊಳ್ಳಿ ಅ: ಗಂಗೊಳ್ಳಿ

೫. ಶ್ರೀಶಕ್ತಿ ಮಹಿಳಾ ವಿ. ಸ. ಸಂ. ನಿ,ಗೋಳಿಹೊಳೆ, ಅ:ಅರೆಶಿರೂರು

೬. ಪ್ರಗತಿ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘ(ನಿ)ಹೆಮ್ಮಾಡಿ, ಕುಂದಾಪುರ ತಾಲೂಕು

೭. ಮಹಿಳಾ ವಿ. ಸ. ಸಂ. ನಿ., ಬೈಂದೂರು ಅ: ಬೈಂದೂರು

(ಮಾಹಿತಿ: ಸಹಕಾರಿ ಸಿಂದು ವೆಬ್ ಸೈಟ್)

೧. ವಿಭಾಗವಾರು ಸಹಕಾರಿ ಸಂಘಗಳ ವಿವರ:

೧. ಬಹುರಾಜ್ಯ ಮಟ್ಟದ ಸಹಕಾರಿ ಸಂಘಗಳ ಸಂಖ್ಯೆ ೧೪

೨. ರಾಜ್ಯ ಮಟ್ಟದ ಮಹಾಮಂಡಳಿಗಳ/ಸಂಸ್ಥೆಗಳ ಸಂಖ್ಯೆ ೧೪೨

೩. ಜಿಲ್ಲಾ ಮಟ್ಟ ಮೀರಿ ರಾಜ್ಯ ಮಟ್ಟದ ಒಳಗಿರುವ ಸಹಕಾರ ಸಂಘಗಳ ಸಂಖ್ಯೆ ೩೯೦

೪. ಜಿಲ್ಲಾ ಮಟ್ಟದ ಸಹಕಾರ ಸಂಘಗಳ ಸಂಖ್ಯೆ ೬೩೦

೫. ತಾಲ್ಲೂಕು ಮಟ್ಟ ಮೀರಿ ಜಿಲ್ಲಾ ಮಟ್ಟದ ಒಳಗಿರುವ ಸಹಕಾರ ಸಂಘಗಳ ಸಂಖ್ಯೆ ೧೧೦೬

೬. ತಾಲ್ಲೂಕು ಮಟ್ಟದ ಸಹಕಾರ ಸಂಘಗಳ ಸಂಖ್ಯೆ ೨೪೪೯

೭. ತಾಲ್ಲೂಕು ಮಟ್ಟಕ್ಕಿಂತ ಕಡಿಮೆ ಇರುವ ಸಹಕಾರ ಸಂಘಗಳ ಸಂಖ್ಯೆ ೩೩೬೯

ಒಟ್ಟು ೩೮೪೩೦

(ಮಾಹಿತಿ:ಸಹಕಾರಿ ಸಿಂಧು ವೆಬ್ ಸೈಟ್)

೨. ಲೆಕ್ಕ ಪರಿಶೋಧನಾ ವರ್ಗೀಕರಣ

೧. "ಎ" ವರ್ಗೀಕರಣ ೧೯೯೨

೨. "ಬಿ" ವರ್ಗೀಕರಣ ೯೩೮೨

೩. "ಸಿ" ವರ್ಗೀಕರಣ ೯೩೮೨

೪. "ಡಿ" ವರ್ಗೀಕರಣ ೩೩೨೧

೫. "ಎನ್" ಲೆಕ್ಕ ಪರಿಶೋಧನೆಯಾಗದೆ ಇರುವ ಸಂಘಗಳ ಸಂಖ್ಯೆ ೪೨೩೮

ಒಟ್ಟು ೩೮೪೩೦

(ಮಾಹಿತಿ:ಸಹಕಾರಿ ಸಿಂಧು ವೆಬ್ ಸೈಟ್)

೩. ಆರ್ಥಿಕ ಪರಿಸ್ಥಿತಿ

೧. ಲಾಭದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಘಗಳ ಸಂಖ್ಯೆ ೨೧೫೯೨

೨.ನಷ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಘಗಳ ಸಂಖ್ಯೆ ೧೨೮೯

೩.ಲಾಭ, ನಷ್ಟವಿಲ್ಲದೆ ಕಾರ್ಯನಿರ್ವಹಿಸುತ್ತಿರುವ ಸಂಘಗಳ ಸಂಖ್ಯೆ ೪೫೫೮

ಒಟ್ಟು ೩೮೪೨೦

(ಮಾಹಿತಿ: ಸಹಕಾರಿ ಸಿಂಧು ವೆಬ್ ಸೈಟ್)

೪. ಕಾರ್ಯವೈಖರಿ

೧. ಕಾರ್ಯನಿರ್ವಹಿಸುತ್ತಿರುವ ಸಂಘಗಳ ಸಂಖ್ಯೆ ೩೩೬೭೮

೨. ನಿಷ್ಕ್ರೀಯಗೊಂಡ ಸಂಘಗಳ ಸಂಖ್ಯೆ ೨೩೮೮

೩.ಸಮಾಪನೆಗೊಂಡದ್ದು ಸಂಘಗಳ ಸಂಖ್ಯೆ ೨೩೬೪

ಒಟ್ಟು ೩೮೪೩೦

(ಮಾಹಿತಿ:ಸಹಕಾರಿ ಸಿಂಧು ವೆಬ್ ಸೈಟ್)

೫. ವಿವಿಧ ವರ್ಗಕ್ಕೆ ಸಂಬಂಧಿಸಿದ ಸಂಘಗಳು

೧. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಂಘಗಳ ಸಂಖ್ಯೆ ೫೯೩

೨. ಮಹಿಳಾ ಸಹಕಾರ ಸಂಘಗಳ ಸಂಖ್ಯೆ ೪೯೦೧

೩. ಪರಿಶಿಷ್ಟ ಜಾತಿ ಸಹಕಾರ ಸಂಘಗಳ ಸಂಖ್ಯೆ ೨೪೦

೪. ಪರಿಶಿಷ್ಟ ಪಂಗಡ ಸಹಕಾರ ಸಂಘಗಳ ಸಂಖ್ಯೆ ೯೫

೫. ಅಲ್ಪ ಸಂಖ್ಯಾತರ ಸಹಕಾರ ಸಂಘಗಳ ಸಂಖ್ಯೆ ೫೧೭

೬. ಸಾಮಾನ್ಯ ಸಹಕಾರ ಸಂಘಗಳ ಸಂಖ್ಯೆ ೩.೨೦೮೪

ಒಟ್ಟು ೩೮೪೩೦

(ಮಾಹಿತಿ:ಸಹಕಾರಿ ಸಿಂಧು ವೆಬ್ ಸೈಟ್)

ಕರ್ನಾಟಕ ರಾಜ್ಯ ಮಹಿಳಾ ಸಹಕಾರ ಮಹಾಮಂಡಳಿ ನಿ., ಬೆಂಗಳೂರು.

ಕರ್ನಾಟಕ ರಾಜ್ಯ ಮಹಿಳಾ ಸಹಕಾರ ಮಹಾಮಂಡಳಿ ನಿ., ಈ ಸಂಸ್ಥೆಯು ದಿನಾಂಕ:೨೫-೧೧-೧೯೭೨ ರಲ್ಲಿ ನೋಂದಾಯಿಸಲ್ಪಟ್ಟಿದ್ದು, ರಾಜ್ಯ ಮಟ್ಟದ ಸಹಕಾರ ಸಂಸ್ಥೆಯಾಗಿರುತ್ತದೆ. ಇದರ ಮುಖ್ಯ ಉದ್ದೇಶಗಳು ಈ ಕೆಳಕಂಡಂತಿರುತ್ತವೆ.

ಜಿಲ್ಲಾ, ಬ್ಲಾಕ್ ಮತ್ತು ಪ್ರಾಥಮಿಕ ಹಂತದ ಮಹಿಳಾ ಸಂಘಗಳನ್ನು ಸಂಘಟಿಸುವುದು ಮತ್ತು ಅಭಿವೃದ್ದಿ ಪಡಿಸುವುದು. ಜಿಲ್ಲಾ ಮಟ್ಟದ ಮಹಿಳಾ ಸಹಕಾರ ಸಂಘಗಳ ಆರ್ಥಿಕ ಮಟ್ಟವನ್ನು ಸಾಧಾರಿಸಲು ಕ್ರಮ ಕೈಗೊಳ್ಳುವುದು ಹಾಗೂ ಮಹಿಳೆಯರ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಯನ್ನು ಉತ್ತಮ ಪಡಿಸುವುದು. ಮಹಿಳಾ ಸಹಕಾರ ಸಂಘಗಳ ಸದಸ್ಯರು ಉತ್ಪಾದಿಸುವ ವಸ್ತುಗಳಿಗೆ ಸೂಕ್ತ ಮಾರುಕಟ್ಟೆ ಒದಗಿಸುವುದು ಮಹಿಳಾ ಸಹಕಾರ ಸಂಘಗಳ ಚಟುವಟಿಕೆಗಳಿಗೆ ಪ್ರಚಾರ ನೀಡುವುದು.

ಸಭೆ, ಸಮ್ಮೇಳನ, ವಿಚಾರಗೋಷ್ಠಿಗಳನ್ನು ಕರೆದು ಮಹಿಳಾ ಸಹಕಾರ ಸಂಘಗಳ ಕಾರ್ಯಕರ್ತರು ಎದುರಿಸುತ್ತಿರುವ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರೋಪಯಗಳನ್ನು ಕಂಡುಕೊಳ್ಳಲು ವೇದಿಕೆ ನಿರ್ಮಿಸುವುದು, ಸಂಸ್ಥೆಯ ವತಿಯಿಂದ ಉದ್ಯೋಗಸ್ಥ ಮಹಿಳೆಯರಿಗೆ ವಸತಿ ನಿಲಯಗಳನ್ನು ತೆರೆಯುವುದು.

ಸದಸ್ಯತ್ವ:

ಈ ಸಂಸ್ಥೆಯ ಸದಸ್ಯತ್ವವು ಎಲ್ಲಾ ಜಿಲ್ಲಾ ಮಟ್ಟದ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘಗಳಿಗೆ,ಮಹಿಳಾ ಸಹಕಾರ ಬ್ಯಾಂಕುಗಳಿಗೆ ಮತ್ತು ಇತರೆ ಮಹಿಳಾ ಸಹಕಾರ ಸಂಘಗಳಿಗೆ ತೆರೆದಿರುತ್ತವೆ.

ಅಧ್ಯಾಯ: ೨

ಪೀಠಿಕೆ, ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

ಅಧ್ಯಾಯಗಳು: ೨

ಪೀಠಿಕೆ, ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ

೨.೧: ಪೀಠಿಕೆ

ಸ್ತ್ರೀ ಎಂದರೆ ಶಕ್ತಿ, ತ್ಯಾಗ, ಪ್ರೀತಿಯ ಸಂಕೇತ, ನಂಬುಗೆಗೆ ಅರ್ಹ, ಕ್ಷೇಮಾಯಾಧರಿತ್ರಿ, ದಯೆಯ ಸಕಾರ ಮೂರ್ತಿ,ಸಹನಾಮಣಿ ಇತ್ಯಾದಿಗಳಿಂದ ಹೊಗಳಿ ಹೊಗಳಿ ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರದೇವತಾ: ಎಂದು ದೇವತೆಯ ಸ್ಥಾನದಲ್ಲಿ ಕುಳ್ಳಿರಿಸಿದರೆ,ಇನ್ನೊಂದಡೆ ಒಂದು ವ್ಯವಸ್ಥೆಯನ್ನು ಹುಟ್ಟುಹಾಕಿ ಆ ವ್ಯವಸ್ಥೆಗೆ ನಿಯಮಗಳನ್ನು ರೂಪಿಸಿ 'ಸ್ತ್ರೀ' ಎಂದರೆ ಪಂಡಿತಳಲ್ಲ ಪಾಮರಳೂ ಅಲ್ಲ, ಸ್ತ್ರೀಯನ್ನು ಅಬಲೆಯೆಂದು ಕರೆದು ಅವಳಿಗೆ ಆರ್ಥಿಕ, ಸಾಮಾಜಿಕ, ರಾಜಕೀಯ ಸ್ವಾತಂತ್ರ್ಯ ಕೊಡದೆ ಉಳಿಯುವಂತೆ ಮಾಡಿದ್ದು ಐತಿಹಾಸಿಕ ಸತ್ಯ. (ನಾರಾಯಣಿ ೧೯೯೭)

"ಭಾರ್ಯಾ ರೂಪವತೀ ಶತ್ರು" ಎಂಬ ಆರ್ಯೋಕ್ತಿಗೆ ಸರಿಯಾಗಿ ತಮ್ಮ ಉಜ್ವಲ ರೂಪ ಲಾವಣ್ಯಗಳೇ ತಮಗೆ ಮುಳುವಾಗಿ ನರಕವಾಸ ಅನುಭವಿಸಿದ ಮಹಿಳೆಯರ ಚರಿತ್ರೆಯನ್ನು ನಾವು ಪುರಾಣಗಳಲ್ಲಿ ಓದಿದ್ದೇವೆ.ಹೆಣ್ಣು ಕೇವಲ ಪುರುಷನ ಭೋಗ ಲಾಲಸೆಯ ವಸ್ತುವಾಗಿ ಪಂಜರದ ಗಿಣಿಯಾಗಿ, ಮಕ್ಕಳನ್ನು ಪಡೆಯುವ ಯಂತ್ರವಾಗಿ ನಾಲ್ಕು ಗೋಡೆಯು ಬಂಧನದಲ್ಲಿರಬೇಕು ಎಂಬುದು ಪುರುಷ ಪ್ರಧಾನ ಸಮಾಜದ ಕಟ್ಟುಕಟ್ಟಳೆಯಾಗಿದೆ.

ಸ್ತ್ರೀ ಪುರುಷರ ನಡುವಿನ ಅಸಮಾನತೆ ಪ್ರಕೃತಿ ಸಹಜವಲ್ಲ,ಜೈವಿಕವಲ್ಲ,ಅದು ಸಾಂಸ್ಕೃತಿಕ ಹಿನ್ನೆಲೆಯಾದ್ದಾಗಿದ್ದು ಪರಿಸರದ ಕಾರಣದಲ್ಲಿ ಉದ್ಬವಿಸಿದ್ದಾಗಿದೆ.ಹೆಣ್ಣುತನದ ಗುಣ ಸ್ವಭಾವಗಳು ದೈಹಿಕವಾಗಿ ಹೆಣ್ಣಾದ ಮಾತ್ರಕ್ಕೆ ಬಂದಿರುವಂತಹುದು ಅಲ್ಲ ಬದಲಾಗಿ ಸಮಾಜ ಸಂಪ್ರದಾಯಗಳು ಪುರುಷ ಲಾಭಕ್ಕಾಗಿ ಮಹಿಳೆಯರ ಮೇಲೆ ಹೇರಿದ ಗುಣಗಳಾಗಿವೆ.ತಾಯ್ತನದ ಹಂಬಲ, ಸತೀತ್ವ, ಶೀಲ, ಪಾತಿವ್ರತ್ಯ ಎಲ್ಲವೂ ಸಮಾಜದ ನಿರೀಕ್ಷೆಯೇ ಹೊರತು ಹೆಣ್ಣಿಗೆ ವರ್ಣತಂತುಗಳಿಂದಲೇ ಹರಿದು ಬರುವಂತಹುದಲ್ಲ ಸಮಾಜವು ಧೈರ್ಯ,ಸಾಹಸ,ಆಕ್ರಮಣ ಶೀಲತೆಯನ್ನು ಗಂಡುಗುಣಗಳೆಂದು ಗಂಡಿನಲ್ಲಿ ಮಾತ್ರ ಇವುಗಳನ್ನು ಘೋಷಿಸುತ್ತದೆ. ಹಾಗೂ ಸಹನೆ,ಸಂಯಮ,ವಿಧೇಯತೆಗಳು ಹೆಣ್ಣುಗುಣಗಳೆಂದು ಹೆಣ್ಣಿನಲ್ಲಿ ಪ್ರೋತ್ಸಾಹಿಸಿತು. ಅಷ್ಟೇ ಅಲ್ಲದೆ ಗಂಡುಗುಣಗಳು ಹೆಚ್ಚಿನದೆಂದೂ,ಹೆಣ್ಣು ಗುಣಗಳನ್ನು ದುರ್ಬಲವೆಂದೂ ಸಾರುತ್ತದೆ.ಈ ರೀತಿಯಾಗಿ ಹೆಣ್ಣು ಗಂಡು ಪರಸ್ಪರ ವಿರುದ್ಧ ವ್ಯಕ್ತಿಗಳೆಂಬ ಕಲ್ಪನೆಯನ್ನು ಈ ಸಮಾಜವು ಸೃಷ್ಟಿಸಿದೆ.ಇತಿಹಾಸದುದ್ದಕ್ಕೂ ಪುರುಷ ಪ್ರಪಂಚದ ಅನುಭವಗಳೇ ಸಾರ್ವತ್ರಿಕವೆಂಬಂತೆ ಅಭಿವ್ಯಕ್ತಗೊಂಡು,ಸ್ತ್ರೀಯರ ಅನಿಸಿಕೆ, ಅನುಭವ, ಸಾಧನೆ ದಾಖಲಾಗದ ಏಕ್ ಮುಖ ಚರಿತ್ರೆ ನಮ್ಮದಾಗಿದೆ.(ನೇಮಿಚಂದ್ರ, ೨೦೦೧)

ಭಾರತೀಯ ನೀತಿ ಸಂಹಿತೆಯನ್ನು ರೂಪಿಸಿದ ಮನುವಿನ ಪ್ರಕಾರ ಮಹಿಳೆಯರು ತಮ್ಮ ಸ್ವಂತ ಮನೆಯಲ್ಲಿ ಕೂಡಾ ಸ್ವತಂತ್ರವಾಗಿ ಯಾವುದನ್ನು ಮಾಡುವಂತಿಲ್ಲ. ಒಂದು ಹೆಣ್ಣು ಬಾಲ್ಯದಲ್ಲಿ ತಂದೆಯ ಯೌವನದಲ್ಲಿ ಪತಿಯ ಹಾಗೂ ವೃದ್ದಾಪ್ಯದಲ್ಲಿ ಮಕ್ಕಳ ಆಸರೆಯಲ್ಲಿ ಬೆಳೆಯಬೇಕೆಂಬುದು ಮನು ವಿಧಿಸಿದ

ಕಟ್ಟುಪಾಡಾಗಿತ್ತು.ಧರ್ಮಶಾಸ್ತ್ರಕಾರರು 'ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ' ಎಂದು ಘೋಷಿಸಿದ್ದರಲ್ಲದೆ ಹಿಂದೂ ಕಾನೂನು ಹಾಗೂ ಸಂಪ್ರದಾಯಗಳು ಸ್ತ್ರೀಗೆ ಪ್ರತಿಕೂಲವೇ ಆಗಿದ್ದವು.

ಭಾರತದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರು ಜಾರಿಗೊಳಿಸಿದ ಆಡಳಿತ ಸುಧಾರಣೆಗಳು,ಶಿಕ್ಷಣ ಕ್ರಮಗಳು ಮತ್ತು ರಾಜಾರಾಮ ಮೋಹನರಾಯ,ಸ್ವಾಮಿ ವಿವೇಕಾನಂದ,ರಾಷ್ಟ ಪಿತ ಮಹಾತ್ಮ ಗಾಂಧಿ,ಡಾ॥ ಅಂಬೇಡ್ಕರ,ಪಂಡಿತ ಜವಾಹರಲಾಲ್ ನೆಹರು ಮುಂತಾದ ರಾಷ್ಟ್ರೀಯ ಸಮಾಜದ್ ಸುಧಾರಕರ,ರಾಜಕೀಯ ಸಾಂಸ್ಕೃತಿಕ ನಾಯಕರುಗಳ ಚಿಂತನೆಗಳ ಹಾಗೂ ಪ್ರಯತ್ನಗಳ ಫಲವಾಗಿ ಮಹಿಳಾ ಶಿಕ್ಷಣದ ಅಗತ್ಯ ಮತ್ತು ಮಹತ್ವವನ್ನು ಮನಗಾಣಲಾಯಿತು.ಮಹಿಳೆಯರನ್ನು ಅಭಿವೃದ್ಧಿಯಲ್ಲಿ ಪುರುಷರಿಗೆ ಸಮಾನ ಪಾಲುದಾರರು ಎಂದು ಪರಿಗಣಿಸಿದಾಗ ಮಾತ್ರವೇ ದೇಶದ ಸರ್ವತೋಮುಖ ಬೆಳೆವಣಿಯಾಗಲು ಸಾದ್ಯ ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರನ್ನು ಕಡೆಗಣಿಸಿದರೆ ದೇಶದ ಅಭಿವೃದ್ಧಿ ಸಾದ್ಯವಿಲ್ಲವೆಂಬುದನ್ನು ಮನಗಂಡು ಭಾರತ ಸರಕಾರವು ಸಂವಿಧಾನದಲ್ಲಿ ಮಹಿಳೆಯರಿಗೆ ಪುರುಷ ಸಮಾನ ಸ್ಥಾನವನ್ನೂ ನೀಡಿ,ಲಿಂಗ ತಾರತಮ್ಯ ತೊಡೆದು ಹಾಕುವ ನಿಟ್ಟಿನಲ್ಲಿ ಪ್ರಯತ್ನಿಸಿದೆ."ಮಗುವಿಗೆ ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು'' ಎಂಬ ನಾಣ್ಣುಡಿಯು ಸ್ತ್ರೀಯರನ್ನು ಪುರುಷರಿಗಿಂತ ಮೊದಲ ಪಂಕ್ತಿಯಲ್ಲಿ ನಿಲ್ಲಿಸಿದೆ."ಹೆಣ್ಣೊಂದು ಕಲಿತರೆ ಮನೆಯೊಂದು ಕಲಿತಂತೆ'' ಎಂಬ ಮಾತಿನಲ್ಲಿ ನಿಜಕ್ಕೂ ಸತ್ಯಾಂಶವಿದೆ. ಆದುದರಿಂದಲೇ ಭಾರತೀಯ ಸಂವಿಧಾನವು ೧೪ ವರ್ಷದ ವರೆಗಿನ ಎಲ್ಲಾ ಮಕ್ಕಳಿಗೂ ಲಿಂಗತಾರತಮ್ಯವಿಲ್ಲದೇ ಕಡ್ಡಾಯ ಶಿಕ್ಷಣ ನೀಡುವ ಸಾರ್ವತ್ರಿಕ ಉದ್ದೇಶವನ್ನು ಜಾರಿಗೊಳಿಸಿತು.ಹಾಗೂ ಈ ನಿಟ್ಟಿನಲ್ಲಿ ಅನೇಕ ಯೋಜನೆಗಳನ್ನು ರೂಪಿಸಲಾಯಿತು.ಈ ಯೋಜನೆಗಳು ನಿರೀಕ್ಷಿತ ಫಲಿತಾಂಶವನ್ನು ದೊರಕಿಸಿಕೊಟ್ಟಿದೆಯಾದರೂ ಇಂದಿಗೂ ಕೂಡಾ ನಾವು ಸಮಾಜದಲ್ಲಿ ಹೆಣ್ಣು ಗಂಡಿನ ತಾರತಮ್ಯವನ್ನು ಕಾಣಬಹುದಾಗಿದೆ.

ಇಂದು ಎಲ್ಲೆಡೆ ಕೇಳಿ ಬರುತ್ತಿರುವ ಅಭಿವೃದ್ಧಿಯ ಪರಿಕಲ್ಪನೆ ಎಂದರೆ ಒಳಗೊಳ್ಳುವ ಅಭಿವೃದ್ಧಿ.ಒಳಗೊಳ್ಳುವ ಅಭಿವೃದ್ಧಿ ಎಂದರೆ ಸರ್ವತೋಮುಖ ಬೆಳವಣಿಗೆ ಎಂದರೆ ಅಭಿವೃದ್ಧಿಯ ಪಕ್ರಿಯೆಯಲ್ಲಿ ಅಭಿವೃದ್ಧಿಯ ಫಲವನ್ನು ಮುಖ್ಯವಾಗಿ ಅಂಚಿಗೆ ತಳ್ಳಲ್ಪಟ್ಟ,ಶೋಷಿತ ಸಮುದಾಯಗಳನ್ನು ಒಳಗೊಂಡು ಮುಂದುವರಿಯುವ ಪಕ್ರಿಯೆಯಾಗಿದೆ. ಭಾರತೀಯ ಸಮಾಜವು ಅಂಚಿಗೆ ಸರಿಸಲ್ಪಟ್ಟ ಒಂದು ಸಮಾಜವಾಗಿದ್ದು ಅದು ದಲಿತರು,ಹಿಂದುಳಿದ ವರ್ಗಗಳು ಮತ್ತು ಮಹಿಳೆಯರು ಹೀಗೆ ಹಲವು ವೈವಿಧ್ಯಮಯ ಗುಂಪುಗಳಿಂದ ಕೂಡಿದೆ.ಈ ಗುಂಪುಗಳು ಅವರದೇಆ ಆದ ವಿಭಿನ್ನ ಸಮಸ್ಯೆಗಳನ್ನು ಹಾಗೂ ಆರ್ಥಿಕ ಸಾಮಾಜಿಕ ಗುಣಲಕ್ಷಣಗಳನ್ನು ಹೊಂದಿದ್ದಾರೆ.ಅಂಚಿಗೆ ತಳ್ಳಲ್ಪಡುವಿಕೆ ಎಂದರೆ ಒಂದು ವರ್ಗ ಅಥವಾ ಗುಂಪಿನಿಂದ ಒಂದಲ್ಲ ಒಂದು ರೀತಿಯಲ್ಲಿ ಅಡ್ಡಿ ಆತಂಕಗಳನ್ನು ಎದುರಿಸುವುದು.ಇಂತಹ ಗುಂಪುಗಳು ಪ್ರಗತಿಯ ಲಾಭಾಗಳ ಅಂಚಿನಲ್ಲಿದ್ದು ಸಮಾಜದ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿನಲ್ಲಿ ಸಂಭವಿಸುವ ಯಾವುದೇ ತರಹದಸುಧಾರಣೆಗಳಿಂದ ಹರಿದು ಬರುವ ಲಾಭಗಳಲ್ಲಿ ಲಭಿಸತಕ್ಕ ಪಾಲಿನಿಂದ ವಂಚಿತವಾಗಿರುತ್ತದೆ. ಇಲ್ಲಿ ಅಂಚನ್ನೂ ವ್ಯಾಖ್ಯಾನಿಸುವ ಸರಳ ವಿಧಾನವೆಂದರೆ ಗುಂಪು ಯಾವ ಭೇದ ಭಾವಕ್ಕೆ ಒಳಗಾಗಿದೆಯೋ,ಆ ಭೇದ ಭಾವಗಳನ್ನು ವಿವರಿಸುವುದು. ಈ ಭೇದ ಭಾವ ಸ್ವತಃ ಅಸಮಾನತೆಗಳು,ತಾರತಮ್ಯ ಹಾಗೂ ಅವಕಾಶ ವಂಚನೆ ಇತ್ಯಾದಿ

ರೂಪದಲ್ಲಿರುತ್ತದೆ. ಭಾರತದಲ್ಲಿ ಮುಖ್ಯವಾಗಿ ಅಂಚಿಗೆ ತಳ್ಳಲ್ಪಟ್ಟ ಗುಂಪು ಮಹಿಳೆಯರು ವಾಸ್ತವದಲ್ಲಿ ಇದೊಂದು ಲಿಂಗತ್ವ ಸಮಸ್ಯೆ ಭಾರತದ ಕಳೆದು ಹೋಗಿರುವ ಮಹಿಳೆಯರನ್ನು ಅಭಿವೃದ್ದಿಯ ಮುಖ್ಯವಾಹಿನಿಗೆ ತರಬೇಕಾದರೆ ಲಿಂಗ ತಾರತಮ್ಯದ ಬೇರು,ರಂಬೆ,ಕೊಂಬೆಗಳನ್ನು ಮತ್ತು ಫಲಗಳನ್ನು ಅಧ್ಯಯನ ಸಂಶೋಧನೆಗೆ ಬಳಪಡಿಸುವ ಅಗತ್ಯವಿದೆ.(ಹನ್ಸ್೨೦೧೦)

೨.೨: ಅಧ್ಯಯನದ ವಿಧಾನಗಳು

- ಕುಂದಾಪುರ ತಾಲೂಕಿನಲ್ಲಿ ಕಾರ್ಯಚರಿಸುತ್ತಿರುವ ಮಹಿಳಾ ಸಹಕಾರಿ ಸಂಘಗಳ ಸದಸ್ಯರ ನೇರ ಸಂದರ್ಶನ ಮತ್ತು ಪ್ರಶ್ನಾವಳಿಯ ಮೂಲಕ ಮಾಹಿತಿ, ಅಭಿಪ್ರಾಯ, ಅನುಭವಗಳನ್ನು ಸಂಗ್ರಹಿಸುವುದು
- ಪ್ರಸ್ತುತ ಅಧ್ಯಯನಕ್ಕೆ ಸೈದ್ಧಾಂತಿಕ ನೆಲೆಯನ್ನು ಒದಗಿಸಲು ವಿವಿಧ ಗ್ರಂಥಗಳು, ಸಂಶೋದನಾ ಲೇಖನಗಳು, ಸಹಕಾರಿ ದಾಖಲೆಗಳನ್ನು ಪರಾಮರ್ಶೆ ಮಾಡಲಾಗುವುದು.
- ಮಹಿಳೆಯರು ಸಹಕಾರಿ ಸಂಘದಲ್ಲಿ ಮತ್ತು ಇತರ ಸಂಘಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಬಗ್ಗೆ ಮಾಹಿತಿಗಾಗಿ ಬೇರೆ ಬೇರೆ ವೆಬ್ ಸೈಟ್‌ಗಳನ್ನು ಉಪಯೋಗಿಸಿ ಮಾಹಿತಿ ಸಂಗ್ರಹಿಸುವುದಾಗಿವೆ.

ಹೀಗೆ ಸಂಗ್ರಹಿಸಿದ ಮಾಹಿತಿಗಳನ್ನು ಸೂಕ್ತ ಕೋಷ್ಟಕಗಳನ್ನಾಗಿ ವಿಂಗಡಿಸಿ ಸರಳ ಅಂಕಿ ಅಂಶಗಳ ತಂತ್ರಗಳಾದ ಅನುಪಾತ, ಸರಾಸರಿ ಪ್ರಮಾಣ ಮತ್ತು ಶೇಕಡಾವಾರು ಪ್ರಮಾಣಗಳ ಮೂಲಕ ವಿಶ್ಲೇಷಿಸುವುದಾಗಿದೆ.

೨.೩: ಅಧ್ಯಯನದ ಇತಿಮಿತಿಗಳು

ಸಂಶೋದಕರು ಗುರುತಿಸಿರುವಂತೆ ಪುಸ್ತುತ ಅಧ್ಯಯನದ ಪ್ರಮುಖ ಅಂಶಗಳು,ವಸ್ತುವಿಷಯ,ನಿರ್ದಿಷ್ಟತೆ ಹಾಗೂ ಪ್ರಾದೇಶಿಕ ಇತಿ ಮಿತಿಗಳಿಗೆ ಒಳಪಟ್ಟಂತೆ ಈ ಕೆಳಗಿನಂತೆ ಮಾಡಲಾಗಿದೆ.

- ಮಹಿಳಾ ಸಬಲೀಕರಣ ಮಹಿಳಾ ಸಹಕಾರಿ ಸಂಘದಿಂದ ಎನ್ನುವ ಈ ಅಧ್ಯಯನವು ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿಗೆ ಮಾತ್ರ ಸೀಮಿತವಾಗಿದೆ.
- ಅಧ್ಯಯನದಲ್ಲಿ ಮಹಿಳಾ ಸದಸ್ಯರ ಆರ್ಥಿಕ,ಸಾಮಾಜಿಕ ಸ್ಥಿತಿಗತಿಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದೆ.
- ಈ ಅಧ್ಯಯನವು ಕೇವಲ ಮಹಿಳಾ ಸದಸ್ಯರಿಗೆ ಮಾತ್ರ ಮೀಸಲಾಗಿದ್ದು ಅವರ ಸಬಲೀಕರಣ ಹೇಗೆ ಸಾಧ್ಯವಿದೆ ಮತ್ತು ಸಾಧ್ಯವಾಗಿದೆ ಎನ್ನುದಾಗಿದೆ

ಮಹಿಳಾ ಸಬಲೀಕರಣ ಎನ್ನುವುದು ಮಹಿಳೆಯರ ಸರ್ವತೋಮುಖ ಅಭಿವೃದ್ದಿಯ ಅರ್ಥವಾಗಿದೆ. ಸಾಮಾನ್ಯವಾಗಿ ಅಭಿವೃದ್ದಿಯು ಬೇರೆ ಬೇರೆ ಹಂತಗಳಲ್ಲಿ, ರೀತಿಗಳಲ್ಲಿ ನಾವು ಅಧ್ಯಯನ ಮಾಡುತ್ತೇವೆ. ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ ಹೀಗೆ ಬೇರೆ ಬೇರೆ ವಿಧಾನಗಳಲ್ಲಿ

ಯಾವುದೇ ಅಭಿವೃದ್ಧಿಗೆ ಅರ್ಥವನ್ನು ನೀಡಬಹುದಾಗಿದೆ. ಪ್ರಸ್ತುತ ಅಧ್ಯಯನದಲ್ಲಿ ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ವಿಧಾನಗಳ ಮೂಲಕ ಅಭಿವೃದ್ಧಿಯನ್ನು ಸಬಲೀಕರಣಕ್ಕೆ ಅರ್ಥ ಕಲ್ಪಿಸಲಾಗುವುದು. ಅಂದರೆ ಮಹಿಳಾ ಸಹಕಾರಿ ಸಂಘಗಳ ಮೂಲಕ ಮಹಿಳೆಯ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಸಾಧ್ಯವಾಗಿದೆಯೋ ಎನ್ನುವ ಅಧ್ಯಯನವೇ ಮಹಿಳಾ ಸಬಲೀಕರಣದ ಮೂಲ ವಿಷಯವಾಗಿದೆ. ಈ ಅಧ್ಯಯನದಲ್ಲಿ ಮುಖ್ಯವಾಗಿ ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನಲ್ಲಿ ಕಾರ್ಯಚರಿಸುತ್ತಿರುವ ಮಹಿಳಾ ಸಹಕಾರಿ ಸಂಘದ ಸದಸ್ಯರನ್ನು ಸಂದರ್ಶಿಸಿ ಮಾಹಿತಿಯನ್ನು ಕಲೆಹಾಕಿ ಅದರ ಮೂಲಕ ಮಹಿಳಾ ಸಬಲೀಕರಣ ಸಾಧ್ಯವಾಗಿದೆಯೋ ಇಲ್ಲವೊ ಎನ್ನುವ ಕಾರ್ಯ ಈ ಅಧ್ಯಯನದ ಮೂಲ ವಸ್ತುವಾಗಿದೆ. ಈ ವಿಷಯವನ್ನು ಆಯ್ಕೆ ಮಾಡಲು ಮೂಲ ಕಾರಣವೆಂದರೆ ಸಾಮಾನ್ಯವಾಗಿ ಮಹಿಳೆಯರಿಗೆ ಎಂದು ಪ್ರತ್ಯೇಕವಾಗಿ ಸ್ಥಾಪಿತವಾಗಿರುವ ಮಹಿಳಾ ಸಹಕಾರಿ ಸಂಘದ ಮೂಲಕ ಹೇಗೆ ಮಹಿಳೆಯರು ಆರ್ಥಿಕವಾಗಿ, ಸಾಮಾಜಿಕವಾಗಿ ಅಭಿವೃದ್ಧಿ ಹೊಂದಿದ್ದಾರೆ ಎನ್ನುವ ಅಧ್ಯಯನದ ಉದ್ದೇಶವನ್ನು ಇಟ್ಟುಕೊಂಡು ಸಮಾಜದಲ್ಲಿ ಈ ಮಹಿಳಾ ಸಹಕಾರಿ ಸಂಘಗಳು ಮಹಿಳೆಯರ ಅಭಿವೃದ್ಧಿಗೆ ಹೇಗೆ ಕೊಡುಗೆಯನ್ನು ನೀಡುತ್ತವೆ ಎನ್ನುವುದನ್ನು ಅಧ್ಯಯನ ಮಾಡುವುದಾಗಿದೆ. ಈ ಅಧ್ಯಯನದ ಮುಖ್ಯ ಪ್ರಾಮುಖ್ಯತೆಯೂ ಮಹಿಳಾ ಸಬಲೀಕರಣವಾಗಿದ್ದು, ಆರ್ಥಿಕ ಮತ್ತು ಸಾಮಾಜಿಕವಾಗಿ ಹೇಗೆ ಅಭಿವೃದ್ಧಿ ಹೊಂದಿದ್ದಾರೆ ಎನ್ನುವುದನ್ನು ತಿಳಿಯುವುದಾಗಿದೆ. ಮಹಿಳಾ ಸಹಕಾರಿ ಸಂಘದಲ್ಲಿ ಸದಸ್ಯರಾಗಿರುವ ಮಹಿಳೆಯರನ್ನು ಸಂದರ್ಶಿಸಿ ಮತ್ತು ಲಭ್ಯವಿರುವ ಇತರ ಮಾಹಿತಿಗಳನ್ನು ಕ್ರೋಢಿಕರಿಸಿ ಈ ಅಧ್ಯಯನವನ್ನು ಮಾಡುವುದಾಗಿದೆ. ಈ ಅಧ್ಯಯನದ ಮೂಲಕ ಸಮಾಜದಲ್ಲಿ ಮಹಿಳೆಯರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಈ ಮಹಿಳಾ ಸಹಕಾರಿ ಸಂಘಗಳ ಮೂಲಕ ಹೇಗೆ ಸಾಧ್ಯವಾಗಿದೆ ಎಂದು ಕಂಡುಹಿಡಿಯುವುದು ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ.

೨.೪: ಸಮಸ್ಯೀಕರಣ

ಸಹಕಾರಿ ಸಂಘಗಳು ಮುಖ್ಯವಾಗಿ ಒಂದು ದೇಶದ ಅಭಿವೃದ್ಧಿಯಲ್ಲಿ ಮಹತ್ತರವಾದ ಪಾತ್ರವಹಿಸುತ್ತವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರಿಂದ ಜನರಿಗಾಗಿ ಜನರಿಗೋಸ್ಕರ ಎನ್ನುವ ಧ್ಯೇಯ ವಾಕ್ಯದೊಂದಿಗೆ ಜನರ ಸಂಘಟನೆಯು ಸಹಕಾರಿ ಸಂಘಟನೆಯಾಗಿದೆ. ಸೇವಾ ಮನೋಭಾವದೊಂದಿಗೆ ಸಮಾನತೆ, ಸಹಕಾರಿ ಕಾನೂನು, ನಿಯಂತ್ರಣ ಪ್ರಕ್ರಿಯೆ, ಸರಕಾರದ ನೀತಿ ನಿಯಮಗಳು, ಪಾಲ್ಗೊಳ್ಳುವಿಕೆ ವೃತ್ತಿಪರ ನಿರ್ವಹಣೆಯ ಆಡಳಿತದಲ್ಲಿ ಅಳವಡಿಸುವಿಕೆ ಆರ್ಥಿಕ ಉದಾರೀಕರಣ ಸಹಕಾರಿ ಪೈಪೋಟಿ ಹೀಗೆ ಬೇರೆ ಬೇರೆ ರೀತಿಯ ಲಕ್ಷಣಗಳನ್ನು ಒಳಗೊಂಡಂತೆ ಸಹಕಾರಿ ಸಂಘಗಳು ಹುಟ್ಟಿಕೊಂಡಿವೆ. ಮಹಿಳಾ ಸಹಕಾರಿ ಸಂಘಗಳು ಕೇವಲ ಮಹಿಳೆಯ ಅಭಿವೃದ್ಧಿಯ ದೃಷ್ಟಿಯಿಂದ ಸಹಕಾರಿ ತತ್ವದ ಅಡಿಯಲ್ಲಿ ಹುಟ್ಟಿಕೊಂಡಿದ್ದು ಸದಸ್ಯರಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ ಅಭಿವೃದ್ಧಿಯನ್ನು ಹೊಂದಲು ಸಹಕರಿಸುತ್ತಿದೆ. ಮುಕ್ತಾ ಮತ್ತು ಸ್ವಯಂ ಸದಸ್ಯತ್ವ, ಪ್ರಜಾಪ್ರಭುತ್ವ ಮಾದರಿಯ ಸದಸ್ಯರ ನಿಯಂತ್ರಣ, ಆರ್ಥಿಕತೆಯಲ್ಲಿ ಪಾಲ್ಗೊಳ್ಳುವಿಕೆ, ಶಿಕ್ಷಣ, ತರಬೇತಿ, ಮಾಹಿತಿ, ಸಹಕಾರ ಮನೋಭಾವ, ಸಮಾಜದ ಎಲ್ಲ ವರ್ಗದವರ ಬಗ್ಗೆ ಕಾಳಜಿ ಹೀಗೆ ಸೇವಾಮನೋಭಾವದೊಂದಿಗೆ ನಾವು ಅಭಿವೃದ್ಧಿ ಹೊಂದಿ ಇನ್ನೊಬ್ಬರು ಅಭಿವೃದ್ಧಿ ಹೊಂದುವ ಹಾಗೆ ಸಹಕರಿಸುವ ಸ್ವತಂತ್ರ ಮತ್ತು ಮುಕ್ತ ವ್ಯವಸ್ಥೆಯಾಗಿದೆ.

ಸಹಕಾರಿ ಸಂಘಟನೆ ಪ್ರಜಾಪ್ರಭುತ್ವ ಸಂಘಟನೆಯಾಗಿದ್ದು ಇದರಲ್ಲಿ ಯಾರು ಸದಸ್ಯರಾಗಿರುತ್ತಾರೋ ಯಾರು ಭಾಗವಹಿಸುತ್ತಾರೋ ಮತ್ತು ನೀತಿ ನಿಯಮಗಳನ್ನು ರೂಪಿಸುತ್ತಾರೋ ಅವರೆ ಇದರ 'ನಿಯಂತ್ರಕರು'(ಡಾ. ಎಸ್. ನಕ್ಕೀರನ್- ಕೊ-ಆಪರೇಟಿವ್ ಮ್ಯಾನೆಜ್‌ಮೆಂಟ ತತ್ವಗಳು ಮತ್ತುತಂತ್ರಗಳು೧.) ಅಭಿವೃದ್ಧಿ ಕುರಿತ ಚರ್ಚೆಯಲ್ಲಿ ಇಂದು ತುಂಬಾ ಪ್ರಚಲಿತದಲ್ಲಿರುವ ಪರಿಭಾವನೆಯೆಂದರೆ ಅದು ಸಶಕ್ತೀಕರಣ. ಕೇಂದ್ರ ಸರ್ಕಾರವು ೨೦೦೧ನೇ ಸಾಲನ್ನು ಮಹಿಳಾ ಸಶಕ್ತೀಕರಣ ವರ್ಷವೆಂದು ಘೋಷಿಸಿದೆ. ಲಿಂಗ ಸಂಬಧಗಳನ್ನು ಕುರಿತಂತೆ ಮೊದಲು ಚಲಾವಣೆಗೆ ಬಂದ ಸಶಕ್ತೀಕರಣ ಪರಿಭಾವನೆ ಇಂದು ಎಲ್ಲಾ ಕ್ಷೇತ್ರಗಳಲ್ಲಿ ಬಳಕೆ ಯಾಗುತ್ತಿದೆ. (ಟಿ ಆರ್ ಚಂದ್ರಶೇಖರ್ ಪ್ರಚಲಿತ ಕರ್ನಾಟಕ, ಅಭಿವೃದ್ಧಿ ಅಧ್ಯಯನ ಸಂಪುಟ೧- ಸಂಚಿಕೆ೧- ಡಿಸೆಂಬರ್ ೨೦೦೧)೨ ಅಭಿವೃದ್ಧಿಯನ್ನು ಆರ್ಥಿಕ ಸುಧಾರಣೆಯಿಂದ ನಾವು ಸಾದಿಸಬೇಕಾದ ಗುರಿ ಎಂದು ಹೇಳಲಾಗದು. ಅದು ಯಾವುದೇ ನಿರ್ದಿಷ್ಟ ಕಾಲದಲ್ಲಿ ಅಥವಾ ನಿರ್ದಿಷ್ಟ ಸಮಾಜದಲ್ಲಿ ಶಕ್ತಿಯ ಅಥವಾ ಅಧಿಕಾರದ ಮೂಲವು ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಯೆಂದು ನಾವು ಒಪ್ಪಿಕೊಳ್ಳಬೇಕಾಗುತ್ತದೆ. (ಡಾ. ಬಾಬಾ ಸಾಹೇಬ್ ಅಂಬೇಡ್ಕರರ ಬರಹಗಳು ಮತ್ತು ಬಾಷಣಗಳು ಸಂ ೧. ಪುಟ. ೬೩-೬೫)೩

ಮಹಿಳಾ ಅಭಿವೃದ್ಧಿಗೆ ಸಂಬಂಧಿಸಿದಂತೆ ಮಹಿಳಾ ಅಭಿವೃದ್ಧಿ ಸಮಸ್ಯೆಗೆ ಅಲ್ಪಾವಧಿಯ ಪರಿಹಾರ ಸ್ವೀಕರಿಸಬಹುದೇ ಹೊರತು ದೀರ್ಘಾವಧಿ ಪರಿಹಾರವಾಗಿ ತಿಳಿದುಕೊಳ್ಳುವ ಹಾಗಿಲ್ಲ. ಅದಕ್ಕೆ ಕೊಡಬೇಕಾದ ಪ್ರಮುಖ ಕಾರಣವೆಂದರೆ ಮಹಿಳೆಯ ಬಗೆಗಿನ ವ್ಯಾಖ್ಯಾನವೇ ನಿಖರ ಹಾಗು ನಿರ್ದಿಷ್ಟವಾಗಿಲ್ಲದಿರುವುದು ಸಾಮಾನ್ಯವಾಗಿ ಮಹಿಳೆಯೆಂದರೆ ಸತಿ, ಸಾವಿತ್ರಿ, ಸೀತಾಮಾತೆ, ಕಿತ್ತೂರು ಚೆನ್ನಮ್ಮ, ಉಳ್ಳಾಲದ ಅಬ್ಬಕ್ಕ ಇಂತಹ ರೀತಿಯಲ್ಲಿ ಮಹಿಳೆಯನ್ನು ತಿಳಿದುಕೊಳ್ಳುವುದಾಗಿದೆ. ಯಾಕೆಂದರೆ ಇದನ್ನೊಂದು ಆದರ್ಶ ಸ್ಥಿತಿಯಾಗಿ, ವ್ಯಕ್ತವಾಗಿ ಹಾಗೂ ಅವಕ್ತವಾಗಿ ನಮ್ಮ ಮತಿಯೊಳಗೆ ಸೇರಿಸಿ ಬಿಡಲಾಗಿದೆ. (ವಿಜಯಕುಮಾರ ಇರ್ವತ್ತೂರೂ ಮತ್ತು ತಿ ನಂ ಶ್ರೀದರ)೪. ಮಹಿಳೆಯರು ಸಬಲರಾಗಬೇಕೆನ್ನುವ ಉದ್ದೇಶಕ್ಕೆ ಕಾನೂನಿನ ಸ್ಪಂದನೆ ದೊರೆಯುತೀದ್ದು ಆ ನಿಟ್ಟಿನಲ್ಲಿ ಮಹಿಳಾ ದೌರ್ಜನ್ಯ ಶೋಷಣೆ ವರದಕ್ಷಣೆ ಕಿರುಕುಳ ಮಹಿಳೆಯರ ಆಸ್ತಿ ಹಕ್ಕಿನ ಬಗ್ಗೆ ಉಚಿತ ಕಾನೂನು ನೇರವು ಪರಿಹಾರ ನೀಡುತ್ತದೆ. ಮಹಿಳೆಯರು ಒಗ್ಗಟ್ಟಿನ ಮೂಲಕ ತಮ್ಮ ಶಕ್ತಿಯನ್ನು ತೋರ್ಪಡಿಸಬೇಕಾಗಿದೆ. ರಾಜಕೀಯವಾಗಿ ಮೀಸಲಾಗಿರುವ ಶೇಕಡಾ ೫೦ ಮೀಸಲನ್ನು ಮಹಿಳೆಯರು ಸದ್ಬಳಕೆ ಮಾಡಿಕೊಳ್ಳುವಲ್ಲಿ ಸಫಲರಾದಾಗ ಮಾತ್ರ ಸಬಲೀಕರಣ ಸಾದ್ಯ.(ಸುದರ್ಶನ ಭಟ್ ನ್ಯಾಯವಾಧಿ ಮತ್ತು ಕೇಸರಿ ಯುವರಾಜ್-ವಿಜಯ ಕರ್ನಾಟಕ ಮಂಗಳೂರು೫.

ಗ್ರಾಮೀಣ ಮಹಿಳೆಯರು ಸ್ವಸಹಾಯ ಸಂಘಗಳ ಮೂಲಕ ಆರ್ಥಿಕವಾಗಿ ಸಮಾಜಿಕವಾಗಿ ಸಬಲೀಕರಣವಾಗುದಕ್ಕೆ ಸಾದ್ಯಾವಾಗಿದೆ. ಮುಖ್ಯವಾಗಿ ಮಹಿಳೆಯರು ಸ್ವಾವಲಂಬಿಗಳಾಗುವ ಮೂಲಕ ತಮ್ಮ ದೈನಂದಿನ ಆಗುಹೋಗುಗಳ ಬಗ್ಗೆ ತಾವೇ ನಿರ್ದಾರ ತೆಗೆದುಕೊಳ್ಳುವುದು. (ಪ್ರತಿಮಾ ಬಿ ಸ್ವಸಹಾಯ ಗುಂಪುಗಳು ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ)೬

ಆಧುನಿಕ ಯುಗದಲ್ಲಿ ಮಹಿಳೆಯ ಕೈಗೆ ಆರ್ಥಿಕ ಶಕ್ತಿ ಬಂದಿದೆ. ಮೊದಲು ಮನೆಯ ಪುರುಷನನ್ನು ಎಲ್ಲಾ ರೀತಿಯಲ್ಲಿ ಅವಲಂಬಿಸಿರುವ ಮಹಿಳೆಯರು ಇಂದು ಎಲ್ಲಾ ರಂಗಗಳಲ್ಲಿಯೂ ಸ್ವತಂತ್ರವಾಗಿ ಆರ್ಥಿಕ ದೃಡತೆಯಿಂದ

ತನ್ನ ಬದುಕು ಸಾಗಿಸಬಲ್ಲಳು. (ಪೂಜಾ ಮಂಡೆಲ್ - ಭಾರತದಲ್ಲಿ ಮಹಿಳಾ ಸಶಕ್ತೀಕರಣ)೭ ಅಸಂಘಗಟೀತ ವಲಯದ ಮಹಿಳಾ ಶಕ್ತಿಗಳ ಒಗ್ಗೂಡುವಿಕೆಯಿಂದ ಮಹಿಳೇಯರ ಸಬಲೀಕರಣ ಸಾದ್ಯವಿದೆ.(ಡಾ ಲೀಂಡಾ ಶಾ- ಮಹಿಳೇ ಮತ್ತು ಸಹಕಾರಿ ಸಮಾನತೆ,ಸಬಲೀಕರಣ,ಉನ್ನತೀಕರಣ)೮. ಸಹಕಾರಿ ಸಂಘಗಳು ಮಹಿಳೆಯರಿಗೆ ಉದ್ಯೋಗ ದೊರಕಿಸಿಕೊಡುವುದು, ಹಣಕಾಸು ಸಹಾಯ ಮಾಡುವ ಯೋಜನೆಗಳ ಮೂಲಕ ಆದಾಯವನ್ನು ಹೆಚ್ಚಿಸಲು ಸಹಕಾರಿಯಾಗಿವೆ. ಈ ಮೂಲಕ ಪ್ರಜಾಪ್ರಭುತ್ವದಲ್ಲಿ ಮಹಿಳೆಯರೀಗೆ ನಾಯಕತ್ವದ ಅವಕಾಶವನ್ನು ಕಲ್ಪಿಸಿಕೊಡುತ್ತದೆ.(ಎಲಿಜಬೆತ ಲಿಕೊಜಿತ- ಸಹಕಾರಿ ವಿಬಾಗ ಲೆಸೋತೊ.)೯ ಈಗಾಗಲೇ ಆಗಿರುವ ಅಧ್ಯಯನಗಳನ್ನು ವಿಶ್ಲೇಷಿಸಿದಂತೆ ಅಭಿವೃದ್ಧಿ ಎನ್ನುವುದು ಕೇವಲ ಯಾವುದೇ ಒಂದು ವಿಷಯದ ಮೇಲೆ ನಿರ್ಧಾರವನ್ನು ತೆಗೆದುಕೊಳ್ಳುವ ಸಂಗತಿಯಲ್ಲಿ ಇದರಲ್ಲಿ ಸಾಮಾನ್ಯವಾಗಿ ಮಹಿಳಾ ಸಬಲೀಕರಣವು ಮಹಿಳೆಯರ ಪಾಲ್ಗೊಳ್ಳುವಿಕೆಯ ಮುಖಾಂತರ ಆಗಬೇಕಾಗಿದೆ ಎನ್ನುವುದು ಅತೀ ಸ್ಪಷ್ಟವಾಗುತ್ತದೆ. ಮಹಿಳಾ ಸಹಕಾರಿ ಸಂಘಗಳು ತನ್ನ ಸದಸ್ಯರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ಸೌಲಭ್ಯವನ್ನು ನೀಡಿ ಸುಲಭ ಕಂತುಗಳ ಮೂಲಕ ದೀರ್ಘಾವಧಿಯ ಸಾಲವಾಗಿ ಮರುಪಾವತಿಯಾಗುವಂತೆ ಮಾಡಿ ಆರ್ಥಿಕವಾಗಿ ಸ್ವಾವಲಂಬಿಯಾಗುವಂತೆ ಮಾಡುವುದಾಗಿದೆ. ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬನೆಯಾಗುವುದರ ಜೊತೆಗೆ ಸಮಾಜದಲ್ಲಿ ಉತ್ತಮ ಗುಣಮಟ್ಟದ ಜೀವನ ನಿರ್ವಹಣೆ ಸಾಗಿಸಲು ಸಹಕಾರಿಯಾಗುತ್ತದೆ. ಆ ದೃಷ್ಟಿಯಿಂದ ಮಹಿಳಾ ಸಹಕಾರಿ ಸಂಘಗಳು ಪ್ರತ್ಯೇಕವಾಗಿ ಮಹಿಳೆಯರಿಗೆ ಮೀಸಲಾಗಿದ್ದು ಸದಸ್ಯರ ಅಭಿವೃದ್ಧಿಗೆ ತನ್ನ ಕೊಡುಗೆಯನ್ನು ನೀಡುವುದಾಗಿರುತ್ತದೆ. ಮಹಿಳಾ ಸಹಕಾರಿ ಸಂಘಗಳ ಮೂಲಕ ಮಹಿಳೆಯರ ಅಭಿವೃದ್ಧಿ ಹೇಗೆ ಎನ್ನುವುದನ್ನು ಈಗಾಗಲೇ ಆಗಿರುವ ಅಧ್ಯಯನವನ್ನು ವಿಶ್ಲೇಷಿಸಿ ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸುದಾಗಿದೆ. ಅವುಗಳೆಂದರೆ ಮಹಿಳಾ ಸಹಕಾರಿ ಸಂಘದ ಮೂಲಕ ಸಮಾಜದಲ್ಲಿ ಮಹಿಳೆಯ ಆರ್ಥಿಕ, ಸಾಮಾಜಿಕ, ಬದಲಾವಣೆ ಹೇಗೆ ಸಾಧ್ಯವಾಯಿತು? ಮಹಿಳಾ ಸಹಕಾರಿ ಸಂಘಗಳು ತನ್ನ ಸದಸ್ಯರ ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದ ಯಾವ ರೀತಿಯಲ್ಲಿ ಸದಸ್ಯರ ಸಮಸ್ಯೆಗಳನ್ನು ನೀಗಿಸಲಾಗಿದೆ? ಮಹಿಳಾ ಸಹಕಾರಿ ಸಂಘಗಳ ಮೂಲಕ ಸಮಾಜದಲ್ಲಿ ಸದಸ್ಯ ಮಹಿಳಾ ಪ್ರತಿನಿಧಿಗಳು ಮತ್ತು ಸದಸ್ಯರಲ್ಲದವರ ಸದಸ್ಯರ ನಡುವಿನ ಬದಲಾವಣೆಗಳೇನು? ಹಾಗೂ ಸಹಕಾರಿ ಸಂಘ ಮತ್ತು ಮಹಿಳಾ ಸಹಕಾರಿ ಸಂಘಗಳ ನಡುವಿನ ವ್ಯತ್ಯಾಸವೇನು? ಮತ್ತು ಸಮಾಜವು ಇವುಗಳ ಮೇಲಿನ ಅವಲಂಬನೆಯಿಂದ ಅಭಿವೃದ್ಧಿ ಹೊಂದುತ್ತಿದೆಯೋ? ಹೀಗೆ ಬೇರೆ ಬೇರೆ ರೀತಿಯ ಪ್ರಶ್ನೆಗಳನ್ನು ಈ ಅಧ್ಯಯನದಲ್ಲಿ ಕೇಳಲಾಗಿದೆ.

೧.೫: ಅಧ್ಯಯನದ ಉದ್ದೇಶ

ಮಹಿಳಾ ಸಹಕಾರಿ ಸಂಘದ ಮೂಲಕ ಮಹಿಳೆಯರ ಸಬಲೀಕರಣ ಎನ್ನುವ ಅಧ್ಯಯನದಲ್ಲಿ ಈ ಕೆಳಗಿನ ಉದ್ದೇಶಗಳನ್ನು ಇಟ್ಟುಕೊಂಡು ಅಧ್ಯಯನ ನೆಡೆಸುವುದಾಗಿದೆ.

- ಮಹಿಳಾ ಸಹಕಾರಿ ಸಂಘ, ಇದರ ರೂಪರೇಷೆ, ಸದಸ್ಯತ್ವ ನೋಂದಾವಣೆ, ಕಾರ್ಯಕ್ಷೇತ್ರಗಳನ್ನು ಅಧ್ಯಯನ ಮಾಡುವುದು.

- ಮಹಿಳಾ ಸಹಕಾರಿ ಸಂಘಗಳ ಮೂಲಕ ಮಹಿಳೆಯರ ಆರ್ಥಿಕ ಅಭಿವೃದ್ದಿ ಎಷ್ಟರ ಮಟ್ಟಿಗೆ ಸುಧಾರಿಸಿದೆ ಎನ್ನುವುದು ಪರೀಕ್ಷಿಸುವುದು.
- ಈ ಸಹಕಾರಿ ಸಂಘಗಳ ಮೂಲಕ ಮಹಿಳೆಯರ ಸಾಮಾಜಿಕ ಸ್ಥಿತಿಗಳು ಮತ್ತು ಸದಸ್ಯರಲ್ಲಿ ಆಗಿರುವ ಬದಲಾವಣೆಯನ್ನು ಗುರುತ್ತಿಸುವುದು.

ಈ ಮೇಲಿನ ಮುಖ್ಯವಾದ ಮೂರು ಉದ್ದೇಶಗಳನ್ನು ಇಟ್ಟುಕೊಂಡು ಈ ಅಧ್ಯಯನ ನೆಡೆಸುವುದಾಗಿದೆ.

೨.೬: ಅಧ್ಯಯನದ ಊಹೆಗಳು

ಮಹಿಳಾ ಸಹಕಾರಿ ಸಂಘಗಳ ಮೂಲಕ ಮಹಿಳೆಯರ ಆರ್ಥಿಕ ಸಾಮಾಜಿಕ ಅಭಿವೃದ್ದಿಯು ನಮ್ಮ ಅಧ್ಯಯನದ ಮುಖ್ಯ ಉದ್ದೇಶವಾಗಿರುವುದರಿಂದ ಅದರ ಪೂರ್ವ ತೀರ್ಮಾನಗಳು ಅಥವಾ ಊಹೆಗಳು ಅಗತ್ಯವಾಗಿರುತ್ತದೆ. ಏಕೆಂದರೆ ಈ ಊಹೆಗಳು ಅಧ್ಯಯನದ ಸರಿಯಾದ ರೂಪುರೇಷೆಗಳನ್ನು ಸಿದ್ದಪಡಿಸುತ್ತವೆ. ಮುಖ್ಯವಾದ ಅಧ್ಯಯನದ ಊಹೆಗಳೆಂದರೆ

- ಮಹಿಳಾ ಸಹಕಾರಿ ಸಂಘಗಳ ಮೂಲಕ ಮಹಿಳೆಯರ ಆರ್ಥಿಕ ಅಭಿವೃದ್ದಿ ಆಗಿದೆ.
- ಮಹಿಳಾ ಸಹಕಾರಿ ಸಂಘಗಳ ಮೂಲಕ ಮಹಿಳಾ ಸದಸ್ಯರು ಸಾಮಾಜಿಕವಾಗಿ ಅಭಿವೃದ್ದಿ ಹೊಂದಿದ್ದಾರೆ.

ಅಧ್ಯಯನದ ವಿಧಾನದಲ್ಲಿ ಅಧ್ಯಯನಕ್ಕೆ ಅಗತ್ಯವಿರುವ ಮಾಹಿತಿಯನ್ನು ಯಾವ ಮೂಲದಿಂದ ಮತ್ತು ಯಾವ ವಿಧಾನಗಳಿಂದ ಸಂಗ್ರಹಿಸಲಾಗುವುದು ಎನ್ನುವ ವಿವರಗಳನ್ನು ತಿಳಿಯಬಹುದು ಹಾಗೂ ವಿವಿಧ ವಿಧಾನಗಳ ಮೂಲಕ ಸಂಗ್ರಹಿಸಿದ ಮಾಹಿತಿಯನ್ನು ಹೇಗೆ ವಿಶ್ಲೇಷಿಸಲಾಗುತ್ತದೆ ಎನ್ನುವುದನ್ನು ಅಂಕಿ ಅಂಶಗಳ ಮೂಲಕ ತಿಳಿಯಬಹುದು.

ಈ ಅಧ್ಯಯನಕ್ಕೆ ಮುಖ್ಯವಾಗಿ ಮಾಹಿತಿಯನ್ನು ಪ್ರಾಥಮಿಕ ಮತ್ತು ಅನುಷಂಗಿಕ ಮೂಲಗಳಿಂದ ಪಡೆಯಲಾಗುತ್ತದೆ.ಈ ಅಧ್ಯಯನಕ್ಕೆ ಮುಖ್ಯವಾದ ಮಾಹಿತಿಯನ್ನು ಪ್ರಾಥಮಿಕ ಮತ್ತು ಅನುಷಂಗಿಕ ಮೂಲಗಳಿಂದ ಪಡೆಯಲಾಗುತ್ತದೆ. ಮಹಿಳಾ ಸಹಕಾರಿ ಸಂಘಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಅನುಷಂಗಿಕ ಮೂಲಗಳಿಂದ ಪಡೆದು ಸದಸ್ಯರಿಂದ ಪಡೆಯುವ ಪ್ರಾಥಮಿಕ ಮಾಹಿತಿಯನ್ನು ಸಂದರ್ಶನಗಳ ಮೂಲಕ ಪಡೆಯಲಾಗುತ್ತದೆ. ಮುಖ್ಯವಾಗಿ ಮಹಿಳೆಯರ ಆರ್ಥಿಕ ಸಾಮಾಜಿಕ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲು ಪ್ರಶ್ನಾವಳಿಯನ್ನು ರಚಿಸಿ ಮಹಿಳಾ ಸದಸ್ಯರ ಸಂದರ್ಶಿಸಿ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ. ಮತ್ತು ಸಂಗ್ರಹಿಸಿದ ಪ್ರಾಥಮಿಕ ಮತ್ತು ಅನುಷಂಗಿಕ ಮಾಹಿತಿಯನ್ನು ಕ್ರೋಢಿಕರಿಸಿ, ವಿಶ್ಲೇಷಿಸಲಾಗುತ್ತದೆ.

೨.೭: ಅಧ್ಯಾಯಗಳು

ಈ ಅಧ್ಯಾಯನದಲ್ಲಿ ಬರುವ ಅಧ್ಯಾಯಗಳನ್ನು ಈ ಕೆಳಗಿನಂತೆ ವಿಂಗಡಿಸಲಾಗುವುದು.

- ಸಹಕಾರ ಮತ್ತು ಸಹಕಾರ ತತ್ವ
- ಪೀಠಿಕೆ, ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ
- ಮಹಿಳಾ ಸಬಲೀಕರಣ
- ಕುಂದಾಪುರ ತಾಲೂಕು ಭೌಗೋಳಿಕ ಅನಾವರಣ
- ಕ್ಷೇತ್ರ ಕಾರ್ಯ ಅಧ್ಯಯನದ ವಿಶ್ಲೇಷಣೆ

ಪ್ರಸ್ತುತ ಅಧ್ಯಯನವು ಮಹಿಳಾ ಸಹಕಾರಿ ಸಂಘದಿಂದ ಮಹಿಳಾ ಸಬಲೀಕರಣ ಎನ್ನುವ ಸಂಶೋದನಾ ಅಧ್ಯಯನವು ಭೌಗೋಳಿಕವಾಗಿ ಕರ್ನಾಟಕ ರಾಜ್ಯದ ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿಗೆ ಮಾತ್ರ ಸೀಮಿತವಾಗಿದೆ. ಮಹಿಳೆಯರಿಗಾಗಿಯೇ ಸ್ಥಾಪಿತವಾದ ಸಹಕಾರಿ ಸಂಘಗಳು ಸದಸ್ಯರ ಆರ್ಥಿಕವಾಗಿ, ಸಾಮಾಜಿಕವಾಗಿ ಸಬಲೀಕರಣದಲ್ಲಿ ಹೇಗೆ ತಮ್ಮ ಪಾತ್ರವನ್ನು ವಹಿಸಿದೆ ಎಂದು ತಿಳಿಯುವ ಪ್ರಯತ್ನವೇ ಈ ಸಂಶೋದನೆಯಾಗಿದೆ.ಆದ್ದರಿಂದ ಈ ಅಧ್ಯಯನವು ಮುಖ್ಯವಾಗಿ ಐದು ಅಧ್ಯಾಯಗಳಾಗಿ ವಿಂಗಡಿಸಲಾಗಿದೆ. ಮೊದಲನೆ ಅಧ್ಯಾಯವು ಪೀಠಿಕೆ, ಸಹಕಾರಿ ತತ್ವ,ಸಹಕಾರ,ಮಹಿಳಾ ಸಹಕಾರಿ ಸಂಘ, ಮಹಿಳೆ ಮತ್ತು ಅಭಿವೃದ್ಧಿ,ಅಧ್ಯಯನದ ಸಮಸ್ಯೆಗಳು,ಉದ್ದೇಶಗಳು. ಅಧ್ಯಯನ ಊಹೆ, ವಿಧಾನಗಳು ,ವ್ಯಾಪ್ತಿ ಇತಿಮಿತಿಗಳು ಮತ್ತು ವಿಷಯಕ್ಕೆ ಸಂಬಂಧಿಸಿದ ಸಾಹಿತ್ಯ ವಿಮರ್ಶೆಗಳು ಒಳಗೊಂಡಿದೆ. ಎರಡನೇ ಅಧ್ಯಯನವು, ಮಹಿಳಾ ಸಬಲೀಕರಣ, ಆರ್ಥಿಕ, ಸಾಮಾಜಿಕ, ಗ್ರಾಮೀಣ ಮಹಿಳೆ ಸಂವಿದಾನದಲ್ಲಿ ಸ್ಥಾನಮಾನ, ಸಹಕಾರಿ ಮತ್ತು ಮಹಿಳಾ ಸಬಲೀಕರಣದ ಬಗ್ಗೆ ಮಾಹಿತಿಯನ್ನು ಒಳಗೊಂಡಿದೆ.ಮೂರನೇ ಅಧ್ಯಯನವು ಕುಂದಾಪುರ ತಾಲೂಕಿನ ಸಾಮಾನ್ಯ ಪರಿಚಯ, ಸಹಕಾರಿ ಸಂಘಗಳ ಪರಿಚಯ, ಕಾರ್ಯ ನಿರ್ವಹಣೆಯ ಬಗ್ಗೆ ಸಂಕ್ಷಿಪ್ತವಾಗಿ ಮಾಹಿತಿ ನೀಡುತ್ತದೆ. ನಾಲ್ಕನೇ ಅಧ್ಯಯನವು-ಮಹಿಳಾ ಸಹಕಾರಿ ಸಂಘದಿಂದ ಮಹಿಳೆಯರ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯ ಕ್ಷೇತ್ರ ಕಾರ್ಯದಾರಿತ ಮಾಹಿತಿಗಳನ್ನು ಉಪಯೋಗಿಸಿ, ವಿಶ್ಲೇಷಿಸಲಾಗುವುದು.ಸದಸ್ಯರ ಪ್ರಾಥಮಿಕ ವಿವರಗಳು ಪೂರಕ ಮಾಹಿತಿಗಳು ಸಬಲೀಕರಣದಲ್ಲಿ ಬ್ಯಾಂಕಿನ ಪಾತ್ರ ಇವುಗಳನ್ನು ಸಂಗ್ರಹಿಸಿದ ಮಾಹಿತಿಗಳ ಮೂಲಕ ನೀಡುವುದು.ಐದನೇ ಅಧ್ಯಾಯದಲ್ಲಿ ಅಧ್ಯಾಯನದ ಪಲಿತಗಳು,ಸಲಹೆಗಳು ಹಾಗೂ ಉಪಸಂಹಾರವನ್ನು ನೀಡುವುದು.

ಕೊನೆ ಟಿಪ್ಪಣಿಗಳು

- ೧) ಡಾ. ಎಸ್. ನಕ್ಕೀರನ್- ಕೊ-ಆಪರೇಟಿವ್ ಮ್ಯಾನೆಜ್‌ಮೆಂಟ ತತ್ವಗಳು ಮತ್ತುತಂತ್ರಗಳು
- ೨) ಟಿ.ಆರ್.ಚಂದ್ರಶೇಖರ- ಮಹಿಳಾ ಸಶಕ್ತೀಕರಣ ಪ್ರಸಾರಂಗ ಹಂಪಿ ಕನ್ನಡ ವಿಶ್ವವಿದ್ಯಾಲಯ , ಡಿಸೆಂಬರ್ ೨೦೦೧
- ೩) ಡಾ.ಬಾಬಾಸಾಹೇಬ್ ಅಂಬೇಡ್ಕರರ ಬರಹಗಳು ಮತ್ತು ಬಾಷಣಗಳು ಸಂ.೧.ಪ್ರ ೬೩(೫)
- ೪) ಉದಯ ಕುಮಾರ ಇರ್ವತೂರು ಮತ್ತು ತಿ.ನಂ. ಶೀಧರ ಪ್ರಸಾರಂಗ ಹಂಪಿ ಕನ್ನಡ ವಿಶ್ವವಿದ್ಯಾಲಯ, ಡಿಸೆಂಬರ್ ೨೦೦೧
- ೫) ಸುದರ್ಶನ ಭಟ್ಟ ಮತ್ತು ಕೇಸರಿ ಯುವರಾಜ್ –ವಿಜಯ ಕರ್ನಾಟಕ ಮಂಗಳೂರು ಅಕ್ಟೋಬರ್ ೨೦೧೪
- ೬) ಪ್ರತಿಮಾ.ಬಿ.ಸ್ವಸಹಾಯ ಗುಂಪುಗಳು ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ ಎಂ.ಫಿಲ್ ಪ್ರಬಂಧ ಹಂಪಿ ಕನ್ನಡ ವಿಶ್ವವಿದ್ಯಾಲಯ
- ೭) ಪೂಜಾ ಮಂಡೆಲ್-ಭಾರತದಲ್ಲಿ ಮಹಿಳಾ ಸಶಕ್ತೀಕರಣ.
- ೮) ಡಾ ಲೀಂಡಾ ಶಾ- ಮಹಿಳೇ ಮತ್ತು ಸಹಕಾರಿ ಸಮಾನತೆ, ಸಬಲೀಕರಣ, ಉನ್ನತೀಕರಣ
- ೯) ಎಲಿಜಬೆತ ಲಿಕೊಜಿತ- ಸಹಕಾರಿ ವಿಬಾಗ ಲೆಸೋತೊ.-ಪ್ರಾಮೀಸಿಂಗ್ ಪ್ರಾಕ್ಟೀಸಸ್-ಆಫ್ರೀಕಾದಲ್ಲಿಸಹಕಾರಿ ಸಂಘ ದುಡಿಯುವ ಮಹಿಳೆಯರಿಗೆ (ಐ ಎಲ್ ಓ).

ಅಧ್ಯಾಯ: ೩

ಮಹಿಳಾ ಸಬಲೀಕರಣ

ಅಧ್ಯಾಯಗಳು: ೩

ಮಹಿಳಾ ಸಬಲೀಕರಣ

ಸಬಲೀಕರಣ ಎಂಬ ಪದವು ಆಧುನಿಕ ಸಮಾಜಕ್ಕೆ ಹೊಸ ಪರಿಕಲ್ಪನೆಯನ್ನು ನೀಡಿದೆ.೧೯೯೦ರ ದಶಕದಲ್ಲಿ ಭಾರತದಲ್ಲಿ ಮಹತ್ವರವಾದ ಬದಲಾವಣೆಗಳಾದ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪರಿಣಾಮವಾಗಿ ಮಹಿಳಾ ಸಬಲೀಕರಣವು ಹೆಚ್ಚು ಮಹತ್ವವನ್ನು ಪಡೆದುಕೊಂಡಿತು. ಸಬಲೀಕರಣವು ಒಂದು ಅಭಿವೃದ್ದಿಯ ನಿರಂತರ ಪ್ರಕ್ರಿಯೆಯಾಗಿದ್ದು,ಇದು ವ್ಯಕ್ತಿ ಅಥವಾ ಸಮುದಾಯದ ಎಳಿಗೆಯನ್ನು ಸೂಚಿಸುವ ಪರಿಕಲ್ಪನೆಯಾಗಿದೆ. ಸಾಮಾಜಿಕವಾಗಿ, ಆರ್ಥಿಕವಾಗಿ ಸಾಂಸ್ಕೃತಿಕವಾಗಿ ಒಂದು ಸಮುದಾಯವು ಸಮರ್ಥರಾದಾಗ ಆ ಸಮುದಾಯವು ಸದೃಡವಾಗಿದೆ. ಹಾಗೂ ಅಭಿವೃದ್ದಿ ಹೊಂದಿದೆ ಎಂದು ಹೇಳಬಹುದು. ಹಾಗೆಯೇ ಮಹಿಳಾ ಸಬಲೀಕರಣವು ಮಹಿಳೆಯರ ಅಭಿವೃದ್ದಿಯ ಸಂಕೇತವಾಗಿದೆ.

ಭಾರತದಲ್ಲಿ ಸಬಲೀಕರಣವು ತೊಂಭತ್ತರ ದಶಕದಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿತು. ಸಬಲೀಕರಣವೆಂದರೇ ಸಮರ್ಥರಾಗುವುದು,ಎಂದು ಹೇಳಬಹುದು ಅಂದರೆ ವ್ಯಕ್ತಿ ಅಥವಾ ಗುಂಪುಗಳ ಜೀವನದ ಮಟ್ಟ ಸುಧಾರಣೆ ವ್ಯಕ್ತಿತ್ವ ವಿಕಾಸನ, ಅಧಿಕಾರವನ್ನು ಹೊಂದುವುದು ಹೀಗೆ ಬೇರೆ ಬೇರೆ ರೀತಿಯಾಗಿ ಅರ್ಥೈಯಿಸಬಹುದಾಗಿದೆ. ಕೆಲ್ಲರ್(೧೯೯೧)ರವರು ಇದಕ್ಕೆ ಅವರದೇ ಆದ ಅರ್ಥವನ್ನು ನೀಡಿದ್ದಾರೆ.ಆದೆಂದರೆ ಸಬಲೀಕರಣವು ಒಂದು ನಿರಂತರ ಪ್ರಕ್ರಿಯೆಯಾಗಿದ್ದು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಮಹಿಳೆಯರು ತಮ್ಮ ಸ್ವಾವಲಂಬನೆ ಬದುಕಿಗಾಗಿ ತಮಗಿರುವ ಹಕ್ಕನ್ನು ಪ್ರತಿಪಾದಿಸುವುದಕ್ಕಾಗಿ ಒಂದು ಸ್ವಯಂ ಪ್ರೇರಿತರಾಗಿ ಸಂಘಟಿತರಾಗುವುದಾಗಿದೆ.

೩.೧: ಮಹಿಳಾ ಸಬಲೀಕರಣ

ಸಬಲೀಕರಣವು ಆಧುನಿಕ ಪ್ರಕ್ರಿಯೆಯಾಗಿದ್ದು, ಅಂತರಾಷ್ಟ್ರೀಯ ಪರಿಕಲ್ಪನೆಯಾಗಿದೆ.ಭಾರತದ ಒಟ್ಟು ಮಹಿಳಾ ಜನಸಂಖ್ಯೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ವಾಸಿಸುವ ಮಹಿಳೆಯರ ಪ್ರಮಾಣವೇ ಹೆಚ್ಚು ಇವರುಗಳು ನಗರ ಪ್ರದೇಶದಲ್ಲಿ ವಾಸಿಸುವ ಮಹಿಳೆಯರು ಪಡೆದುಕೊಳ್ಳುವ ಕೆಲವೊಂದು ಸೌಲಭ್ಯದಿಂದ ವಂಚಿತರಾಗುತ್ತಿದ್ದಾರೆ. ಗ್ರಾಮೀಣ ಮಹಿಳೆಯರು ಬಡತನದಲ್ಲಿ ತಮ್ಮ ಜೀವನ ಸಾಗಿಸುತ್ತಿದ್ದು, ಮುಗ್ದರು, ಅನಕ್ಷರಸ್ಥರು ಮತ್ತು ಕೆಲವೊಂದು ಸಾಮಾಜಿಕ ತುಳಿತಕ್ಕೆ ಒಳಗಾಗಿರುವರಾಗಿದ್ದು ಅಸಂಘಟಿತರಾಗಿದ್ದು, ತಮಗೆ ಸರಿಯಾದ ಪ್ರಾತಿನಿದ್ಯವಿಲ್ಲದೇ ಜೀವನ ಸಾಗಿಸುತ್ತಿದ್ದಾರೆ. ಇವರಿಗೆ ಸರಿಯಾದ ಮಾರ್ಗದರ್ಶನ ಸಂಘಟನೆಯ ಮಹತ್ವದ ಬಗ್ಗೆ ಅರಿವು ಮೂಡಿಸುವುದರಿಂದ ಅವರನ್ನು ಶಕ್ತರನ್ನಾಗಿ ಮಾಡಬಹುದು. ಈ ಎಲ್ಲ ಮಹಿಳೆಯರ ಸಮಸ್ಯೆಯನ್ನು ಅರಿತ ಸರಕಾರವು ೧೯೭೧ ರಲ್ಲಿ ಸಮಿತಿಯೊಂದನ್ನು ನೇಮಿಸುವುದರ ಮೂಲಕ ಮಹಿಳೆಯರ ಸ್ಥಿತಿಗತಿಯನ್ನು ಸುಧಾರಿಸುವ ನಿಟ್ಟಿನಲ್ಲಿ ಗಂಭೀರ ಪ್ರಯತ್ನವನ್ನು ಮಾಡಲಾಯಿತು.ಆದರ ವರದಿಯ ಪರಿಣಾಮವಾಗಿ ಮಹಿಳೆಯರಿಗಾಗಿ ಬೇರೆ ಬೇರೆ ಯೋಜನೆಗಳನ್ನು ರಾಷ್ಟ್ರೀಯ ನೀತಿಗಳನ್ನು ರಚಿಸಲು ಸಾದ್ಯವಾಯಿತು.

ಮಹಿಳಾ ಯೋಜನೆಗಳಿಗೆ ಹೆಚ್ಚು ಹೆಚ್ಚು ಆರ್ಥಿಕವಾಗಿ ಸಹಾಯವನ್ನು ಮಾಡುವುದರಿಂದ ಮಹಿಳೆಯ ಅಭಿವೃದ್ಧಿಗೆ ಸರಕಾರವು ಕಟಿಬದ್ಧವಾಗುವ ಹಾಗೆ ಮಾಡಲಾಯಿತು. ಹಾಗೆಯೇ ೧೯೯೨ರಲ್ಲಿ ರಾಷ್ಟ್ರೀಯ ಮಹಿಳಾ ಆಯೋಗವನ್ನು ಹಾಗೂ ೧೯೯೩ರಲ್ಲಿ ರಾಷ್ಟ್ರೀಯ ಮಹಿಳಾ ಕೋಶವನ್ನು ನೇಮಿಸಿತು.

ದೇಶದ ಪಂಚವಾರ್ಷಿಕ ಯೋಜನೆಗಳಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿಯ ಜೊತೆಗೆ ಮಹಿಳೆಯರನ್ನು ಆರ್ಥಿಕವಾಗಿ ಸ್ವತಂತ್ರರನ್ನಾಗಿಸಲು ಹಾಗೂ ಸಮಾಜದ ಮುಖ್ಯ ವಾಹಿನಿಗೆ ತರುವ ಪ್ರಯತ್ನವಾಗಿ ಬೇರೆ ಬೇರೆ ಯೋಜನೆಗಳನ್ನು ರೂಪಿಸಲಾಯಿತು. ೯ನೇ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳೆಯರ ಸಬಲೀಕರಣಕ್ಕಾಗಿ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಲಾಯಿತು. ಭಾರತ ಸರ್ಕಾರವು ೧೯೯೬ರಲ್ಲಿ ಮಹಿಳಾ ಸಶಕ್ತೀಕರಣಕ್ಕಾಗಿ ರಾಷ್ಟ್ರೀಯ ನೀತಿಯನ್ನು ಕೂಡ ನೇಮಿಸಿತು.

೩.೨: ಆರ್ಥಿಕ ಸಬಲೀಕರಣ

ಸಬಲೀಕರಣವು ಆರ್ಥಿಕವಾಗಿ ಸಮರ್ಥರಾದಾಗ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಅಂದರೇ ಎಲ್ಲಾ ಅಭಿವೃದ್ಧಿಯ ಮೂಲ ಮಂತ್ರವೇ ಆರ್ಥಿಕ ಅಭಿವೃದ್ಧಿ ಗ್ರಾಮೀಣ ಮಹಿಳೆಯರು ಮುಖ್ಯವಾಗಿ ಉದ್ಯೋಗ, ಶಿಕ್ಷಣ, ಆರೋಗ್ಯದ ಸಮಸ್ಯೆ ಕೌಶಲ್ಯದ ಕೊರತೆಯಿಂದ ತೊಂದರೆ ಅನುಭವಿಸುತ್ತಿದ್ದು,ಅಸಂಘಟಿತರಾಗಿದ್ದಾರೆ.ಮುಖ್ಯವಾಗಿ ಅವರಿಗೆ ಆರ್ಥಿಕ ಸಹಾಯದಿಂದ ಉದ್ಯೋಗ ಸೃಷ್ಟಿ,ತರಬೇತಿ ನೀಡುವುದರ ಮೂಲಕ ಸಬಲರಾಗುವಂತ ಮಾಡುವುದು ಅತೀ ಅವಶ್ಯಕವಾಗಿದೆ. ಕೇಂದ್ರ ಸರ್ಕಾರದ ಅನೇಕ ಇಲಾಖೆಗಳು ಮಹಿಳೆಯರ ಏಳಿಗೆಗೆ ಅಗತ್ಯವಿರುವ ಮತ್ತು ಉತ್ತಮ ಆದಾಯ ತಂದು ಕೊಡುವ ಯೋಜನೆಯನ್ನು ಮಹಿಳೆಯರಿಗಾಗಿಗೆ ಜಾರಿಗೆ ತರುತ್ತಿವೆ. ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆ, ಜವಾಹರ್ ಲಾಲ್ ರೋಜಗಾರ್ ಯೋಜನೆ, ಉದ್ಯೋಗ ಭರವಸೆ ಯೋಜನೆ, ರುಡ್ ಸೆಟ್ ಸಂಸ್ಥೆಯ ಯೋಜನೆಗಳು, ಮಹಿಳೆಯರ ಅಭಿವೃದ್ಧಿಗಾಗಿ ಯೋಜನೆಗಳನ್ನು ಹಾಕಿಕೊಂಡು, ಸ್ವಾವಲಂಬಿಗಳಾಗಿ ಬದುಕುವ ಪ್ರಯತ್ನ ನೆಡೆಸುತ್ತಿವೆ.

೩.೩: ಸಾಮಾಜಿಕ ಸಬಲೀಕರಣ

ಸಾಮಾಜಿಕ ಸಬಲೀಕರಣವು, ಸಮಾಜದಲ್ಲಿ ಮಹಿಳೆಯರಿಗೆ ಸಮಾನ ಅವಕಾಶವನ್ನು ಕಲ್ಪಸಿಕೊಡುವುದಾಗಿದೆ. ಅಂದರೆ ಸಾರ್ವಜನಿಕ ಕಾರ್ಯಕ್ರಮಗಳಲ್ಲಿ, ಸರ್ಕಾರಿ ಯೋಜನೆಗಳಲ್ಲಿ ಸಮಾನವಾದ ಅವಕಾಶ, ಮಾನ್ಯತೆಯನ್ನು ನೀಡುವುದರಿಂದ ಮಹಿಳೆಯರು ಸಾಮಾಜಿಕವಾಗಿ ಸಬಲರಾಗಬಹುದು.ನಮ್ಮ ಸಂವಿಧಾನವು ಮಹಿಳೆಯರಿಗೆ ಸಮಾನ ಅವಕಾಶವನ್ನು ಎಲ್ಲಾ ಕ್ಷೇತ್ರಗಳಲ್ಲಿಯೂ ನೀಡಿದೆ. ಅಂದರೆ ನಮ್ಮ ಕಾನೂನಿನ ಎದುರು ಪ್ರತಿಯೊಬ್ಬರು ಸಮಾನರು ಎಂದಾಯಿತು .ಜಾತಿ, ಮತ, ಜನಾಂಗ, ಲಿಂಗ ತಾರತಮ್ಯವನ್ನು ನಿಷೇದಿಸಲಾಗಿದೆ.ಅದೇ ರೀತಿ ಮಹಿಳೆಯರ ಸಾಮಾಜಿಕ ಸಬಲೀಕರಣಕ್ಕೆ ದೇಶದಲ್ಲಿ ಇಂದು ಬೇರೆ ಬೇರೆ ಕಾನೂನುಗಳನ್ನು ಜಾರಿಗೊಳಿಸಲಾಗಿದೆ.ಅದರ ಮುಖಾಂತರ ಸಾಮಾಜಿಕವಾಗಿ ಮಹಿಳೆಯರು ಸಮರ್ಥರು ಎಂದು ತೋರಿಸಬಹುದು.

ನಮ್ಮ ದೇಶದಲ್ಲಿ ಮಹಿಳಾ ಸಬಲೀಕರಣಕ್ಕೆ ಸರ್ಕಾರ ಮತ್ತು ಸರಕಾರೇತರ ಸಂಘ ಸಂಸ್ಥೆಗಳು ಹಾಕಿಕೊಂಡ ಕೆಲವೊಂದು ಯೋಜನೆಗಳು, ಕಾರ್ಯಕ್ರಮಗಳು ಯಶ್ವಸಿಗೊಂಡಿದ್ದರೂ, ಇನ್ನು ಕೆಲವು ಸರಿಯಾದ ರೀತಿಯಲ್ಲಿ ಪ್ರಯೋಜನಗೊಂಡಿಲ್ಲ .ಮಹಿಳಾ ಸಾಕ್ಷರತೆ ಪ್ರಮಾಣ ಹೆಚ್ಚಾಗಿದ್ದು ಜೀವನ ಮಟ್ಟವು ಸುದಾರಿಸಿದೆ. ಹೆಣ್ಣು ಮಕ್ಕಳ ಮದುವೆಯ ವಯಸ್ಸು ಎರಿಕೆಯಾಗುತ್ತಿದ್ದು, ತಾಯಂದಿರ ಮರಣದ ಪ್ರಮಾಣ ಕಡಿಮೆಯಾಗುತ್ತಿರುವುದು.ವೈದ್ಯಕೀಯ ಕ್ಷೇತ್ರವು ಹೆಚ್ಚು ಅಭಿವೃದ್ದಿಯನ್ನು ಹೊಂದಿದೆ ಎನ್ನಬಹುದು.

ಸರ್ಕಾರ ಬೇರೆ ಬೇರೆ ಯೋಜನೆಗಳನ್ನು ಮಹಿಳೆಯರಿಗಾಗಿ ಹಾಕಿಕೊಂಡಿದ್ದರೂ ಇಂದು ಶೇ ೩೦ ರಷ್ಟು ಮಹಿಳೆಯರು ಅನಕ್ಷರಸ್ಥರಾಗಿದ್ದು ಅಸಂಘಟಿತ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ. ಗರ್ಭಿಣಿ ಮಹಿಳೆಯರ ರಕ್ತಹೀನತೆಯ ಸಮಸ್ಯೆ, ಸರಿಯಾದ ಪೌಷ್ಟಿಕಾಂಶದ ಕೊರತೆ,ಹಾಗೂ ಮಾನಸಿಕ ಅಶಾಂತಿಗಳು ಹೆಚ್ಚುತ್ತಿದ್ದು ಅತ್ಯಾಚಾರ, ಕೊಲೆ, ಸುಲಿಗೆಗಳು ಮಹಿಳೆಯರನ್ನು ಕಾಡುತ್ತಿವೆ.

ನಮ್ಮ ದೇಶದಲ್ಲಿ ಸ್ತ್ರೀ ಮತ್ತು ಪುರುಷರ ಮಧ್ಯ ಸಾಮಾಜಿಕ ,ಆರ್ಥಿಕ ತಾರತಮ್ಯಗಳು ಮೊದಲಿನಿಂದಲೂ ಇದ್ದುಪುರುಷನು ಪ್ರಥಮ ಪ್ರಜೆಯಂತೆ ಮಹಿಳೆಯರು ದ್ವಿತೀಯ ದರ್ಜೆಯ ಪ್ರಜೆಯಂತೆ ಸಮಾಜದಲ್ಲಿ ಬದುಕುವ ಹಾಗೆ ಆಗಿದೆ. ಸಮಾಜದ ಕೆಲವೊಂದು ಮೂಡನಂಬಿಕೆ,ಕಟ್ಟುಪಾಡುಗಳಲ್ಲಿ ಮಹಿಳೆಯು ಬಂದಿಯಾಗಿದ್ದಾಳೆ. ಈ ಎಲ್ಲಾ ಸಮಸ್ಯೆಗಳು ಮಹಿಳೆಯರನ್ನು ಸಬಲೀಕರಣ ಹೊಂದುವಲ್ಲಿ ಅಡ್ಡಗೋಡೆಗಳಾಗಿದೆ.

ಮಹಿಳೆಯು ರಾಜಕೀಯವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಪುರುಷರಷ್ಟು ಸಮಾನರಾದಾಗ ಮಾತ್ರ ಸಬಲೀಕರಣಕ್ಕೆ ಸರಿಯಾದ ಅರ್ಥ ಬರುತ್ತದೆ. ಗ್ರಾಮೀಣ ಮಹಿಳೆಯರು ಸಹಕಾರಿ ಸಂಘಗಳಲ್ಲಿ ಸ್ವಸಹಾಯ ಸಂಘಗಳಲ್ಲಿ ಹಾಗೂ ಇನ್ನಿತರ ಸಂಘ ಸಂಸ್ಥೆಗಳಲ್ಲಿ ಪಾಲ್ಗೊಳ್ಳುವ ಮೂಲಕ ಆರ್ಥಿಕವಾಗಿ ಅಂದರೆ ಉಳಿತಾಯದ ಮನೋಭಾವವು ಹೆಚ್ಚಾಗಿ ಸ್ವಾವಲಂಬನೆ ಜೀವನ ನೆಡೆಸಲು ಸಾಧ್ಯವಾಗುತ್ತದೆ.ಒಟ್ಟಿನಲ್ಲಿ ಮಹಿಳಾ ಸಬಲೀಕರಣವೆನ್ನುವುದು ನಿರಂತರ ಪ್ರಕ್ರಿಯೆಯಾಗಿದ್ದು, ಬದಲಾವಣೆಗೆಗಾಗಿ ನಿರಂತರವಾಗಿ ನೆಡೆಯುವ ಹೋರಾಟವೆನ್ನಬಹುದು,ಅದರ ಮುಖಾಂತರ ಆರ್ಥಿಕ ಸುಧಾರಣೆ, ಸಾಮಾಜಿಕವಾಗಿ ಪ್ರಬಲರಾಗುವುದು, ರಾಜಕೀಯವಾಗಿ ಶಕ್ತರಾಗುವುದು ಸಾಂಸ್ಕೃತಿಕವಾಗಿ ಶ್ರೀಮಂತರಾಗವುದರ ಮೂಲಕ ಮಹಿಳೆಯರು ಸಬಲೀಕರಣಗೊಳ್ಳುಲು ಸಾಧ್ಯವಿದೆ.

೩.೪: ಅಧ್ಯಯನಕ್ಕೆ ಮೂಲವಾಗಿರುವ ಸಮಸ್ಯೆಗಳು

ನಮ್ಮ ಸಂವಿಧಾನವು ಪುರುಷ ಮತ್ತು ಮಹಿಳೆಯರಿಗೆ ಸಮಾನ ಹಕ್ಕುಗಳನ್ನು ನೀಡಿದೆ. ಸಂವಿಧಾನದ ಅನುಚ್ಛೇದ ೧೪,೧೫,೨೧,೨೩ ಗಳಲ್ಲಿ ಮಹಿಳೆಯರ ರಕ್ಷಣೆಗಾಗಿ ಹಲವಾರು ಉಪಬಂಧಗಳನ್ನು ಕಲ್ಪಸಿದೆ. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯು ಪುರುಷನಿಗೆ ಸಮಾನಂತರವಾಗಿ ಒಗ್ಗಟ್ಟಿನಲ್ಲಿ ಕೆಲಸ ಮಾಡಿದರೆ ಎನ್ನನ್ನಾದರೂ ಸಾದಿಸಬಹುದಾಗಿದೆ.ಇದಕ್ಕೆ ಪುಷ್ಟೀಕರಿಸುವಂತೆ, ಮಹಿಳಾ ಸಹಕಾರಿ ಸಂಘಗಳು ಮಹಿಳಾ ಸಬಲೀಕರಣಕ್ಕೆ ಹಲವಾರು ಸಂಶೋದನೆಗಳು ನೆಡೆದಿರುತ್ತದೆ. ಆದರೆ ಪ್ರತ್ಯೇಕ ಮಹಿಳೆಯರಿಗಾಗಿ ಅವರ ಅಭಿವೃದ್ದಿಗಾಗಿ ಸ್ಥಾಪಿತವಾಗಿರುವ ಮಹಿಳಾ ಸಹಕಾರಿ ಸಂಘಗಳು ಸಬಲೀಕರಣಕ್ಕೆ ಆರ್ಥಿಕ, ಸಾಮಾಜಿಕವಾಗಿ ಹೇಗೆ ಸಹಕರಿಸುತ್ತಿವೆ ಎನ್ನುವುದು ಅಧ್ಯಯನದ ಮುಖ್ಯ ಉದ್ದೇಶವಾಗಿದೆ. ಇತರ ಸಹಕಾರಿ ಸಂಘಗಳು ಇರುವ ಹಾಗೆಯೇ ಮಹಿಳೆಯರಿಗಾಗಿಯೇ ಪ್ರತ್ಯೇಕ ಸಂಘವಿರುವಾಗುವಿಕೆ ಅವರ ಅಭಿವೃದ್ದಿ ಸಾಧ್ಯವಾಗಿಲ್ಲ ಎಂಬ ಪ್ರಶ್ನೆ ಸಹಜವಾದುದು.ಅದಕ್ಕಾಗಿ ಆಧುನಿಕ ಯುಗದಲ್ಲಿ ಮಹಿಳೆಯು ಎಲ್ಲಾ ಕ್ಷೇತ್ರಗಳಲ್ಲಿ ತನ್ನ ಛಾಪನ್ನು ತೋರಿಸಿರುವಾಗ ಕುಂದಾಪುರ ತಾಲೂಕಿನಲ್ಲಿ ಕಾರ್ಯಚರಿಸುತ್ತಿರುವ ಮಹಿಳಾ ಸಹಕಾರಿ ಬ್ಯಾಂಕುಗಳು ಕೆಲವೊಂದು ಮಹಿಳೆಯರಿಗೆ ಸರಿಯಾದ ಮಾಹಿತಿ ಇಲ್ಲದ್ದಿದ್ದರೂ ಸದಸ್ಯರಾಗಿರುವ ಮಹಿಳೆಯರ ಆರ್ಥಿಕ, ಸಾಮಾಜಿಕವಾಗಿ ಸದೃಡವಾಗುವಂತೆ ಮಾಡುತ್ತಿರುವ ಈ ಸಹಕಾರಿ ಸಂಘಗಳ ಅಧ್ಯಾಯನವು ದೇಶದ ಅಭಿವೃದ್ದಿಯಲ್ಲಿ ಮಹತ್ವರವಾದ ಪಾತ್ರವಹಿಸಬಹುದು ಎನ್ನುವ ನಂಬಿಕೆಯಿಂದ ಕುಂದಾಪುರ ತಾಲೂಕನ್ನು ಕೇಂದ್ರವಾಗಿಸಿಕೊಂಡು ಸಹಕಾರಿ ಸಂಘದ ಸದಸ್ಯರ ಆರ್ಥಿಕ ಸಾಮಾಜಿಕ ವಿಷಯಗಳ ಬಗ್ಗೆ ಸಂಶೋದನಾ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ.

ಅಧ್ಯಾಯ: ೪

ಕುಂದಾಪುರ ತಾಲೂಕು ಭೌಗೋಳಿಕ ಅನಾವರಣ

ಅಧ್ಯಾಯಗಳು: ೪

ಕುಂದಾಪುರ ತಾಲೂಕು ಭೌಗೋಳಿಕ ಅನಾವರಣ

ಕರಾವಳಿ ಕರ್ನಾಟಕದ ಇತಿಹಾಸ ಪ್ರಸಿದ್ದ ತಾಲೂಕು ಕೇಂದ್ರಗಳಲ್ಲಿ ಕುಂದಾಪುರ ತಾಲೂಕಿಗೆ ಮಹತ್ವದ ಸ್ಥಾನವಿದೆ. ಆಧುನಿಕತೆಗೆ ತೆರೆದುಕೊಳ್ಳುತ್ತಿರುವ ನಡುವೆಯೂ ತನ್ನದೆ ಆದ ಸಾಂಸ್ಕೃತಿಕ ಬೇರುಗಳನ್ನು ಇಂದಿಗೂ ಸಹ ಬಹುಮಟ್ಟಿಗೆ ಬಳಸಿಕೊಂಡ ಭೂ ಪ್ರದೇಶ ಇದು ಕುಂದಾಪುರ ನಗರವು ತಾಲೂಕು ಕೇಂದ್ರವಾಗಿದ್ದು ,ಜಿಲ್ಲಾ ಕೇಂದ್ರ ಉಡುಪಿಯಿಂದ ಸುಮಾರು ೩೪ ಕಿ.ಮೀ ದೂರದಲ್ಲಿವೆ. ಈ ಭೂ ಪ್ರದೇಶವು ಸಮುದ್ರ ಮಟ್ಟದಿಂದ ೨೬ ಅಡಿ ಎತ್ತರದಲ್ಲಿದೆ. ಹಂಚಿನ ಕಾರ್ಖಾನೆ ಮತ್ತು ಹೋಟೇಲ್ ಉದ್ಯಮಕ್ಕೆ ಕುಂದಾಪುರವು ಬಲು ಹಿಂದಿನಿಂದಲೂ ಪ್ರಸಿದ್ಧಿ ಕುಂದ ವರ್ಮನೆಂಬ ಅರಸ ಪಂಚಗಂಗವಳಿಯ ಹತ್ತಿರ ಕಟ್ಟಿಸಿರುವ ಕುಂದೇಶ್ವರ ದೇವಸ್ಥಾನ ಇಲ್ಲಿನ ಪ್ರಮುಖ ಶ್ರದ್ಧಾ ಕೇಂದ್ರವಾಗಿದೆ. ಈ ದೇವಸ್ಥಾನದ ಕಾರಣದಿಂದಲೇ ಕುಂದಾಪುರ ಎಂಬ ಹೆಸರು ಬಂತು ಎಂಬ ಪ್ರತೀತಿಯೂ ಇದೆ. ಕುಂದ ಎಂದರೆ ಮಲ್ಲಿಗೆ ಎಂದರ್ಥ. ಮಲ್ಲಿಗೆಯನ್ನು ಈ ಪ್ರದೇಶದಲ್ಲಿ ಬಲು ಹಿಂದಿನಿಂದಲೂ ಸಾಕಷ್ಟು ಪ್ರಮಾಣದಲ್ಲಿ ಬೆಳೆಯುತ್ತಿದ್ದರು. (ಕನರಾಡಿ ವಾದಿರಜ ಭಟ್ಟ, ಕುಂದಾಪುರ ತಾಲೂಕು ದರ್ಶನ, ಐಬಿಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು, ೧೯೮೬.) ಈ ಹಿನ್ನೆಲೆಯಲ್ಲಿ ಕುಂದಾಪುರ ಎಂಬ ಹೆಸರು ಬಂತು ಎಂಬುದು ಇನ್ನೊಂದು ಅಭಿಪ್ರಾಯವಗಿದೆ.

ಕುಂದಾಪುರ ತಾಲೂಕಿನ ಉತ್ತರ ಮತ್ತು ಪೂರ್ವದಲ್ಲಿ ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳು, ದಕ್ಷಿಣದಲ್ಲಿ ಕಾರ್ಕಳ ಹಾಗೂ ಉಡುಪಿ ತಾಲೂಕುಗಳು, ಪಶ್ಚಿಮದಲ್ಲಿ ಅರಬ್ಬಿ ಸಮುದ್ರವೂ ಇದ್ದು, ಇವು ಈ ತಾಲೂಕಿನ ಮೇರೆಗಳಾಗಿವೆ. ಆಡಳಿತದ ಅನುಕೂಲಕ್ಕಾಗಿ ಈ ತಾಲೂಕನ್ನು ಕುಂದಾಪುರ, ಬೈಂದೂರು ಮತ್ತು ವಂಡ್ಸೆ ಎಂಬ ಮೂರು ಹೋಬಳಿಗಳನ್ನಾಗಿ ವಿಂಗಡಿಸಲಾಗಿದೆ. ಈ ತಾಲೂಕಿನಲ್ಲಿ ಒಟ್ಟು ೧೧೧ ಗ್ರಾಮಗಳಿದ್ದು, ಎಲ್ಲಾ ಗ್ರಾಮಗಳಲ್ಲಿಯೂ ಜನವಸತಿ ಇವೆ. ಈ ತಾಲೂಕಿನ ವಿಸ್ತೀರ್ಣ ೧೫೬೦ ಚದರ ಕಿ.ಮೀ. ಇದ್ದು, ಭೌಗೋಳಿಕವಾಗಿ ಉಡುಪಿ ಜಿಲ್ಲೆಯಲ್ಲಿಯೇ ಅತ್ಯಂತ ವಿಸ್ತಾರವಾದ ತಾಲೂಕಾಗಿದೆ.ಈ ತಾಲೂಕು ಉತ್ತರ ಅಕ್ಷಾಂಶ ೧೩,೨೬ ಹಾಗೂ ೧೩, ೫೬ ಮತ್ತು ಪೂರ್ವ ರೇಖಾಂಶ ೭೪, ೪ ಗಳ ನಡುವೆ ವಿಸ್ತರಿಸಿದೆ

ಈ ತಾಲೂಕಿನಲ್ಲಿ ವಿಶಿಷ್ಟ ಮಾನವ ಸಮುದಾಯವಿದೆ. ವ್ಯವಸಾಯವನ್ನು ಕೈಗೊಂಡಿರುವ ಜನರು ಅಧಿಕ ಸಂಖ್ಯೆಯಲ್ಲಿದ್ದಾರೆ. ಭತ್ತದ ಕೃಷಿಯನ್ನು ಒಳಗೊಂಡಂತೆ ತೆಂಗು, ಅಡಿಕೆ ಮೊದಲಾದ ತೋಟದ ಬೆಳೆಗಳೊಂದಿಗೆ ತರಕಾರಿ ಮತ್ತು ವಿವಿಧ ಮಾದರಿಯ ಪುಷ್ಪ ಕೃಷಿಯನ್ನು ನಿರ್ವಹಿಸುತ್ತಾರೆ. ಹಿಂದು,ಮುಸ್ಲಿಂ , ಕ್ರೈಸ್ತ ಮೊದಲಾದ ಎಲ್ಲಾ ಪಂಗಡಗಳ ಜನರು ಇಲ್ಲಿ ವಾಸಿಸುತ್ತಾರೆ. ವಿವಿಧ ವೃತ್ತಿಗಳನ್ನು ಕೈಗೊಳ್ಳಬಲ್ಲ ಹಲವು ಜನಾಂಗದ ಜನರು ಇಲ್ಲಿ ತಮ್ಮ ನೆಲೆಯನ್ನು ಕಂಡುಕೊಂಡಿದ್ದಾರೆ. ಉಡುಪಿ ಜಿಲ್ಲೆಯ ಇತರ ತಾಲೂಕುಗಳಿಗೆ ಹೋಲಿಸಿದರೆ ಕುಂದಾಪುರ ತಾಲೂಕು ಹೆಚ್ಚು ಮಳೆ ಬೀಳುವ ಭೂ ಪ್ರದೇಶವಾಗಿದೆ. ಇಲ್ಲಿನ ವಾಯುಗುಣದ ಮುಖ್ಯ ಲಕ್ಷಣವೆಂದರೆ ಹೆಚ್ಚು ತೇವಾಂಶ ಆದರೆ ಬೇಸಿಗೆಯಲ್ಲಿ ಅಷ್ಟೇ ಬಿಸಿಲು, ಸೆಕೆ ಇರುತ್ತದೆ. ಜೂನ್‌ನಿಂದ ಸಪ್ಟೆಂಬರವರೆಗೆ ಇಲ್ಲಿ ಬಾರಿ ಮಳೆಯಾಗುತ್ತದೆ.

ಮಾರ್ಚ್‌ನಿಂದ ಮೇ ತಿಂಗಳವರೆಗೆ ಉಷ್ಣತೆಯ ಪ್ರಮಾಣ ಹೆಚ್ಚಾಗಿರುತ್ತದೆ.ಮದ್ಯಾಹ್ನದ ವೇಳೆ ಸಮುದ್ರದ ಕಡೆಯಿಂದ ತಂಪಾದ ಗಾಳಿ ಬೀಸುತ್ತದೆ. ಈ ಮಾದರಿಯ ಹವಾಮಾನ ಮತ್ತು ವಾಯುಗುಣ ಕೃಷಿ ಸಂಸ್ಕೃತಿ ಬೆಳೆಯಲು ಪೂರಕವಾಗಿದೆ. ಈ ತಾಲೂಕಿನ ವಾಡಿಕೆ ಮಳೆ ಪ್ರಮಾಣ ೩೭೬೨.೯ ಮಿ.ಮೀ ಗಳು ವಾಸ್ತವಿಕ ಸರಾಸರಿ ಮಳೆ ಪ್ರಮಾಣ ೨೯೬೮.೫ ಮಿ. ಮೀ ಗಳು. ಒಂಭತ್ತು ದೃಷ್ಟಿ ಮಾಪಕ ಕೇಂದ್ರಗಳು ಇಲ್ಲಿ ಕಾರ್ಯನಿರ್ವಸುತ್ತಿವೆ. ಮುಂಗಾರು ಮಾರುತದ ಪ್ರಭಾವದಿಂದ ಇಲ್ಲಿ ವಿಶೇಷ ಮಳೆಯಾಗುತ್ತದೆ.

ಕುಂದಾಪುರ ನಗರವು ಈ ತಾಲೂಕಿನ ಆಡಳಿತ ಕೇಂದ್ರವಾಗಿದೆ. ಕುಂದಾಪುರವು ಬಲು ಹಿಂದಿನಿಂದಲೂ ಒಂದು ಬಂದರು ಮತ್ತು ಮುಖ್ಯ ವ್ಯಾಪಾರ ಕೇಂದ್ರವಾಗಿತ್ತು. ಹಾಲಾಡಿ, ಚಕ್ರ, ಕೊಲ್ಲೂರು, ಜಂಬೂ ಮತ್ತು ಸೂಕ್ತ ಮತಿಗಳೆಂಬ ಐದು ನದಿಗಳು ಸಂಗಮವಾಗಿ ನಿರ್ಮಾಣವಾದ ವಿಶಾಲವಾದ ಪಂಚಗಂಗಾವಳಿ ನದಿಯ ಅಳಿವೆಯ ದಕ್ಷಿಣಕ್ಕೆ ಸಮತಟ್ಟಾದ ಪ್ರದೇಶದಲ್ಲಿ ಕುಂದಾಪುರ ನೆಲೆಗೊಂಡಿದೆ. ವಿಜಯ ನಗರ ಅರಸರ ಕಾಲದಲ್ಲಿ ಕುಂದಾಪುರ ಒಂದು ಬಂದರು ಆಗಿತ್ತು. ಬಂದರು ನಗರ ಮಂಗಳೂರಿನಿಂದ ಕುಂದಾಪುರ ಸುಮಾರು ೯೫ ಕಿ.ಮೀ.ದೂರದಲ್ಲಿದೆ. ಹೈದರಾಲಿ ಇಲ್ಲಿ ರಚಿಸಿದ ಕೂತ್ತಳದಲ್ಲಿ ಈಗ ಸರ್ಕಾರಿ ಆಡಳಿತ ಕಚೇರಿಗಳಿವೆ. ಕುಂದಾಪುರ ಕೆಲವು ಚಿಕ್ಕ ಕೈಗಾರಿಕೆಗಳ ಮತ್ತು ಗುಡಿ ಕೈಗಾರಿಕೆಗಳ ಕೇಂದ್ರವಾಗಿದೆ. ಕುಂದಾಪುರದಲ್ಲಿ ಪ್ರತಿ ಶನಿವಾರ ಸಂತೆ ನಡೆಯುತ್ತದೆ. ಈ ಸಂತೆ ಜಿಲ್ಲೆಯಲ್ಲಿಯೇ ಪ್ರಸಿದ್ದವಾಗಿದೆ. ಕೃಷಿ ಉತ್ಪನ್ನ ಮಾರಾಟಗಾರರ ಸಂಘವು ರಾಷ್ಟೀಯ ಹೆದ್ದಾರಿಯ ಪಕ್ಕದ ಪ್ರದೇಶದಲ್ಲಿ ವಿಶಾಲವಾದ ಕಟ್ಟಡಗಳನ್ನು ನಿರ್ಮಿಸಿ ಸರಕುಗಳ ಮಾರಾಟಕ್ಕೆ ಅನುಕೂಲ ಮಾಡಿಕೊಟ್ಟಿದೆ.ಕುಂದಾಪುರ ಪುರಸಭೆಯು ೧೯೩೫ರಲ್ಲಿ ಆರಂಭಗೊಂಡಿದ್ದು, ಈಗಾಗಲೇ ತನ್ನ ಅಮೃತ ಮಹೋತ್ಸವವನ್ನು ಪೂರೈಸಿದೆ. ನಗರಕ್ಕೆ ಅಗತ್ಯವಿರುವ ಮೂಲಭೂತ ಸೌಕರ್ಯವನ್ನು ಪುರಸಭೆಯು ಕಾಲದಿಂದ ಕಾಲಕ್ಕೆ ಒದಗಿಸುತ್ತ ಆ ಮೂಲಕ ತಾಲೂಕನ್ನು ಅಭಿವೃದ್ದಿ ಪಡಿಸುತ್ತ ಬಂದಿದೆ.

ಕುಂದಾಪುರ ನಗರದಲ್ಲಿ ತಾಲೂಕಿನ ಎಲ್ಲಾ ಪ್ರಧಾನ ಕಛೇರಿಗಳಿರುವುದಲ್ಲಿದೆ. ಉಡುಪಿ ಜಿಲ್ಲೆಯ ಉಪ ವಿಭಾಗಾಧಿಕಾರಿಗಳ ಕಛೇರಿ ಇದೆ .ಕಾರ್ಕಳ,ಉಡುಪಿ ಮತ್ತು ಕುಂದಾಪುರ ತಾಲೂಕುಗಳಿಗೆ ಸಂಬಂಧಿಸಿದ ಸಹಾಯಕ ಆಯುಕ್ತರ ಕಛೇರಿ,ಅರಣ್ಯ ಇಲಾಖೆಯ ವಿಭಾಗೀಯ ಕಛೇರಿ ತಾಲೂಕ್ ಪಂಚಾಯಿತ ಮತ್ತು ಸಹಕಾರಿ ಸಂಘಗಳ ಸಹಾಯಕ ನಿಬಂಧಕರ ಕಛೇರಿಗಳು ಇವೆ. ಇಲ್ಲಿನ ಆಡಳಿತ ವ್ಯವಸ್ಥೆ ಕುಡಿಯುವ ನೀರಿಗಾಗಿ ಪ್ರತ್ಯೇಕ್ಷ ಗಮನ ನೀಡಿದೆ. ವಿವಿಧ ಪಂಚವಾರ್ಷಿಕ ಯೋಜನೆಗಳೂ ಸೇರಿದಂತೆ ಕೇಂದ್ರ,ರಾಜ್ಯ ಸರ್ಕಾರ ಕಾರ್ಯಕ್ರಮಗಳ ನೆರವಿನಿಂದ ತಾಲೂಕಿನ ಜನರಿಗೆ ಗೃಹ ಬಳಕೆಯ ಮತ್ತು ಕೃಷಿ ಸಂಬಂಧಿ ಚಟುವಟಿಕೆಗಳಿಗೆ ನೀರಾವರಿ ವ್ಯವಸ್ಥೆಯನ್ನು ಒದಗಿಸಿಕೊಡಲಾಗಿದೆ.ಕುಂದಾಪುರ ಪಟ್ಟಣದ ಮಧ್ಯ ಭಾಗದಲ್ಲಿ ಕುಂದೇಶ್ವರ ದೇವಸ್ಥಾನವಿದ್ದು,ಇದು ನಗರದ ಪ್ರಧಾನ ದೇವಸ್ಥಾನವಾಗಿದೆ. ಇತ್ತೀಚೆಗೆ ಜೀರ್ಣೋದ್ದಾರವಾಗಿದ್ದು, ದೇವಸ್ಥಾನ ಹೊಸ ರೂಪ ತಾಳಿದೆ. ಈ ದೇವಸ್ಥಾನದಲ್ಲಿ ಆಳುಪರಾಜರ ಶಾಸನಗಳಿದೆ. ಸಾರಸ್ವತರ ದತ್ತಾತ್ರೇಯ ದೇವಸ್ಥಾನ ಗೌಡ ಸಾರಸ್ವತರ ವೆಂಕಟರಮಣ ದೇವಸ್ಥಾನ, ದೈವಜ್ಞ,ಬ್ರಾಹ್ಮಣರ ಲಕ್ಷ್ಮೀನಾರಯಣ ದೇವಸ್ಥಾನ ಇವು ಈ ನಗರದ ಇತರ ದೇವಾಲಯಗಳು(ನಾವಡ ಎ.ವಿ. ಕುಂದ ದರ್ಶನ, ಭಂಡಾರ್ ಕಾರ್ಸ್ ಕಾಲೇಜು, ಕುಂದಾಪುರ೧೯೭೭)ಈ ಹಿಂದೂ ದೇವಾಲಯಗಳಲ್ಲದೆ, ಮಸೀದಿಗಳು

,ಚರ್ಚುಗಳು ನಗರದಲ್ಲಿದ್ದು, ಸರ್ವಧರ್ಮ ಸಮನ್ವಯದ ಕೇಂದ್ರವಾಗಿದೆ. ಇಲ್ಲಿನ ಕ್ಯಾಥೋಲಿಕ್ ಚರ್ಚ್ ಕ್ರಿ.ಶ ೧೭೫೭ ರಲ್ಲಿ ಕಟ್ಟಲ್ಪಟ್ಟಿತು ಈ ನಗರದಲ್ಲಿ ಆಕರ್ಷಣೀಯ ಜಾತ್ರೆ, ರಥೋತ್ಸವ ದೀಪೋತ್ಸವಗಳು ವಿಜೃಂಭಣೆಯಿಂದ ನೆಡೆಯುತ್ತದೆ. ಕೊಲ್ಲೂರು ಶ್ರಿ ಮೂಕಾಂಬಿಕೆಯ ಕ್ಷೇತ್ರ ಸೇರಿದಂತೆ, ಬೈಂದೂರು, ಮರವಂತೆ, ಮಾರಣಕಟ್ಟೆ, ಕುಂಬಾಶಿ, ಹೂವಿನಕೆರೆ, ಬಸ್ರೂರು, ಕಮಲಶಿಲೆ, ಕೋಡಿ ಸಮುದ್ರ ತೀರ, ಸೌಕೂರು, ಹಟ್ಟಿಯಂಗಡಿ, ಒತ್ತಿನಣೆ ಬೆಣ್ಣೆಕುದ್ರು, ಕಿರಿಮಂಜೇಶ್ವರ, ಉಪ್ಪಿನಕುದ್ರು, ಶಂಕರನಾರಾಯಣ, ವಾರಾಹಿ ಮೊದಲಾದ ಇಲ್ಲಿನ ಪ್ರೇಕ್ಷಣೀಯ ಸ್ಥಳಗಳು ಪ್ರವಾಸೋಧ್ಯಮಕ್ಕೆ ಹೆಚ್ಚಿನ ಕೊಡುಗೆ ನೀಡಿದೆ. ಈ ಎಲ್ಲಾ ಕ್ಷೇತ್ರಗಳ ಪ್ರತಿನಿಧೀಕರಣದ ಮೂಲಕ ಸಾಮಾಜಿಕ ಸಾಮರಸ್ಯವನ್ನು ಬಲಗೊಳಿಸುವ ಪ್ರಯತ್ನ ಜಾಗೃತವಾಗಿ ನೆಲೆಗೊಳ್ಳುತ್ತ ಬಂದಿದೆ.

ಕುಂದಾಪುರ ಕೃಷಿ ಆಧಾರಿತ ತಾಲೂಕು, ಕುಂದಾಪುರ ಪಟ್ಟಣ ಹೊರತು ಪಡಿಸಿದರೆ ತಾಲೂಕಿನ ಎಲ್ಲಾ ಗ್ರಾಮಗಳಲ್ಲಿ ನೆಲೆ ಕಂಡಿರುವ ಜನ ಸಮುದಾಯ ಕೃಷಿಯನ್ನೇ ಪ್ರದಾನ ವೃತ್ತಿಯನ್ನಾಗಿ ಅವಲಂಬಿಸಿದ್ದಾರೆ. ಭತ್ತ ಇಲ್ಲಿನ ಮುಖ್ಯ ಆಹಾರ ಬೆಳೆಯಾದರೆ, ತೆಂಗು, ಅಡಿಕೆ, ಜೇನು, ಗೇರು ಪ್ರಮುಖ ವಾಣಿಜ್ಯ ಬೆಳೆಗಳಾಗಿವೆ. ವಿವಿಧ ಮಾದರಿಯ ತರಕಾರಿ ಬೆಳೆಗಳನ್ನು ಒಳಗೊಂಡಂತೆ ಪುಷ್ಪಕೃಷಿ ಮತ್ತು ಹಣ್ಣಿನ ಬೆಳೆಗಳಲ್ಲಿ ಇಲ್ಲಿನ ಕೃಷಿಕರು ನಿರತರಾಗಿದ್ದಾರೆ. ಇದರೊಂದಿಗೆ ತಮ್ಮ ಕೃಷಿ ಬದುಕಿಗೆ ಪೂರಕವಾಗಿ ಹೈನುಗಾರಿಕೆಯನ್ನು ಸಹ ನಿರಂತರವಾಗಿ ಅವಲಂಬಿಸಿಕೊಂಡು ಬಂದಿದ್ದಾರೆ. ಭೂ ಮಾಲಿಕರು ಮತ್ತು ಕೃಷಿಕರೊಂದಿಗೆ ಅಪಾರ ಸಂಖ್ಯೆಯ ಕೃಷಿ ಕೂಲಿ ಕಾರ್ಮಿಕರು ಇಲ್ಲಿ ಜೀವನೋಪಾಯವನ್ನು ಕಂಡುಕೊಂಡಿದ್ದಾರೆ. ೧೯೭೦ ರ ದಶಕದಲ್ಲಿ ಜಾರಿಗೆ ಬಂದ ಭೂ ಸುಧಾರಣಾ ಕಾರ್ಯ ಕ್ರಮವು ಇಲ್ಲಿನ ಅನೇಕ ಮಂದಿ ಕೃಷಿ ಕಾರ್ಮಿಕರಿಗೆ ಕೃಷಿ ಭೂಮಿಯನ್ನು ಒದಗಿಸಿ ಹೊಲದೊಡೆಯರನ್ನಾಗಿ ಪರಿವರ್ತಿಸಿತು. ಒಂದಿಷ್ಟು ಮಂದಿ ಇದರ ಸಂಪೂರ್ಣ ಪ್ರಯೋಜನ ಪಡೆದರೆ ಇನ್ನೊಂದಿಷ್ಟು ಮಂದಿ ಭಾಗಶಃಪ್ರಯೋಜನ ಪಡೆದರು.

ಆಧುನಿಕ ಯಾಂತ್ರಿಕ ವ್ಯವಸ್ಥೆ ಲಭ್ಯವಾಗಿರುವ ನಡುವೆಯೂ ಇತ್ತೀಚಿನ ದಿನಗಳಲ್ಲಿ ಕೃಷಿಯ ಬಗೆಗಿನ ಆಸಕ್ತಿ ಇಲ್ಲಿನ ಜನರಲ್ಲಿ ನಿಧಾನ ಗತಿಯಲ್ಲಿ ಕುಂಠಿತಗೊಳ್ಳುತ್ತಿದೆ. ಅದರಲ್ಲೂ ವಿಶೇಷವಾಗಿ ಭತ್ತದ ಬೆಳೆಯ ಮೇಲಿನ ಒಲವು ಇಳಿಮುಖವಾಗುತ್ತಿದೆ. ಭತ್ತದ ಗದ್ದೆಗಳು ತೋಟಗಳಾಗಿ ರೂಪಾಂತರಗೊಳ್ಳುತ್ತಿವೆ. ಸರಿಯಾದ ಬೆಂಬಲ ಬೆಳೆಯ ಕೊರತೆ, ಕೃಷಿ ಕಾರ್ಮಿಕರ ಅಭಾವ, ಮಾರುಕಟ್ಟೆಯ ಸ್ಥಿತ್ಯಂತರ, ಹವಾಮಾನದ ವೈಪರಿತ್ಯ, ಪ್ರಾಕೃತಿಕ ವಿಕೋಪಗಳು ಮೊದಲಾದ ಸಂಗತಿಗಳು ಕೃಷಿಕರಲ್ಲಿ ಆಸಕ್ತಿಯನ್ನು ಕುಗ್ಗಿಸಿವೆ. ಈ ನಡುವೆ ಅನೇಕ ಮಂದಿ ಕೃಷಿಕರು ಪರ್ಯಾಯ ಉದ್ಯೋಗಗಳನ್ನು ಕಂಡುಕೊಂಡಿದ್ದಾರೆ. ಇಲ್ಲಿನ ಗ್ರಾಮೀಣ ಪ್ರದೇಶಗಳಲ್ಲಿ ನೆಲೆ ಕಂಡುಕೊಂಡಿದ ಅನೇಕ ಮಂದಿ ಕೃಷಿ ಕಾರ್ಮಿಕರು ಇಂದು ವ್ಯಾಪಾರ,ಉದ್ದಿಮೆ ಮತ್ತು ಇತರ ನೌಕರಿಯನ್ನು ಬಯಸಿ ನಗರಗಳಿಗೆ ವಲಸೆ ಹೋಗಿದ್ದಾರೆ. ಗ್ರಾಹಕರಿಗೆ ಉತ್ತಮ ಸೇವೆಯನ್ನು ನೀಡುತ್ತಿರುವ ಗಾಯತ್ರಿ ಟೆಕ್ಸ್‌ಟೈಲ್ಸ್ ಹಲ್ಸನಾಡು ಟೆಕ್ಸ್‌ಟೈಲ್ಸ್ ಫ್ಯಾಶನ್ ಕೋರ್ಟ್ ಮತ್ತು ಅಮ್ಮಾ ಫ್ಯಾನ್ಸಿ ಮತ್ತು ಗಿಫ್ಟ್ ಸೆಂಟರ್ ವಂಡ್ಸೆ ಮುಂತಾದವುಗಳು ಉತ್ತಮ ಸೇವೆಯನ್ನು ನೀಡುತ್ತಿವೆ. ತಾಲೂಕಿನಲ್ಲಿ ಕಾರ್ಯಾಚರಿಸುತ್ತಿರುವ ಮಹಿಳಾ ಸಹಕಾರಿ ಸಂಘಗಳೆಂದರೆ ಕಿರಿಮಂಜೇಶ್ವರ ಮಹಿಳಾ ವಿ. ಸ. ಸಂ. ನಿ., ಕಿರಿಮಂಜೇಶ್ವರ, ಕುಂದಾಪುರ ಮಹಿಳಾ ಗ್ರಾ ವಿ. ಸ. ಸಂ. ನಿ., ಕುಂದಾಪುರ, ಮಹಿಳಾ ವಿ. ಸ. ಸಂ. ನಿ., ಉಪ್ಪುಂದ, ಅ: ಉಪ್ಪುಂದ, ಮಹಿಳಾ ವಿ. ಸ. ಸಂ. ನಿ., ಗಂಗೊಳ್ಳಿ ಅ: ಗಂಗೊಳ್ಳಿ, ಶ್ರೀಶಕ್ತಿ ಮಹಿಳಾ ವಿ. ಸ. ಸಂ. ನಿ, ಗೋಳಿಹೊಳೆ,

ಅ:ಅರೆಶಿರೂರು, ಪ್ರಗತಿ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘ(ನಿ)ಹೆಮ್ಮಾಡಿ, ಕುಂದಾಪುರ ತಾಲೂಕು , ಮಹಿಳಾ ವಿ. ಸ. ಸಂ. ನಿ., ಬೈಂದೂರು ಅ: ಬೈಂದೂರು (ಮಾಹಿತಿ: ಸಹಕಾರಿ ಸಿಂದು ವೆಬ್ ಸೈಟ್).ಸಹಕಾರಿ ಸಂಘಗಳು ಮಾತ್ರವಲ್ಲದೆ ಇತರ ಖಾಸಗಿ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳು ಸೇವೆಯನ್ನು ಸಲ್ಲಿಸುತ್ತಿವೆ.

ಅಧ್ಯಾಯ: ೫

ಕ್ಷೇತ್ರ ಕಾರ್ಯ ಅಧ್ಯಯನದ ವಿಶ್ಲೇಷಣೆ

ಅಧ್ಯಾಯಗಳು: ೫

ಕ್ಷೇತ್ರ ಕಾರ್ಯ ಅಧ್ಯಯನದ ವಿಶ್ಲೇಷಣೆ

೫.೧ : ಪ್ರಶ್ನಾವಳಿಕೆ ಉತ್ತರಿಸಿದವರಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿಗಳು, ಮತ್ತು ಕ್ಷೇತ್ರ ಕಾರ್ಯ – ಮಾಹಿತಿ, ವಿಶ್ಲೇಷಣೆ.

ಸದಸ್ಯರ ವಯಸ್ಸು

ಕೋಷ್ಟಕ ೫..೧

ಕ್ರ.ಸಂಖ್ಯೆ	೧೮-೩೦	೩೧-೪೪	೪೫-೫೪	೫೫-ಮೇಲ್ಪಟ್ಟು	ಒಟ್ಟು ಶೇಕಡಾ
೦೧.	೧೧	೫೯	೨೭	೦೩	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಮೇಲಿನ ಕೋಷ್ಟಕದಲ್ಲಿ ಸದಸ್ಯರ ವಯಸ್ಸನ್ನು ಪರಾಮರ್ಶೆ ಮಾಡಲಾಗಿದೆ. ಇದರಲ್ಲಿ ಶೇಕಡಾ ೧೧ ರಷ್ಟು ಸದಸ್ಯರು ೧೮-೩೦ ವರ್ಷ ಪ್ರಾಯದವರು, ಶೇ. ೫೯,ರಷ್ಟು ೩೧-೪೪ ರಷ್ಟು ಪ್ರಾಯದವರು,೨೭ ಶೇಕಡಾ ೪೫-೫೪ ಪ್ರಾಯದವರು, ಹಾಗೂ ಶೇ. ೦೩ ರಷ್ಟು ೫೫ ಮತ್ತು ಮೇಲ್ಪಟ್ಟ ಪ್ರಾಯದವರು ಎಂದು ತಿಳಿಯಬಹುದು.ಈ ಕೋಷ್ಟಕದ ಮೂಲಕ ತಿಳಿಯುವುದೆನೆಂದರೆ ಹೆಚ್ಚಾಗಿ ೩೧-೪೪ ವರ್ಷ ಪ್ರಾಯದ ಸದಸ್ಯರು ಸಹಕಾರಿ ಸಂಘದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದು ತಿಳಿಯಬಹುದು ಅಂದರೆ ಮದ್ಯ ವಯಸ್ಕ ಮಹಿಳೆಯರು ಇದರ ಪ್ರಯೋಜನ ಹೆಚ್ಚು ಪಡೆಯುತ್ತಿದ್ದಾರೆ.

ಸದಸ್ಯರ ವಾರ್ಷಿಕ ಆದಾಯ

ಕೋಷ್ಟಕ ೫. ೨

ಕ್ರ.ಸಂಖ್ಯೆ	೧೦೦೦-೧೦,೦೦೦	೧೦,೦೦೦-೨೦,೦೦೦	೨೦,೦೦೦-೫೦,೦೦೦	೫೦,೦೦೦-ಮೇಲ್ಪಟ್ಟ	ಒಟ್ಟು ಶೇಕಡಾ
೦೧.	೮೫	೧೦	೦೨	೦೩	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಮೇಲಿನ ಕೋಷ್ಟಕದಲ್ಲಿ ಸದಸ್ಯರ ವಾರ್ಷಿಕ ಆದಾಯವನ್ನು ನೀಡಲಾಗಿದೆ. ಇದರಲ್ಲಿ ಶೇ.೮೫ ರಷ್ಟು ಸದಸ್ಯರು ವಾರ್ಷಿಕ ಆದಾಯ ೧೦೦೦-೧೦,೦೦೦ ಎಂದು ತಿಳಿಯಬಹುದು.ನಂತರದ ಸ್ಥಾನದಲ್ಲಿ ಅಂದರೆ ಶೇ.೧೦ ರಷ್ಟು ೧೦,೦೦೦-೨೦,೦೦೦ ಆದಾಯದ ಸದಸ್ಯರಾಗಿದ್ದಾರೆ. ಅಂದರೆ ಸಾಮಾನ್ಯವಾಗಿ ಕಡಿಮೆ ಆದಾಯ್ದ ಮಹಿಳೆಯರು ಸಹಕಾರಿ ಸಂಘದಲ್ಲಿ ಸದಸ್ಯರಾಗಿದ್ದಾರೆ ಎಂದು ತಿಳಿಯಬಹುದು.

ಸದಸ್ಯರ ಶೈಕ್ಷಣಿಕ ಮಟ್ಟ(ವಿದ್ಯಾರ್ಹತೆ)

ಕೋಷ್ಟಕ ೫. ೩

ಕ್ರ.ಸಂಖ್ಯೆ	ಅನಕ್ಷರಸ್ಥ	ಪ್ರಾಥಮಿಕ ಶಿಕ್ಷಣ	ಪ್ರಾಢ ಶಿಕ್ಷಣ	ಪದವಿ ಪೂರ್ವ ಶಿಕ್ಷಣ	ಪದವಿ ಶಿಕ್ಷಣ	ಸ್ನಾತಕೊತ್ತರ	ಒಟ್ಟು ಶೇಕಡಾ
೦೧.	೧೪	೫೮	೨೨	೪	೧	೧	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಮೇಲಿನ ಕೋಷ್ಟಕದಲ್ಲಿ ಸದಸ್ಯರ ಶೈಕ್ಷಣಿಕ ಮಟ್ಟವನ್ನು ಪರಿಶೀಲನೆ ಮಾಡಲಾಗಿದೆ.ಒಟ್ಟು ಸದಸ್ಯರಲ್ಲಿ ಶೇ ೫೮ರಷ್ಟು ಪ್ರಾಥಮಿಕ ಶಿಕ್ಷಣವನ್ನು ಪಡೆದಿದು ನಂತರದ ಸ್ಥಾನದಲ್ಲಿ ಅಂದರೆ ಶೇ.೨೨ ರಷ್ಟು ಪ್ರಾಢ ಶಿಕ್ಷಣವನ್ನು ಪಡೆದಿರುತಾರೆ. ಹಾಗೆಯೇ ಪದವಿ ಮತ್ತು ಸ್ನಾತಕೊತ್ತರ ಮಟ್ಟದ ಶಿಕ್ಷಣವನ್ನು ಪಡೆದ ಶೇ ೧ ರಷ್ಟು ಸದಸ್ಯರು ಮಾತ್ರ ತಮ್ಮನ್ನು ಸಹಕಾರಿ ಸಂಘದಲ್ಲಿ ತೊಡಗಿಸಿಕೊಂಡಿದ್ದಾರೆ ಎನ್ನಬಹುದು ಸಾಮಾನ್ಯವಾಗಿ ಕಡಿಮೆ ಶಿಕ್ಷಣ ಪಡೆದವರು ಸಹಕಾರಿ ಸಂಘದ ಸದಸ್ಯರಾಗಿದ್ದಾರೆ.

ನೀವು ಮಹಿಳಾ ಸಹಕಾರಿ ಸಂಘಕ್ಕೆ ಸದಸ್ಯರಾಗಿದ್ದು ಯಾವಾಗ?

ಕೋಷ್ಟಕ ೫ .೪

ಕ್ರ. ಸಂಖ್ಯೆ	೧೯೯೦ ಮೊದಲು	೧೯೯೦-೨೦೦೦	೨೦೦೦-೨೦೦೫	೨೦೦೫ರ ನಂತರ	ಒಟ್ಟು ಶೇಕಡಾ
೦೧.	೦	೧೦	೧೨	೭೮	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಮೇಲಿನ ಕೋಷ್ಟಕದಲ್ಲಿ ತೋರಿಸಿದ್ದಂತೆ ಮಹಿಳಾ ಸಹಕಾರಿ ಸಂಘಕ್ಕೆ ಸದಸ್ಯರಾದವರು ಶೇಕಡಾ ೭೮ರಷ್ಟು ಸದಸ್ಯರು ೨೦೦೫ರ ನಂತರ ಹಾಗೆಯೇ ಶೇಕಡಾ ೧೨ ಹಾಗೂ ಶೇ.೧೧ರಷ್ಟು ಸದಸ್ಯರು ಕ್ರಮವಾಗಿ ೨೦೦೦-೨೦೦೫ ಮತ್ತು

೧೯೯೦-೨೦೦೦ ಸಾಲಿನಲ್ಲಿ ಎಂದು ತಿಳಿಯಬಹುದು. ಅಂದರೆ ಮಹಿಳೆಯ ಹೆಚ್ಚಾಗಿ ಇತ್ತೀಚಿನ ವರ್ಷಗಳಲ್ಲಿ ಸಹಕಾರಿ ಸಂಘಗಳ ಸದಸ್ಯರಾಗುತ್ತಿದ್ದಾರೆ. ಆ ಮೂಲಕ ಅವರು ಅಭಿವೃದ್ದಿಯನ್ನು ಹೊಂದುತ್ತಿದ್ದಾರೆ ಎಂದು ತಿಳಿಯಬಹುದು.

ನೀವು ಸಹಕಾರಿ ಸಂಘದ ಸದಸ್ಯರಾಗಿರುವ ಪ್ರಧಾನ ಉದ್ದೇಶವೇನು?

ಕೋಷ್ಟಕ ೫.೫

ಕ್ರ.ಸಂಖ್ಯೆ	ಯೋಜನೆಗಳ ಸದುಪಯೋಗ ಪಡೆಯಲು	ಚುನಾವಣೆಯಲ್ಲಿ ಸ್ಪರ್ದೆ	ಸಮಾಜ ಸೇವೆ	ಮೇಲಿನ ಎಲ್ಲವೂ	ಒಟ್ಟು ಶೇಕಡಾ
೦೧.	೯೮	೦	೦	೨	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಮೇಲಿನ ಕೋಷ್ಟಕದಲ್ಲಿ ತಿಳಿಸಿದಂತೆ ಶೇಕಡಾ ೯೮ ರಷ್ಟು ಮಹಿಳೆಯರು ಸಹಕಾರಿ ಸಂಘದಲ್ಲಿ ದೊರೆಯುವ ಯೋಜನೆಗಳ ಸದುಪಯೋಗ ಪಡೆಯಲು ಸದಸ್ಯರಾಗಿರುತ್ತಾರೆ ಎಂಬುವುದನ್ನು ಸ್ಪಷ್ಟವಾಗಿ ತಿಳಿಸುತ್ತದೆ.ಅದರಂತೆ ಉಳಿದ ಶೇ.೨ ರಷ್ಟು ಮಾತ್ರ ಎಲ್ಲಾ ರಿತಿಯ ಪ್ರಯೋಜನವನ್ನು ಪಡೆಯುದಕ್ಕಾಗಿ ಮಹಿಳಾ ಸಹಕಾರಿ ಸಂಘದ ಸದಸ್ಯರಾಗಿರುತ್ತಾರೆ ಎಂದು ತಿಳಿಯಬಹುದು.

ಸಹಕಾರಿ ಸಂಘದಲ್ಲಿ ತಮ್ಮ ಅನುಭವ ಯಾವ ರೀತಿಯದ್ದು?

ಕೋಷ್ಟಕ ೫ . ೬

ಸಾಮಾನ್ಯ ಸದಸ್ಯ	ನಿರ್ದೇಶಕನಾಗಿ	ಅದ್ಯಕ್ಷ/ಪದಾಧಿಕಾರಿ	ಎಲ್ಲವೂ	ಒಟ್ಟು ಶೇಕಡಾ
೯೬	೦೨	೨	೦	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಮಹಿಳಾ ಸಹಕಾರಿ ಸಂಘದಲ್ಲಿ ಹೆಚ್ಚಾಗಿ ಸಮಾನ್ಯ ಸದಸ್ಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಎಂದು ಮೇಲಿನ ಕೋಷ್ಟಕದಲ್ಲಿ ತಿಳಿಯಬಹುದು.ಶೇಕಡಾ ೯೬ ರಷ್ಟು ಸದಸ್ಯರು ಸಮಾನ್ಯ ಸದಸ್ಯರಾಗಿ ಶೇಕಡಾ ೨ ರಷ್ಟು,ನಿರ್ದೇಶಕರು ಮತ್ತು ಅದ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು ಎಂದು ತಿಳಿಯಬಹುದು.

ಸಹಕಾರಿ ಸಂಘದ ಮೂಲಕ ನಿಮ್ಮ ಸಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಸಾದ್ಯವಾಗಿದೆಯೇ?

ಕೋಷ್ಟಕ ೫. ೭

ಕ್ರ.ಸಂ.	ಹೌದು	ಇಲ್ಲಾ	ಕಡಿಮೆ ಪ್ರಮಾಣ	ಸಾದ್ಯವಾಗುತ್ತ ಇದೆ	ಒಟ್ಟು ಶೇಕಡಾ
೦೧.	೯೭	೦	೦	೦೩	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಮೇಲಿನ ಕೋಷ್ಟಕದಲ್ಲಿ ತೋರಿಸಿದ್ದಂತೆ ಶೇ.೯೭ ರಷ್ಟು ಸದಸ್ಯರು ಸಹಕಾರಿ ಸಂಘದ ಮೂಲಕ ತಮ್ಮ ಸಮಾಜಿಕ ಮತ್ತು ಆರ್ಥಿಕ ಅಭಿವೃದ್ದಿ ಸಾದ್ಯವಾಗಿದೆ ಎಂದರೇ ಶೇಕಡಾ ೦೩ ರಷ್ಟು ಸದಸ್ಯರು ಸಾದ್ಯವಾಗುತ್ತ ಇದೆ ಎನ್ನುತಾರೆ.ಇದರ ಮೂಲಕ ತಿಳಿಯುವೇನೆಂದರೆ ಸಹಕಾರಿ ಸಂಘದಿಂದ ಮಹಿಳೆಯರ ಅಭಿವೃದ್ದಿ ಸಾದ್ಯವಿದೆ ಎನ್ನುವುದಾಗಿದೆ.

ಸಹಕಾರಿ ಸಂಘದಲ್ಲಿ ನೀವು ವೈಯಕ್ತಿಕವಾಗಿ ಹೆಚ್ಚು ಮಹತ್ವ ನೀಡುವ ವಿಷಯ ಯಾವುದು?

ಕೋಷ್ಟಕ ೫. ೮

ಕ್ರ.ಸಂ.	ಸಾಲ ಪಡೆಯುವುದು	ಠೇವಣಿ ನೀಡುವುದು	ಸಹಕಾರಿ ತತ್ವದ ಪ್ರಚಾರ	ಇತರ ವಿಷಯಗಳು	ಒಟ್ಟು ಶೇಕಡಾ
೦೧.	೮೭	೦೯	೦	೦೪	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಸಹಕಾರಿ ಸಂಘದ ಸದಸ್ಯರು ಮುಖ್ಯವಾಗಿ ಸಾಲ್ ಪಡೆಯುದಕ್ಕೆ ಸಂಘದ ಸದಸ್ಯರಾಗುತ್ತಾರೆ ಎನ್ನುವುದು ಮೇಲಿನ ಕೋಷ್ಟಕದಲ್ಲಿ ನೋಡಬಹುದು. ಶೇ. ೮೭ ರಷ್ಟು ಜನ ಸಾಲ ಪಡೆಯುದಕ್ಕೆ ಹೆಚ್ಚು ಮಹತ್ವ ನೀಡಿದರೆ ಶೇ.೦೯ ರಷ್ಟು ಸದಸ್ಯರು ಠೇವಣಿ ನೀಡುತ್ತಾರೆ.ಮುಖ್ಯವಾಗಿ ಆರ್ಥಿಕ ಸಬಲೀಕರಣಕ್ಕೆ ಸದಸ್ಯರಾಗುತ್ತಾರೆ ಎನ್ನುವುದು ಸ್ಪಷ್ಟವಾಗುತ್ತದೆ.

ನೀವು ಸದಸ್ಯರಾಗುವ ಸಂಘಕ್ಕೆ ಸ್ವಂತ ಕಟ್ಟಡ ಇದೆ/ಇಲ್ಲ/ಗೊತ್ತಿಲ್ಲ

ಕೋಷ್ಟಕ ೫.೯

ಕ್ರ.ಸಂ	ಇದೆ	ಇಲ್ಲಾ	ಗೊತ್ತಿಲ್ಲ	ಒಟ್ಟು ಶೇಕಡಾ
೦೧.	೪೯	೪೮	೦೩	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಮೇಲಿನ ಕೋಷ್ಟಕದಲ್ಲಿ ಸದಸ್ಯರಾಗಿರುವ ಸಹಕಾರಿ ಸಂಘಕ್ಕೆ ಸ್ವಂತ ಕಟ್ಟಡ ಶೇ.೪೯ ರಷ್ಟು ಸ್ವಂತ ಕಟ್ಟಡ ಇಲ್ಲದೆ ಬಾಡಿಗೆ ಕಟ್ಟಡದಲ್ಲಿ ಸಹಕಾರಿ ಸಂಘ ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಯುತ್ತದೆ. ಶೇ ೩ರಷ್ಟು ಸದಸ್ಯರಿಗೆ ಕಡಿಮೆ ಅನುಭವವಿದೆ ಎಂದು ಹೇಳುತ್ತಾರೆ.

ಸಂಘದ ಸದಸ್ಯರಾಗಿ ನಿಮ್ಮ ಸಾಮಾಜಿಕ ಸಂಪರ್ಕದ ಪ್ರಮಾಣ

ಕೋಷ್ಟಕ ೫. ೧೦

ಕ್ರ.ಸಂ.	ತುಂಬಾನೆ ಜಾಸ್ತಿಯಾಗಿದೆ	ಸಾಮಾನ್ಯವಾಗಿದೆ	ಕಡಿಮೆ	ಒಟ್ಟು ಶೇಕಡಾ
೦೧.	೧೬	೮೨	೦೨	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಸಹಕಾರಿ ಸಂಘದ ಸದಸ್ಯರಾದ ಮೇಲೆ ಸದಸ್ಯರ ಸಾಮಾಜಿಕ ಸಂಪರ್ಕವು ಶೇಕಡ ೮೨ ರಷ್ಟು ಜನರಿಗೆ ಸಾಮಾನ್ಯ ಮಟ್ಟದಲ್ಲಿದ್ದರೆ ಶೇಕಡ ೧೬ ರಷ್ಟು ಜನರಿಗೆ ಮಾತ್ರ ತುಂಬಾ ಜಾಸ್ತಿಯಾಗಿದೆ ಎನ್ನುತ್ತಾರೆ. ಹಾಗೆಯೇ ಶೇಕಡ ೦೨ ರಷ್ಟು ಜನರು ಕಡಿಮೆ ಸಾಮಾಜಿಕ ಸಂಪರ್ಕ ಎನ್ನುತ್ತಾರೆ.

ನಿಮ್ಮ ಬ್ಯಾಂಕಿನ(ಸಹಕಾರಿ ಸಂಘದ) ಗ್ರಾಹಕರ ಸೇವೆಯ ಬಗ್ಗೆ

ಕೋಷ್ಟಕ ೫.೧೧

ಕ್ರ.ಸಂ	ಉತ್ತಮ	ಅತೀ ಉತ್ತಮ	ಸಾಧರಣ	ಚೆನ್ನಾಗಿಲ್ಲ	ಒಟ್ಟು ಶೇಕಡಾ
೦೧	೨೫	೭೫	೦	೦	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಸಹಕಾರಿ ಸಂಘದಲ್ಲಿ ಗ್ರಾಹಕರ ಸೇವೆಯ ಬಗ್ಗೆ ಸದಸ್ಯರು ಶೇಕಡ ೭೫ ರಷ್ಟು ಅತೀ ಉತ್ತಮ ಎಂದಿದ್ದಾರೆ. ಶೇಕಡಾ ೨೫ ರಷ್ಟು ಉತ್ತಮ ಎನ್ನುವ ಮೂಲಕ ಸಹಕಾರಿ ಸಂಘದಲ್ಲಿ ಗ್ರಾಹಕರಿಗೆ ಉತ್ತಮ ಸೇವೆ ಸಿಗುತ್ತದೆ ಎಂದು ತಿಳಿಯಬಹುದು.

ನಿಮ್ಮ ಸಹಕಾರಿ ಸಂಘವು ಸಮಾಜ ಸಲ್ಲಿಸುತ್ತಿರುವ ಬಗ್ಗೆ

ಕೋಷ್ಟಕ ೫.೧೨

ಕ್ರ.ಸಂ	ಉತ್ತಮ	ಅತೀ ಉತ್ತಮ	ಸಾಧಾರಣ	ಚೆನ್ನಾಗಿಲ್ಲ	ಒಟ್ಟು ಶೇಕಡಾ
೦೧.	೮೩	೧೨	೦೫	೦	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಸಹಕಾರಿ ಸಂಘವು ಸಮಾಜ ಸೇವೆ ಸಲ್ಲಿಸುತ್ತಿರುವ ಬಗ್ಗೆ ಶೇಕಡಾ ೮೩ರಷ್ಟು ಸದಸ್ಯರು ಉತ್ತಮ ಎಂದು ಪ್ರತಿಕ್ರಿಯಿಸಿದರೆ ಶೇಕಡಾ ೧೨ ರಷ್ಟು ಅತ್ತಿ ಉತ್ತಮ ಎಂದೂ,ಶೇಕಡಾ ೦೫ ರಷ್ಟು ಸಾಧಾರಣ ಎಂದು ತಿಳಿಸಿದ್ದಾರೆ. ಅಂದರೆ ಸಹಕಾರಿ ಸಂಘವು ಸಮಾಜ ಸೇವೆಯಲ್ಲಿಯೂ ಮುಂದುವರಿದೆ ಎಂದು ತಿಳಿಯಬಹುದು.

ಸಹಕಾರಿ ಸಂಘದಿಂದ ನಿಮ್ಮ ಕುಟುಂಬಕ್ಕೆ ಆದ ಲಾಭ

ಕೋಷ್ಟಕ ೫. ೧೩

ಕ್ರ.ಸಂ.	ಆರ್ಥಿಕವಾಗಿ ಸ್ವಾವಲಂಬನೆ	ಸಾಮಾಜಿಕ ಪ್ರಬಲರಾಗಿರುವುದು	ಶೈಕ್ಷಣಿಕವಾಗಿ ಸದೃಡವಾಗಿದೆ	ಇತರ	ಒಟ್ಟು ಶೇಕಡಾ
೦೧.	೯೧	೦೨	೦೪	೦೩	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಮೇಲಿನ ಕೋಷ್ಟಕದಲ್ಲಿ ಶೇಕಡಾ ೯೧ ರಷ್ಟು ಸದಸ್ಯರು ಆರ್ಥಿಕವಾಗಿ ಸ್ವಾವಲಂಬನೆ ಸಹಕಾರಿ ಸಂಘದಿಂದ ಅವರ ಕುಟುಂಬಕ್ಕೆ ಸಾದ್ಯವಾಗಿದೆ ಎನ್ನುತ್ತಾರೆ. ಹಾಗೇ ಶೇಕಡಾ ೦೨, ಶೇಕಡಾ ೦೪, ಶೇಕಡಾ ೦೩ ರಷ್ಟು ಸದಸ್ಯರು ಕ್ರಮವಾಗಿ ಸಾಮಾಜಿಕ,ಶೈಕ್ಷಣಿಕ ಮತ್ತು ಇತರ ರೀತಿಯಲ್ಲಿ ಪ್ರಬಲರಾಗಿದ್ದೇವೆ ಎನ್ನುತ್ತಾರೆ.ಸದಸ್ಯರ ಕುಟುಂಬವು ಅಭಿವೃದ್ದಿ ಸಾದಿಸುತ್ತಿದೆ ಎಂದು ತಿಳಿಯಬಹುದು.

ನಿಮ್ಮ ಕುಟುಂಬದ/ಮಕ್ಕಳ ವಿದ್ಯಾಬ್ಯಾಸದ ಮಟ್ಟ

ಕೋಷ್ಟಕ ೫ .೧೪

ಕ್ರ.ಸಂ.	ಪ್ರಾಥಮಿಕ	ಪ್ರೌಢ ಶಿಕ್ಷಣ	ಪದವಿ ಮಟ್ಟ	ಸ್ನಾತಕೋತ್ತರ	ಒಟ್ಟು ಶೇಕಡಾ
೦೧.	೧೫	೫೭	೨೮	೦	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಸದಸ್ಯರ ಮಕ್ಕಳ/ಕುಟುಂಬದ ವಿದ್ಯಾಬ್ಯಾಸದ ಮಟ್ಟವು ಉತ್ತಮವಾಗಿದ್ದು,ಶೇಕಡಾ ೫೭ ಪ್ರೌಢ ಶಿಕ್ಷಣವನ್ನು , ಶೇ. ೨೮ ರಷ್ಟು ಪದವಿ ಮಟ್ಟವನ್ನು, ಹಾಗೇ ಶೇಕಡಾ,೧೫ ರಷ್ಟು ಪ್ರಾಥಮಿಕ ಶಿಕ್ಷಣವನ್ನು ಪಡೆದಿದ್ದಾರೆ ಎಂದು ತಿಳಿಯುತ್ತಾರೆ.ಮಹಿಳೆಯರು ಶೈಕ್ಷಣಿಕವಾಗಿಯು ಸಬಲರಾಗುತ್ತಿದ್ದಾರೆ ಎಂದು ತಿಳಿಯಬಹುದು.

ನೀವು ಸ್ವಂತ ಮನೆಯಲ್ಲಿ ವಾಸವಾಗಿರುವಿರೋ ಅಥವಾ ಬಾಡಿಗೆ ಮನೆಯಲ್ಲಿಯೋ

ಕೋಷ್ಟಕ ೫. ೧೫

ಕ್ರ.ಸಂ.	ಸ್ವಂತ	ಬಾಡಿಗೆ	ಒಟ್ಟು ಶೇಕಡಾ
೦೧.	೯೮	೦೨	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಶೇಕಡಾ ೯೮ ರಷ್ಟು ಸದಸ್ಯರು ತಮ್ಮ ಸ್ವಂತ ಮನೆಯಲ್ಲಿಯೇ ವಾಸವಾಗಿದ್ದಾರೆ. ಹಾಗೂ ಶೇಕಡಾ ೦೨ ರಷ್ಟು ಸದಸ್ಯರು ಮಾತ್ರ ಬಾಡಿಗೆ ಮನೆಯಲ್ಲಿ ವಾಸವಾಗಿರುತ್ತಾರೆ.

ನೀವು ಯಾವ ಉದ್ದೇಶಕ್ಕಾಗಿ ಸಂಘದಿಂದ ಸಾಲ ಮಾಡಿರುವಿರಿ

ಕೋಷ್ಟಕ ೫. ೧೬

ಕ್ರ.ಸ.	ಸಾಲ ಮಾಡಿಲ್ಲ	ಕೃಷಿ ಉಪಕರಣ ಖರೀದಿ	ಸ್ವಂತ ಉದ್ಯೋಗ	ಇತರೇ ಉದ್ಯೋಗ	ಒಟ್ಟು ಶೇಕಡಾ
೦೧.	೦	೦	೧೧	೮೯	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಮೇಲಿನ ಕೋಷ್ಟಕದಲ್ಲಿ ತಿಳಿಸಿದ್ದಂತೆ ಶೇಕಡಾ ೮೯ ರಷ್ಟು ಸದಸ್ಯರು ಇತರೇ ಉದ್ದೇಶಕ್ಕಾಗಿ ಸಾಲ ಮಾಡಿರುತ್ತಾರೆ. ಶೇಕಡಾ ೧೧ ರಷ್ಟು ಮಾತ್ರ ಸ್ವಂತ ಉದ್ಯೋಗ ಮಾಡಲು ಸಾಲ ಮಾಡಿರುತ್ತಾರೆ ಎಂದು ತಿಳಿಯಬಹುದು.ಸಂಘಕ್ಕೆ ಸದಸ್ಯರಾಗಿರುವ ಎಲ್ಲಾರೂ ಸಾಲ ಮಾಡಿರುತ್ತಾರೆ ಎಂದು ತಿಳಿಯಬಹುದು.

ತಾವು ಸಂಘದಲ್ಲಿ ಉಳಿತಾಯ ಮಾಡಿರುವಿರಾ? ಮಾಡಿದಲ್ಲಿ ಯಾವ ಉದ್ದೇಶ?

ಕೋಷ್ಟಕ ೫. ೧೭

ಕ್ರ.ಸಂ.	ಉಳಿತಾಯ ಮಾಡಿಲ್ಲ	ಮಕ್ಕಳ ವಿದ್ಯಾಬ್ಯಾಸ	ಕುಟುಂಬ ನಿರ್ವಹಣೆ	ಇತರ ಕಾರಣಗಳು	ಒಟ್ಟು ಶೇಕಡಾ
೦೧.	೧೨	೧೮	೬೪	೦೬	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಶೇಕಡಾ ೬೪ ರಷ್ಟು ಮಹಿಳೆಯರು ಕುಟುಂಬಖ್ಖ ನಿರ್ವಹಣೆಗೊಸ್ಕರ ಉಳಿತಾಯ ಮಾಡಿದ್ದಾರೆ.ಹಾಗೆಯೇ ಶೇಕಡಾ ೧೮ ರಷ್ಟು ಮಕ್ಕಳ ವಿದ್ಯಾಬ್ಯಾಸಕ್ಕಾದರೆ,ಶೇಕಡಾ ೧೨ ರಷ್ಟು ಉಳಿತಾಯ ಮಾಡಿಲ್ಲ ಎಂದಿದ್ದಾರೆ.ಶೇಕಡಾ ೦೬ ರಷ್ಟು ಮಾತ್ರ ಇತರೆ ಕಾರಣಕ್ಕೆ ಉಳಿತಾಯ ಮಾಡುವರಾಗಿದ್ದಾರೆ.

ಯಾರು ನಿಮ್ಮನ್ನು ಸಂಘಕ್ಕೆ ಸದಸ್ಯರಾಗಲು ಪ್ರೇರೇಪಿಸಿದರು ?

ಕೋಷ್ಟಕ ೫. ೧೮

ಕ್ರ.ಸಂ.	ನೆರೆಹೊರೆಯವರು	ಸಂಘದ ಸದಸ್ಯರು	ಸಂಘದ ಉದ್ಯೋಗಿಗಳು	ಇತರರು	ಒಟ್ಟು ಶೇಕಡಾ
೦೧	೫೮	೨೦	೨೧	೦೧	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಶೇಕಡಾ ೫೮ ರಷ್ಟು ಸದಸ್ಯರಿಗೆ ಸಹಕಾರಿ ಸಂಘದಲ್ಲಿ ಸದಸ್ಯರಾಗಲು ನೆರೆಹೊರೆಯವರು ಪ್ರೇರೆಪಿಸಿದರೆ ಶೇ.೨೦ ರಷ್ಟು ಸಂಘದ ಸದಸ್ಯರು, ಹಾಗೂ ಶೇ.೨೧ ರಷ್ಟು ಜನರಿಗೆ ಸಂಘದ ಉದ್ಯೋಗಿಗಳು ಹಾಗೂ ಶೇ. ೦೧ ರಷ್ಟು ಸದಸ್ಯರಿಗೆ ಇತರರು ಸದಸ್ಯರಾಗಲು ಪ್ರೇರೇಪಿಸಿದರು ಎಂದು ತಿಳಿಯಬಹುದು.

ನಿಮ್ಮ ಕುಟುಂಬದ ನಿರ್ವಹಣೆ ಯಾರಿಂದ ಆಗುತ್ತಿದೆ?

ಕೋಷ್ಟಕ ೫.೧೯

ಕ್ರ.ಸಂ.	ಸ್ವಂತ	ಗಂಡ/ಹೆಂಡತಿ	ತಂದೆ/ತಾಯಿ	ಇತರರು	ಒಟ್ಟು ಶೇಕಡಾ
೦೧.	೦೭	೮೬	೦೩	೦೪	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಶೇ.೮೬ ರಷ್ಟು ಸದಸ್ಯರ ಕುಟುಂಬ ನಿರ್ವಹಣೆ ಗಂಡರಿಂದ ಆಗುತ್ತಿದೆ, ಎಂದರೆ ಶೇ.೦೭ ರಷ್ಟು ಮಾತ್ರ ಸ್ವಂತ ಸದಸ್ಯರೆ ನೋಡಿಕೊಳ್ಳುತ್ತಿದ್ದಾರೆ . ಹಾಗೆಯೇ ಶೇ.೦೩ ಮತ್ತು ೦೪ ರಷ್ಟು ಕ್ರಮವಾಗಿ ತಂದೆ/ತಾಯಿ ಮತ್ತು ಇತರರು ನೋಡಿಕೊಳ್ಳುತ್ತಿದ್ದಾರೆ.

ನಿಮ್ಮ ಬ್ಯಾಂಕಿಗೆ ಸಾಮಾನ್ಯವಾಗಿ ಭೇಟಿ ನೀಡುವ ಸಂದರ್ಭ ಯಾವಾಗ?

ಕೋಷ್ಟಕ ೫. ೨೦

ಕ್ರ.ಸಂ.	ವಾರಕೊಮ್ಮೆ ಅಥವಾ ಹೆಚ್ಚು	ತಿಂಗಳಿಗೊಮ್ಮೆ	ಆರು ತಿಂಗಳಿಗೊಮ್ಮೆ	ವರ್ಷಕೊಮ್ಮೆ/ಹೆಚ್ಚು	ಒಟ್ಟು ಶೇಕಡಾ
೦೧.	೧೪	೮೧	೦೫	೦	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಮೇಲಿನ ಕೋಷ್ಟಕದಲ್ಲಿ ಹೇಳಿದಂತೆ ಶೇ.೮೧ ರಷ್ಟು ಸದಸ್ಯರು ತಿಂಗಳಿಗೊಮ್ಮೆ ತಮ್ಮ ಬ್ಯಾಂಕಿಗೆ ಭೇಟಿ ನೀಡಿದರೆ ಶೇ.೧೪ ರಷ್ಟು ವಾರಕೊಮ್ಮೆ ಅಥವಾ ಹೆಚ್ಚು ಸಲ ಹಾಗೂ ಶೇ.೦೫ರಷ್ಟು ಆರು ತಿಂಗಳಿಗೊಮ್ಮೆ ಭೇಟಿ ನೀಡುತ್ತಾರೆ,ಎಂದು ಪ್ರತಿಕ್ರಿಯಿಸಿದ್ದಾರೆ.ಹೆಚ್ಚಾಗಿ ತಿಂಗಳಸಾಲದ ಕಂತು ಕಟ್ಟಿಹೋಗುತ್ತಾರೆ ಎಂಬುವುದಾಗಿದೆ.

ನಿಮ್ಮ ಸಹಕಾರಿ ಸಂಘವು ಲಾಭಾಂಶದಲ್ಲಿ/ನಷ್ಟದಲ್ಲಿ ನಡೆಯುತ್ತಿದೆಯಾ?

ಕೋಷ್ಟಕ ೫. ೨೧

ಕ್ರ.ಸಂ.	ನಷ್ಟದಲ್ಲಿ	ಲಾಭಾಂಶ	ಗೊತ್ತಿಲ್ಲ	ಕಡಿಮೆ ಪ್ರಮಾಣದ ಲಾಭಾಂಶ	ಒಟ್ಟು ಶೇಕಡಾ
೦೧.	೦	೯೩	೦೭	೦	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಮೇಲಿನ ಕೋಷ್ಟಕದಲ್ಲಿ ತೋರಿಸಿದ್ದಂತೆ ಶೇ.೯೩ ರಷ್ಟು ಸದಸ್ಯರು ತಮ್ಮ ಸಂಘವು ಲಾಭಾಂಶದಲ್ಲಿ ನಡೆಯುತ್ತಿದೆ ಎಂದು ಹೇಳಿದ್ದಾರೆ. ಹಾಗೆಯೇ ಶೇ.೦೭ ರಷ್ಟು ಜನರಿಗೆ ಸರಿಯಾಗಿ ಗೊತ್ತಿಲ್ಲ ಎಂದು ಹೇಳಿದ್ದಾರೆ.ಅಂದರೆ ಹೆಚ್ಚಾಗಿ ಸಹಕಾರಿ ಸಂಘಗಳು ಲಾಭಾಂಶದಲ್ಲಿಯೇ ನಡೆಯುತ್ತಿವೆ ಎಂದು ಸ್ಪಷ್ಟವಾಗುತ್ತದೆ.

ತಿಂಗಳಿಗೆ ಸರಾಸರಿ ಉಳಿತಾಯದ ಪ್ರಮಾಣ ತಿಳಿಸಿ.

ಕೋಷ್ಟಕ ೫. ೨೨

ಕ್ರ.ಸಂ.	ಮಾಡುತ್ತಿಲ್ಲ	೫೦೦ ಕಡಿಮೆ	೫೦೦-೧೦೦೦	೧೦೦೦ ಕ್ಕಿಂತ ಹೆಚ್ಚು	ಒಟ್ಟು ಶೇಕಡಾ
೦೧.	೧೬	೫೧	೨೭	೦೬	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಸದಸ್ಯರ ಉಳಿತಾಯದ ಪ್ರಮಾಣವನ್ನು ಅವಲೋಕಿಸಿದರೆ ಶೇ.೫೧ ರಷ್ಟು ಸದಸ್ಯರು ೫೦೦ ಮತ್ತು ಆದಕ್ಕಿಂತ ಕಡಿಮೆ ಉಳಿತಾಯ ಮಾಡಿದರೆ ೫೦೦-೧೦೦೦ ರಷ್ಟು ೨೭ ಶೇ. ಸದಸ್ಯರು ಉಳಿತಾಯ ಮಾಡುತ್ತಾರೆ. ಹಾಗೆ ಶೇ.೦೬ ರಷ್ಟು ಸದಸ್ಯರು ೧೦೦೦ಕ್ಕಿಂತ ಹೆಚ್ಚು ಉಳಿತಾಯ ಮಾಡಿದರೆ ಶೇ.೧೬ ರಷ್ಟು ಸದಸ್ಯರು ಉಳಿತಾಯ ಮಾಡುತ್ತಿಲ್ಲ ಎಂದು ಹೇಳಿದ್ದಾರೆ. ಸದಸ್ಯರಲ್ಲಿ ಉಳಿತಾಯ ಮಾಡುವ ಮನೋಭಾವವಿದೆ ಎಂದು ಹೇಳಬಹುದು.

ನೀವು ಯಾವಾಗದರೂ ಸಂಘದ ಆಡಳಿತ ನಿರ್ದೇಶಕರು ಆಗಿರುವೀರಾ? ಆಗಿದ್ದಲ್ಲಿ ತಿಳಿಸುವೀರಾ?

ಕೋಷ್ಟಕ ೫. ೨೩

ಕ್ರ.ಸಂ.	ಆಗಿಲ್ಲ	ಆಗಿದೆ	ಒಂದರಿಂದ ಮೂರು ಸಲ	ಮೂರುಸಲಕ್ಕಿಂತ ಜಾಸ್ತಿ	ಒಟ್ಟು ಶೇಕಡಾ
೦೧.	೯೬	೦೧	೦೩	೦೦	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಶೇ. ೯೬ ರಷ್ಟು ಸದಸ್ಯರು ಆಡಳಿತ ನಿರ್ದೇಶಕರು ಆಗಿಲ್ಲ ಎಂದು ಹೇಳಿದರೆ ಶೇ.೦೧ ರಷ್ಟು ಮಾತ್ರ ಆಡಳಿತ ಮಂಡಳಿತಿಯಲ್ಲಿ ನಿರ್ದೇಶಕರಾಗಿದ್ದು, ಶೇ. ೦೩ ರಷ್ಟು ಸದಸ್ಯರು ಒಂದರಿಂದ ಮೂರು ಸಲ ಆಡಳಿತ ನಿರ್ದೇಶಕರಾಗಿರುತ್ತಾರೆ

ಸಹಕಾರಿ ಸಂಘವು ಸದಸ್ಯರ ಆರ್ಥಿಕ ಅಗತ್ಯಗಳನ್ನು ಪೂರೈಸುತ್ತಿದೆಯೋ?

ಕೋಷ್ಟಕ ೫. ೨೪

ಕ್ರ.ಸಂ.	ಇಲ್ಲಾ	ಪೂರೈಸುತ್ತಿದೆ	ಸಾಧಾರಣ	ಅತೀ ಹೆಚ್ಚು ರೀತಿಯಲ್ಲಿ	ಒಟ್ಟು ಶೇಕಡಾ
೦೧.	೧೦೦	೦	೦	೦	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಮೇಲಿನ ಕೋಷ್ಟಕದಲ್ಲಿ ತಿಳಿಸಿದ್ದಂತೆ ಶೇ.೧೦೦ ರಷ್ಟು ಸದಸ್ಯರು ತಮ್ಮ ಆರ್ಥಿಕ ಅಗತ್ಯಗಳನ್ನು ಪೂರೈಸುತ್ತಿದೆ ಎಂದು ಹೇಳಿದ್ದಾರೆ, ಅಂದರೆ ಸಹಕಾರಿ ಸಂಘವು ಎಲ್ಲಾ ಸದಸ್ಯರ ಆರ್ಥಿಕ ಅಗತ್ಯೆಗಳನ್ನು ಸರಿಯಾಗಿ ಪೂರೈಸುತ್ತಿದೆ ಎಂದು ತಿಳಿಯಬಹುದು.

ಸಹಕಾರಿ ಸಂಘ ಮಾತ್ರವಲ್ಲದೆ ಬೇರೆ ಯಾವುದಾದರೂ ಬ್ಯಾಂಕಿನಲ್ಲಿ ಉಳಿತಾಯ ಮಾಡುವಿರಾ?

ಕೋಷ್ಟಕ ೫. ೨೫

ಕ್ರ.ಸಂ.	ಹೌದು	ಇಲ್ಲಾ	ಒಟ್ಟು ಶೇಕಡಾ
೦೧.	೪೯	೫೧	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಸದಸ್ಯರು ಸಹಕಾರಿ ಸಂಘದಲ್ಲಿ ಹೆಚ್ಚಾಗಿ ಉಳಿತಾಯ ಮಾಡುತ್ತಾರೆ ಎನ್ನುವುದು ಮೇಲಿನ ಕೋಷ್ಟಕದಲ್ಲಿ ತಿಳಿಯಬಹುದು. ಶೇ. ೫೧ ರಷ್ಟು ಸದಸ್ಯರು ಬೇರೆ ಯಾವುದೇ ಬ್ಯಾಂಕಿನಲ್ಲಿ ಉಳಿತಾಯ ಮಾಡಿಲ್ಲ, ಎಂದರೆ ಶೇ.೪೯ ರಷ್ಟು ಸದಸ್ಯರು ಮಾತ್ರ ಬೇರೆ ಬ್ಯಾಂಕಿನಲ್ಲಿ ಉಳಿತಾಯ ಮಾಡಿದ್ದೇವೆ ಎಂದಿದ್ದಾರೆ.

ನಿಮ್ಮ ಸಂಬಂಧಿಕರು ಯಾರಾದರೂ ಮಹಿಳಾ ಸಹಕಾರಿ ಸಂಘದಲ್ಲಿ ಉದ್ಯೋಗಿಯಾಗಿ ಸೇವೆ ಸಲ್ಲಿಸುತಿರುವೀರಾ?

ಕೋಷ್ಟಕ ೫. ೨೬

ಕ್ರ.ಸಂ	ಹೌದು	ಇಲ್ಲಾ	ಗೊತ್ತಿಲ್ಲ	ಒಂದಕ್ಕಿಂತ ಹೆಚ್ಚು	ಒಟ್ಟು ಶೇಕಡಾ
೦೧.	೦೨	೯೭	೦	೦	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಮೇಲಿನ ಕೋಷ್ಟಕದಲ್ಲಿ ತಿಳಿಸಿದಂತೆ ಶೇ.೯೭ ರಷ್ಟು ಸದಸ್ಯರ ಸಂಬಂಧಿಕರು ಯಾರೂ ಸಹಕಾರಿ ಸಂಘದಲ್ಲಿ ಸೇವೆ ಸಲ್ಲಿಸುತ್ತಿಲ್ಲ. ಕೇವಲ ೦೨ ರಷ್ಟು ಸದಸ್ಯರ ಸಂಬಂಧಿಕರು ಮಾತ್ರ ಸಂಘದಲ್ಲಿ ಉದ್ಯೋಗಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಸಂಘದ ಸದಸ್ಯರಾಗಿ ತಾವು ಹೊಂದಿರುವ ಸೌಲಭ್ಯಗಳು

ಅಡುಗೆ ಇಂಧನ-

- ಗ್ಯಾಸ್-೪೦
- ಮರ/ಇದ್ದಿಲು-೬೦
- ಸೀಮೆಎಣ್ಣೆ-೦

ಕುಡಿಯುವ ನೀರಿನ ಸೌಲಭ್ಯಗಳು:

- ಸ್ವಂತ -೮೪
- ಪಬ್ಲಿಕ-೧೬

ಸ್ವಂತ ಟಾಯ್ಲೆಟ ವ್ಯವಸ್ಥೆ ಇದೆಯಾ

- ಹೌದು-೯೭
- ಇಲ್ಲಾ-೦೩

ಸದಸ್ಯರು ಹೊಂದಿರುವ ಸೌಲಭ್ಯಗಳ ಬಗ್ಗೆ ವಿವರಿಸಲಾಗಿದೆ. ಶೇ.೪೦ ರಷ್ಟು ಸದಸ್ಯರು ಗ್ಯಾಸ ಮೂಲಕ ಅಡುಗೆ ಮಾಡಿದರೆ ಶೇ.೬೦ ರಷ್ಟು ಮರ/ಇದ್ದಿಲು ಮೂಲಕ ತಮ್ಮ ಅಡುಗೆ ವ್ಯವಸ್ಥೆಯನ್ನು ಕಲ್ಪಿಸಿಕೊಂಡಿದ್ದಾರೆ.

ಕುಡಿಯುವ ನೀರಿನ ಸೌಲಭ್ಯದಲ್ಲಿ ಶೇ.೮೪ ರಷ್ಟು ಸದಸ್ಯರು ಸ್ವಂತ ಬಾವಿ ಹೊಂದಿದರೆ, ಶೇ. ೧೬ ರಷ್ಟು ಸದಸ್ಯರು ಕುಡಿಯುವ ನೀರಿಗಾಗಿ ಪಬ್ಲಿಕ ನೀರನ್ನು ಹೊಂದಿಕೊಂಡಿದ್ದಾರೆ.

ಹಾಗೆಯೇ ಶೇ. ೯೭ ರಷ್ಟು ಸದಸ್ಯರ ಮನೆಯಲ್ಲಿ ಟಾಯ್ಲೆಟ ವ್ಯವಸ್ಥೆ ಇರುವುದು ಸದಸ್ಯರಲ್ಲಿ ಸಾಮಾಜಿಕವಾಗಿ ಸಬಲರಾಗಿ ಸ್ವಚ್ಛತೆ ಬಗ್ಗೆ ಅರಿವು ಇರುವುದು ತಿಳಿಯುತ್ತದೆ.ಕೇವಲ ೦೩ ರಷ್ಟು ಮಾತ್ರ ಜನರು ಟಾಯ್ಲೆಟ ವ್ಯವಸ್ಥೆ ಇಲ್ಲಾ ಎಂದಿದ್ದಾರೆ.

ನಿಮ್ಮ ಬ್ಯಾಂಕಿನ ಉದ್ಯೋಗಿಗಳು ನಿಮಗೆ ಸಾಲ ದೊರಕಿಸಿಕೊಡುವಲ್ಲಿ ನಿಮ್ಮ ಅಭಿಪ್ರಾಯವೇನು?

ಕೋಷ್ಟಕ ೫. ೨೭

ಕ್ರ.ಸಂ	ಉತ್ತಮ	ಅತೀ ಉತ್ತಮ	ಸಾಧಾರಣ	ಉತ್ತಮವಾಗಿಲ್ಲ	ಒಟ್ಟು ಶೇಕಡಾ
೦೧.	೨೧	೭೮	೦	೦	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಸಹಕಾರಿ ಸಂಘದಲ್ಲಿ ಸದಸ್ಯರಿಗೆ ಸಾಲ ದೊರಕಿಸಿಕೊಡಲು ಬ್ಯಾಂಕಿನ ಉದ್ಯೋಗಿಗಳು ಹೆಚ್ಚು ಸಹಾಯ ಮಾಡುತ್ತಾರೆ ಎಂಬುವುದು ಮೇಲಿನ ಕೋಷ್ಟಕದಲ್ಲಿ ಸ್ಪಷ್ಟವಾಗುತ್ತದೆ. ಶೇ.೭೮ ರಷ್ಟು ಸದಸ್ಯರು ಅತೀ ಉತ್ತಮ ಎಂದು ಹೇಳಿದರೆ ಶೇ.೨೧ ರಷ್ಟು ಉತ್ತಮ ಎಂದು ಹೇಳಿದ್ದಾರೆ.ಇದರಿಂದ ಬ್ಯಾಂಕಿನ ಉದ್ಯೋಗಿಗಳು ಸಾಲ ದೊರಕಿಸಿಕೊಡುವಲ್ಲಿ ಸದಸ್ಯರಿಗೆ ಸಹಾಯ ಮಾಡುತ್ತಾರೆ ಎಂದು ತಿಳಿಯಬಹುದು.

ನೀವು ಕೃಷಿ ಭೂಮಿ ಹೊಂದಿರುವೀರಾ? ಹೌದಾದ್ದಲ್ಲಿ ತಿಳಿಸುವೀರಾ.

ಕೋಷ್ಟಕ ೫.೨೮

ಕ್ರ.ಸಂ.	ಹೊಂದಿಲ್ಲ	ಒಂದು ಎಕ್ರೆಗಿಂತ ಕಡಿಮೆ	ಒಂದರಿಂದ ಐದು ಎಕ್ರೆಯ ಒಳಗೆ	ಐದು ಎಕ್ರೆಕ್ಕಿಂಥ ಜಾಸ್ತಿ	ಒಟ್ಟು ಶೇಕಡಾ
೦೧	೪೧	೪೫	೧೪	೦	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಮೇಲಿನ ಕೋಷ್ಟಕದಲ್ಲಿ ತಿಳಿಸಿದಂತೆ ಶೇ.೪೫ ರಷ್ಟು ಸದಸ್ಯರಿಗೆ ಒಂದು ಎಕ್ರೆಗಿಂತ ಕಡಿಮೆ ಕೃಷಿ ಭೂಮಿ ಹೊಂದಿದರೆ,ಶೇ.೪೧ ರಷ್ಟು ಸದಸ್ಯರು ಕೃಷಿ ಭೂಮಿಯನ್ನು ಹೊಂದಿಲ್ಲ ಎಂದು ಹೇಳಿದ್ದಾರೆ.ಹಾಗೆಯೇ ಶೇ.೧೪ ರಷ್ಟು ಸದಸ್ಯರು ಒಂದು ಎಕ್ರೆಯಿಂದ ಐದು ಎಕ್ರೆಯ ಒಳಗೆ ಕೃಷಿ ಭೂಮಿಯನ್ನು ಹೊಂದಿದ್ದಾರೆ ಎಂದು ತಿಳಿಯಬಹುದು.

ನಿಮ್ಮ ಸಹಕಾರಿ ಸಂಘದಿಂದ ಲಾಭಾಂಶವನ್ನು ಪಡೆಯುತ್ತಿದ್ದೀರಾ?

ಕೋಷ್ಟಕ ೫. ೨೯

ಕ್ರ.ಸಂ.	ಹೌದು	ಇಲ್ಲಾ	ಒಟ್ಟು ಶೇಕಡಾ
೦೧.	೬೯	೩೧	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಸಹಕಾರಿ ಸಂಘದಿಂದ ಶೇ.೬೯ ರಷ್ಟು ಸದಸ್ಯರು ಲಾಭಾಂಶವನ್ನು ಪಡೆಯುತ್ತಿದ್ದಾರೆ.ಶೇ. ೩೧ ರಷ್ಟು ಸದಸ್ಯರು ಪಡೆಯುತ್ತಿಲ್ಲ ಎಂದು ಹೇಳಿದ್ದಾರೆ. ಒಟ್ಟಾ ರೆ ಹೆಚ್ಚಿನ ಸದಸ್ಯರಿಗೆ ಸಂಘದಿಂದ ಲಾಭಾಂಶ ವಿವರಣೆ ಆಗುತ್ತಿದೆ ಎಂದು ತಿಳಿಯಬಹುದು.

ನಿಮ್ಮ ಸಂಘದಿಂದ ಮಹಿಳೆಯರ ಎಲ್ಲಾ ರೀತಿಯ ಅಭಿವೃದ್ಧಿ ಸಾಧ್ಯವಿದೆ ಎಂದು ನಿಮಗೆ ಅನುಸುತ್ತೀದೆಯಾ?

ಕೋಷ್ಟಕ ೫. ೩೦

ಕ್ರ.ಸಂ.	ಹೌದು	ಇಲ್ಲಾ	ಕಡಿಮೆ	ಅತೀ ಹೆಚ್ಚು	ಒಟ್ಟು ಶೇಕಡಾ
೦೧.	೫೨	೦	೦	೪೮	೧೦೦

ಮೂಲ: ಸಂಶೋದಕರ ಕ್ಷೇತ್ರ ಕಾರ್ಯದಾರಿತ ಮಾಹಿತಿ

ಮೇಲಿನ ಕೋಷ್ಟಕದಲ್ಲಿ ತೋರಿಸಿದ್ದಂತೆ ಶೇ.೫೨ ರಷ್ಟು ಸದಸ್ಯರು ಸಹಕಾರಿ ಸಂಘದಿಂದ ಮಹಿಳೆಯರ ಅಭಿವೃದ್ಧಿ ಸಾಧ್ಯ ಎಂದು ಹೇಳಿದ್ದಾರೆ.ಹಾಗೆ ಶೇ. ೪೮ ರಷ್ಟು ಸದಸ್ಯರು ಅಭಿವೃದ್ಧಿ ಅತೀ ಹೆಚ್ಚು ಸಾಧ್ಯವಾಗುತ್ತದೆ ಎನ್ನುವುದರ ಮೂಲಕ ಮಹಿಳಾ ಸಹಕಾರಿ ಸಂಘದಿಂದ ಮಹಿಳೆಯರ ಅಭಿವೃದ್ಧಿ ಸಾದ್ಯವಾಗುತ್ತದೆ ಎಂದು ದೃಡವಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಇತರ ಸಲಹೆಗಳು ಇದ್ದಲ್ಲಿ

ಸಂಘದ ಸದಸ್ಯರಿಗೆ ಇತರ ಸಲಹೆಗಳ ಬಗ್ಗೆ ಪ್ರಶ್ನಿಸಿದ್ದಾಗ ಸಹಕಾರಿ ಸಂಘವು ಮಹಿಳೆಯರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡಬೇಕು ಎಂದು ತುಂಬಾ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹಾಗೆಯೇ ಹೆಚ್ಚು ಹೆಚ್ಚು ವೈಯುಕ್ತಿಕ ಸಾಲವನ್ನು ನೀಡಿ, ಮಹಿಳೆಯರು ಸರಕಾರದಿಂದ ಸಿಗುವ ಸೌಲಭ್ಯಗಳು ಈ ಸಂಘಗಳ ಮೂಲಕವೇ ಸಿಗುವಂತಾದರೆ ತುಂಬಾ ಅನುಕೂಲ ಎನ್ನುತ್ತಾರೆ. ಹಾಗೆಯೇ ಬಡ್ಡಿ ಮನ್ನಾದಂತಹ ಸೌಲಭ್ಯಗಳ ಸರಕಾರದಿಂದ ಬಂದಾಗ ಮಹಿಳೆಯರಿಗೆ ಅನುಕೂಲವಾಗುತ್ತದೆ ಎಂದು ತಿಳಿಸಿದ್ದಾರೆ. ಠೇವಣೆಗೆ ವಿಮಾ ಭದ್ರತೆಯನ್ನು ಒದಗಿಸಬೇಕು ಎನ್ನುವುದು ಕೆಲವು ಸದಸ್ಯರ ಅಭಿಪ್ರಾಯವಾಗಿದೆ.

೫.೨: ಅಧ್ಯಯನದ ಪಲಿತಗಳು

- ಪ್ರಸ್ತುತ ಅದ್ಯಯನದಲ್ಲಿ ಕುಂದಾಪುರ ತಾಲೂಕಿನ ಮಹಿಳಾ ಸಹಕಾರಿ ಸಂಘಗಳ ಸದಸ್ಯರ ಸಮಾಜಿಕ ಮತ್ತು ಆರ್ಥಿಕ ಸಬಲೀಕರಣವನ್ನು ಪರಿಶೀಲಿಸಿದಾಗ ಹೆಚ್ಚಾಗಿ ಮಹಿಳಾ ಸದಸ್ಯರು ಈ ಸಂಘಗಳಿಂದ ಹೆಚ್ಚು ಅನುಕೂಲವನ್ನು ಪಡೆದುಕೊಂಡಿದ್ದು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅಭಿವೃದ್ದಿ ಹೊಂದಿದ್ದಾರೆ ಎಂದು ತಿಳಿಯಬಹುದು.
- ಹೆಚ್ಚಿನ ಸದಸ್ಯರು ಆರ್ಥಿಕವಾಗಿ ಸಬಲೀಕರಣರಾಗಿದ್ದು ಸಂಘದ ಮೂಲಕ ಅಲ್ಪಾವಧಿ ಮತ್ತು ಮದ್ಯಮವಧಿ ಸಾಲವನ್ನು ಪಡೆಯುತ್ತಿದ್ದು ಹಾಗೆಯೇ ಮರುಪಾವತಿಯನ್ನು ಕ್ಲಪ್ತ ಸಮಯದಲ್ಲಿ ಮಾಡುತ್ತಾ ಸಂಘದ ಲಾಭಾಂಶವನ್ನು ಪಡೆಯುತ್ತಿದ್ದಾರೆ.
- ಸದಸ್ಯರು ಸಂಘದಲ್ಲಿ ಇಟ್ಟಿರುವ ಠೇವಣೆಗೆ ವಿಮಾ ಭದ್ರತೆ ಇಲ್ಲ ಎನ್ನುವುದು ಸದಸ್ಯರ ಮತ್ತು ಸಂಘದ ಉದ್ಯೋಗಿಗಳ ಮೂಲಕ ತಿಳಿದು ಬಂತು. ಮಹಿಳಾ ಸದಸ್ಯರ ಠೇವಣೆಗೆ ವಿಮೆ ಭದ್ರತೆ ಒಳಪಡಿಸಿದರೆ ಹೆಚ್ಚು ಹೆಚ್ಚು ಠೇವಣೆ ಸಂಗ್ರಹಿಸಿ ಸಂಘದ ಅಭಿವೃದ್ದಿಯಲ್ಲಿ ತೊಡಗಿಸಿಕೊಳ್ಳಬಹುದು ಎಂಬುವುದು ಅವರ ಅಭಿಪ್ರಾಯವಾಗಿದೆ.
- ಮಹಿಳಾ ಸದಸ್ಯರಿಗೆ ಸರಕಾರದಿಂದ ದೊರೆಯುವ ಬಡ್ಡಿ ಮನ್ನಾ ಮತ್ತು ಕಡಿಮೆ ಬಡ್ಡಿಯ ಸಾಲ ನೀಡುವಿಕೆ. ಸಂಘದ ಮೂಲಕ ಮಹಿಳೆಯರಿಗೆ ಸಿಗಬೇಕು ಎನ್ನುವ ಅಭಿಪ್ರಾಯವನ್ನು ತಿಳಿಸಿದ್ದಾರೆ.
- ಸಾಮಾಜಿಕವಾಗಿ, ಶೈಕ್ಷಣಿಕವಾಗಿಯೂ ಸದಸ್ಯರ ಮಕ್ಕಳು,ಕುಟುಂಬದವರು ಅಭಿವೃದ್ದಿ ಸಾದಿಸುತ್ತಿದ್ದು ಕ್ಷೇತ್ರ ಕಾರ್ಯದಲ್ಲಿ ತಿಳಿದು ಬಂದಿದ್ದು ಇದರಂದ ಸದಸ್ಯರ ಅಭಿವೃದ್ದಿ ಸಾದ್ಯವಾಗಿವೆ, ಎಂದು ತಿಳಿಯಬಹುದಾಗಿದೆ. ಹೆಚ್ಚು ಹೆಚ್ಚು ಸಹಕಾರಿ ಸಂಘಗಳ ಸ್ಥಾಪನೆಯಾದಾಗ ಮಹಿಳೆಯರ ಅಭಿವೃದ್ದಿ ಸಾದ್ಯವಿದೆ, ಎಂದು ತಿಳಿಯಬಹುದು.

೫.೩: ಉಪ ಸಂಹಾರ

ಮಹಿಳಾ ಸಹಕಾರಿ ಸಂಘದಿಂದ ಮಹಿಳಾ ಸಬಲೀಕರಣ ಕುಂದಾಪುರ ತಾಲೂಕ ಒಂದು ಅಧ್ಯಯನ ಎನ್ನುವ ಈ ಅಧ್ಯಯನವು ಕುಂದಾಪುರ ತಾಲೂಕಿನಲ್ಲಿ ಕಾರ್ಯಚರಿಸುತ್ತಿರುವ ಮಹಿಳಾ ಸಹಕಾರಿ ಸಂಘಗಳ ಸದಸ್ಯರಿಗೆ ಪ್ರಶ್ನಾವಳಿಗಳ ಮೂಲಕ ಸಂದರ್ಶನ ನಡೆಸಿ ಸಂಗ್ರಹಿಸಿ ಅಧ್ಯಯನ ಮಾಡಲಾಗಿದೆ.

ಪ್ರಸ್ತುತ ಸಮಾಜದಲ್ಲಿ ಮಹಿಳೆಯರ ಅಭಿವೃದ್ದಿಯ ಮೂಲಕ ದೇಶದ ಅಭಿವೃದ್ದಿ, ಸಮಾಜದ ಅಭಿವೃದ್ದಿ, ಕುಟುಂಬದ ಅಭಿವೃದ್ದಿ ಸಾಧ್ಯವಿದೆ ಎನ್ನುವ ಈ ಸಂದರ್ಭದಲ್ಲಿ ಮಹಿಳೆಯರಿಗೆ ಸರಿಯಾದ ಆರ್ಥಿಕ ಮತ್ತು ಸಾಮಾಜಿಕ ಸೌಲಭ್ಯವನ್ನು ಒದಗಿಸುವುದರ ಮೂಲಕ ಮಹಿಳಾ ಸಹಕಾರಿ ಸಂಘಗಳು ತಮ್ಮ ಪಾತ್ರವನ್ನು ಮಹಿಳಾ ಸಬಲೀಕರಣದಲ್ಲಿ ಹೊಂದಿವೆ ಎಂದು ಈ ಅಧ್ಯಯನವು ದೃಡ ಪಡಿಸುತ್ತದೆ. ದೇಶದ ಅಭಿವೃದ್ದಿಗಾಗಿ ಮಹಿಳೆಯರ ಸೇವೆ ಅತ್ಯಂತ ಮುಖ್ಯವಾಗಿದ್ದುಆ ನಿಟ್ಟಿನಲ್ಲಿ ಹೆಚ್ಚು ಹೆಚ್ಚು ಮಹಿಳಾ ಸಹಕಾರಿ ಸಂಘಗಳ ಮೂಲಕ ಸರಕಾರವು ಕೈ ಜೋಡಿಸಿ ಮಹಿಳೆಯರ ಅಭಿವೃದ್ದಿಯ ಜೊತೆಗೆ ದೇಶದ ಅಭಿವೃದ್ದಿಯಲ್ಲಿ ಈ ಸಂಘಗಳ ಮೂಲಕ ಕೆಲಸ ಮಾಡುವುದು ಅಗತ್ಯವಾಗಿದೆ.

೫.೪: ಭವಿಷ್ಯದ ಸಂಶೋಧನಾ ಸಾಧ್ಯತೆಗಳು

ಸಂಶೋಧನೆಯಲ್ಲಿ ಯಾವುದೇ ವಿಷಯವನ್ನು ಅಧ್ಯಯನ ಮಾಡಿದರೂ, ಅದರಲ್ಲಿ ಹೊಸತನವನ್ನು ಕಂಡು ಹಿಡಿಯುವುದು ಮತ್ತು ಮುಂದೆ ನಡೆಸುವ ಸಂಶೋಧನೆಗಳ ಬಗ್ಗೆ ಬೆಳಕು ಚೆಲ್ಲುವುದು ಮುಖ್ಯವಾದುದು ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವು ಕುಂದಾಪುರ ತಾಲೂಕಿನ ವ್ಯಾಪ್ತಿಗೆ ಒಳ ಪಟ್ಟಿರುವುದರಿಂದ ಮುಂದಿನ ಸಂಶೋಧನಾ ಸಾಧ್ಯತೆಗಳನ್ನು ಈ ಕೆಳಗಿನಂತೆ ಹೇಳಬಹುದು.

- ಮಹಿಳಾ ಸಬಲೀಕರಣದಲ್ಲಿ ಇತರ ತಾಲೂಕು ಅಥವಾ ಜಿಲ್ಲಾವಾರು ಸಹಕಾರಿ ಸಂಘಗಳ ತುಲನಾತ್ಮಕ ಅಧ್ಯಯನ ನಡೆಸುವ ಸಾಧ್ಯತೆ ಹೆಚ್ಚು ಇರುತ್ತದೆ ಎನ್ನುಬಹುದು.

- ಮಹಿಳಾ ಸಬಲೀಕರಣದಲ್ಲಿ ತಾಲೂಕಿನ ವ್ಯಾಪ್ತಿಯಲ್ಲಿರುವ ಇತರ ಸಹಕಾರಿ ಸಂಘಗಳು ಅಂದರೆ ಕೃಷಿ ಪತ್ತಿನ ಸಂಘಗಳು,ವಾಣಿಜ್ಯ ಪತ್ತಿನ ಸಂಘಗಳು,ವಾಣಿಜ್ಯ ಬ್ಯಾಂಕ್ ಅಂದರೆ ಸರಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಜೊತೆ ಹೋಲಿಕೆ ಮಾಡಿ ಅಧ್ಯಯನ ಮಾಡಬಹುದು.

- ಸಬಲೀಕರಣದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಮಾತ್ರವಲ್ಲದೆ ಸಾಂಸ್ಕೃತಿಕ, ಶೈಕ್ಷಣಿಕವಾಗಿ ಹೇಗೆ ಮಹಿಳಯರು ಸಬಲೀಕರಣ ಸಾಧ್ಯವಾಗಿದೆ ಎಂದು ತಿಳಿಯಬಹುದು.

- ಅಧ್ಯಯನವು ವ್ಯಾಪ್ತಿಯನ್ನು ಇನ್ನು ವಿಸ್ತಾರ ಮಾಡಿ ಸದಸ್ಯರು, ಬ್ಯಾಂಕಿನ ಸಿಬ್ಬಂದಿಯವರ, ಆಡಳಿತ ಮಂಡಳಿಯರ ಅಭಿಪ್ರಾಯವನ್ನು ಸಂಗ್ರಹಿಸಿ ಸಂಘವು ಸಬಲೀಕರಣದಲ್ಲಿ ತಮ್ಮ ಪಾತ್ರವೇನು ಎಂದು ವಿಸ್ತಾರವಾಗಿ ತಿಳಿಯಬಹುದು.

ಅನುಬಂಧ-೧

ಕೋಷ್ಟಕಗಳ ಪಟ್ಟಿ

ಕ್ರ. ಸಂಖ್ಯೆ	ಕೋಷ್ಟಕದ ಮಾಹಿತಿ	ಪುಟ ಸಂಖ್ಯೆ
೧೩	ಸಹಕಾರಿ ಸಂಘದಿಂದ ನಿಮ್ಮ ಕುಟುಂಬಕ್ಕೆ ಆದ ಲಾಭ:	೩೭
೧೪	ನಿಮ್ಮ ಕುಟುಂಬದ/ಮಕ್ಕಳ ವಿದ್ಯಾಬ್ಯಾಸದ ಮಟ್ಟ:	೩೭
೧೫	ನೀವು ಸ್ವಂತ ಮನೆಯಲ್ಲಿ ವಾಸವಾಗಿರುವಿರೋ ಅಥವಾ ಬಾಡಿಗೆ ಮನೆಯಲ್ಲಿಯೋ	೩೮
೧೬	ನೀವು ಯಾವ ಉದ್ದೇಶಕ್ಕಾಗಿ ಸಂಘದಿಂದ ಸಾಲ ಮಾಡಿರುವಿರಿ	೩೮
೧೭	ತಾವು ಸಂಘದಲ್ಲಿ ಉಳಿತಾಯ ಮಾಡಿರುವಿರಾ? ಮಾಡಿದಲ್ಲಿ ಯಾವ ಉದ್ದೇಶ?	೩೯
೧೮	ಯಾರು ನಿಮ್ಮನ್ನು ಸಂಘಕ್ಕೆ ಸದಸ್ಯರಾಗಲು ಪ್ರೇರೇಪಿಸಿದರು ?	೩೯
೧೯	ನಿಮ್ಮ ಕುಟುಂಬದ ನಿರ್ವಹಣೆ ಯಾರಿಂದ ಆಗುತ್ತಿದೆ?	೪೦
೨೦	ನಿಮ್ಮ ಬ್ಯಾಂಕಿಗೆ ಸಾಮಾನ್ಯವಾಗಿ ಭೇಟಿ ನೀಡುವ ಸಂದರ್ಭ ಯಾವಾಗ?	೪೦
೨೧	ನಿಮ್ಮ ಸಹಕಾರಿ ಸಂಘವು ಲಾಭಾಂಶದಲ್ಲಿ/ನಷ್ಟದಲ್ಲಿ ನೆಡೆಯುತ್ತಿದೆಯಾ?	೪೧
೨೨	ತಿಂಗಳಿಗೆ ಸರಾಸರಿ ಉಳಿತಾಯದ ಪ್ರಮಾಣ ತಿಳಿಸಿ.	೪೧
೨೩	ನೀವು ಯಾವಾಗದರೂ ಸಂಘದ ಆಡಳಿತ ನಿರ್ದೇಶಕರು ಆಗಿರುವೀರಾ? ಆಗಿದ್ದಲ್ಲಿ ತಿಳಿಸುವೀರಾ?	೪೨
೨೪	ಸಹಕಾರಿ ಸಂಘವು ಸದಸ್ಯರ ಆರ್ಥಿಕ ಅಗತ್ಯಗಳನ್ನು ಪೂರೈಸುತ್ತಿದೆಯೋ?	೪೨
೨೫	ಸಹಕಾರಿ ಸಂಘ ಮಾತ್ರವಲ್ಲದೆ ಬೇರೆ ಯಾವುದಾದರೂ ಬ್ಯಾಂಕಿನಲ್ಲಿ ಉಳಿತಾಯ ಮಾಡುವೀರಾ?	೪೩

ಕ್ರ. ಸಂಖ್ಯೆ	ಕೋಷ್ಟಕದ ಮಾಹಿತಿ	ಪುಟ ಸಂಖ್ಯೆ
೨೬	ನಿಮ್ಮ ಸಂಬಂಧಿಕರು ಯಾರಾದರೂ ಮಹಿಳಾ ಸಹಕಾರಿ ಸಂಘದಲ್ಲಿ ಉದ್ಯೋಗಿಯಾಗಿ ಸೇವೆ ಸಲ್ಲಿಸುತಿರುವೀರಾ?	೪೩
೨೭	ನಿಮ್ಮ ಬ್ಯಾಂಕಿನ ಉದ್ಯೋಗಿಗಳು ನಿಮಗೆ ಸಾಲ ದೊರಕಿಸಿಕೊಡುವಲ್ಲಿ ನಿಮ್ಮ ಅಭಿಪ್ರಾಯವೇನು?	೪೪
೨೮	ನೀವು ಕೃಷಿ ಭೂಮಿ ಹೊಂದಿರುವಿರಾ? ಹೌದಾದ್ದಲ್ಲಿ ತಿಳಿಸುವಿರಾ?	೪೫
೨೯	ನಿಮ್ಮ ಸಹಕಾರಿ ಸಂಘದಿಂದ ಲಾಭಾಂಶವನ್ನು ಪಡೆಯುತ್ತಿದ್ದೀರಾ?	೪೫
೩೦	ನಿಮ್ಮ ಸಂಘದಿಂದ ಮಹಿಳೆಯರ ಎಲ್ಲಾ ರೀತಿಯ ಅಭಿವೃದ್ಧಿ ಸಾಧ್ಯವಿದೆ ಎಂದು ನಿಮಗೆ ಅನುಸುತ್ತೀದೆಯಾ?	೪೬

ಅನುಬಂಧ-೨

ಪ್ರಶ್ನಾವಳಿ

ಪೀಠಿಕೆ:

ಪ್ರಸ್ತುತ ಅಧ್ಯಯನದ ಮುಖ್ಯ ಉದ್ದೇಶವು ಮಹಿಳಾ ಸಶಕ್ತೀಕರಣದಲ್ಲಿ ಕುಂದಾಪುರ ತಾಲೂಕಿನ ಮಹಿಳಾ ಸಹಕಾರಿ ಸಂಘಗಳ ಕೊಡುಗೆಯನ್ನು ಪರಿಶೀಲಿಸುವುದು ಮತ್ತು ಸದಸ್ಯರ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣದಲ್ಲಿ ಹೇಗೆ ತನ್ನ ಕೊಡುಗೆಯನ್ನು ನೀಡಿದೆ ಎಂದು ಪರಾಮರ್ಶೆ ನಡೆಸುದಾಗಿದೆ.

ಸೂಚನೆ:

ಈ ಪ್ರಶ್ನಾವಳಿಯಲ್ಲಿ ವಿವಿಧ ಪ್ರಕಾರಣ ಪ್ರಶ್ನೆಗಳಿವೆ. ಕೆಲವು ಪ್ರಶ್ನೆಗಳಿಗೆ ಚಟುಕಾಗಿ ಉತ್ತರಿಸಬಹುದು ಮತ್ತು ಇನ್ನು ಕೆಲವು ಪ್ರಶ್ನೆಗಳಿಗೆ ಕೊಟ್ಟ ಉತ್ತರದಲ್ಲಿ ಸರಿಯಾದುದನ್ನು ಉತ್ತರಿಸಿದರಾಯಿತು.

- ಈ ಸಮೀಕ್ಷೆಯನ್ನು ಕೆಲವು ಅಧ್ಯಯನದ ಉದ್ದೇಶಕ್ಕಾಗಿ ಮಾತ್ರ ಮಾಡಲಾಗುತ್ತದೆ. ಹಾಗೂ ನೀವು ವ್ಯಕ್ತಪಡಿಸಿರುವ ಅಭಿಪ್ರಾಯಗಳ ಗೌಪ್ಯತೆಯನ್ನು ಕಾಪಾಡಲಾಗುವುದು.
- ಈ ಆಧ್ಯಯನಕ್ಕೆ ನಿಮ್ಮ ಇತರ ಉಪಯುಕ್ತ ಸಲಹೆ ಮತ್ತು ಪೂರಕ ಅಭಿಪ್ರಾಯವಿದ್ದಲ್ಲಿ ಅತೀ ವಿನಯದಿಂದ ಕೃತಜ್ಞತಾ ಪೂರ್ವಕವಾಗಿ ಸ್ವೀಕರಿಸಲಾಗುವುದು.
- ನಿಮ್ಮ ಸಹಕಾರಕ್ಕಾಗಿ ಕೃತಜ್ಞತೆಗಳು.

ಭಾಗ-೧-ಸಾಮಾನ್ಯ ಮಾಹಿತಿಗಳು

೧) ಹೆಸರು:

೨) ವಯಸ್ಸು:ಅ)೧೮-೩೦ ☐ ಆ)೩೦-೪೪ ☐

ಇ) ೪೫-೫೪ ☐ ಈ) ೫೫ ಮತ್ತು ಮೇಲ್ಪಟ್ಟು ☐

೩) ಉದ್ಯೋಗ:

೪) ಜಿಲ್ಲೆ:

೫) ತಾಲೊಕು:

೬) ವಾಸಸ್ಥಳ:

೭) ವಾರ್ಷಿಕ ಆದಾಯ :ಅ)೧೦೦೦ ದಿಂದ ೧೦,೦೦೦ ☐

ಆ) ೧೦,೦೦೦ ದಿಂದ ೨೦,೦೦೦ ☐

ಇ) ೨೦,೦೦೦ ದಿಂದ ೫೦,೦೦೦ ☐

ಈ) ೫೦,೦೦೦ ದಿಂದ ಮೇಲ್ಪಟ್ಟು ☐

೮) ವಿದ್ಯಾರ್ಹತೆ: ಅ)ಅನಕ್ಷರಸ್ಥ ☐ ಆ) ಪ್ರಾಥಮಿಕ ಶಿಕ್ಷಣ ☐ ಇ) ಪ್ರೌಢ ಶಿಕ್ಷಣ ☐

ಈ) ಪದವಿ ಪೂರ್ವ ಶಿಕ್ಷಣ ☐ ಉ) ಪದವಿ ಶಿಕ್ಷಣ ☐ ಊ) ಸ್ನಾತಕೋತ್ತರ ☐

ಭಾಗ ೨- ಪ್ರಾಥಮಿಕ ವಿವರಗಳು-ಸದಸ್ಯರು

೯) ನೀವು ಮಹಿಳಾ ಸಹಕಾರಿ ಸಂಘಕ್ಕೆ ಸದಸ್ಯರಾಗಿದ್ದು ಯಾವಾಗ?

ಅ) ೧೯೯೦ ಮೊದಲು ☐ ಆ) ೧೯೯೦-೨೦೦೦ ☐

ಇ) ೨೦೦೦-೨೦೦೫ ☐ ಈ) ೨೦೦೫ ರ ನಂತರ ☐

೧೦) ನೀವು ಸಹಕಾರಿ ಸಂಘದ ಸದಸ್ಯರಾಗಿರುವ ಪ್ರಧಾನ ಉದ್ದೇಶವೇನು?

ಅ) ಸಹಕಾರಿ ಸಂಘದ ಯೋಜನೆಗಳ ಸದುಪಯೋಗ ಪಡೆಯಲು ☐

ಆ) ಸಂಘದ ಚುನಾವಣೆಯಲ್ಲಿ ಮತ ಚಲಾವಣೆ/ಸ್ಪರ್ಧಿಸುವುದು ☐

ಇ) ಸಮಾಜ ಸೇವೆ ☐

ಈ) ಮೇಲಿನ ಎಲ್ಲವೂ ☐

೧೧) ಸಹಕಾರಿ ಸಂಘದಲ್ಲಿ ತಮ್ಮ ಅನುಭವ ಯಾವ ರೀತಿಯದ್ದು:

ಅ) ಸಾಮಾನ್ಯ ಸದಸ್ಯನಾಗಿ ☐

ಆ) ನಿರ್ದೇಶಕನಾಗಿ ☐

ಇ) ಅಧ್ಯಕ್ಷ/ಪದಾಧಿಕಾರಿಯಾಗಿ ☐

ಈ) ಎಲ್ಲವೂ ☐

೧೨) ಸಹಕಾರಿ ಸಂಘದ ಮೂಲಕ ನಿಮ್ಮ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ದಿ ಸಾದ್ಯವಾಗಿದೆಯೂ?

ಅ) ಹೌದು ☐

ಆ) ಇಲ್ಲ ☐

ಇ) ಕಡಿಮೆ ಪ್ರಮಾಣ ☐

ಈ) ಸಾದ್ಯವಾಗುತ್ತ ಇದೆ ☐

೧೩) ಸಹಕಾರಿ ಸಂಘದಲ್ಲಿ ನೀವು ವ್ಯಯಕ್ತಿಕವಾಗಿ ಹೆಚ್ಚು ಮಹತ್ವ ನೀಡುವ ವಿಷಯ ಯಾವುದು?

ಅ) ಸಾಲ ಪಡೆಯುವುದು ☐

ಆ) ಠೇವಣೆ ನೀಡುವುದು ☐

ಇ) ಸಹಕಾರಿ ತತ್ವದ ಪ್ರಚಾರ ☐

ಈ) ಇತರ ವಿಷಯಗಳು ☐

ಭಾಗ ೩ ಪೂರಕ ಮಾಹಿತಿ-ಸದಸ್ಯರು(ನಿಮಗೆ ಗೊತ್ತಿದೆ/ಇಲ್ಲ ಎಂದು ತಿಳಿಸಿ)

೧೪) ನೀವು ಸದಸ್ಯರಾಗಿರುವ ಸಂಘಕ್ಕೆ ಸ್ವಂತ ಕಟ್ಟಡ ಇದೆ/ಇಲ್ಲ/ಗೊತ್ತಿಲ್ಲ

೧೫) ನೀವು ಸದಸ್ಯರಾಗಿರುವ ಸಂಘಕ್ಕೆ ಹೆಚ್ಚುವರಿ ಶಾಖೆಗಳು ಇದೆ/ಇಲ್ಲ/ಗೊತ್ತಿಲ್ಲ

೧೬)ನೀವು ಸದಸ್ಯರಾಗಿರುವ ಸಂಘಕ್ಕೆ ಸಕಾಲದಲ್ಲಿ ಚುನಾವಣೆ ಆಗುತ್ತಿವೆ/ಇಲ್ಲ/ ಗೊತ್ತಿಲ್ಲ

೧೭) ನೀವು ಸದಸ್ಯರಾಗಿರುವ ಸಂಘದಲ್ಲಿ ಸರಿಯಾದ ಲೆಕ್ಕಪತ್ರಗಳ ಮಂಡನೆ/ ಪರಿಶೋಧನೆ/ ಲಾಭಾಂಶ ವಿವರಣೆ

ಇದೆ /ಇಲ್ಲ/ ಗೊತ್ತಿಲ್ಲ

೧೮) ಯಾವ ವಿಧದ ಕೃಷಿ ಸಾಲ/ ಸ್ವ-ಉದ್ಯೋಗ /ಇತರ ಸಾಲ ಪಡೆದಿರುವಿರಿ :

ಅ) ಅಲ್ಪಾವಧಿ ☐ ಆ)ಮಧ್ಯಮಾವಧಿ ☐ ಇ) ದೀರ್ಘಾವಧಿ ☐

ಭಾಗ ೪- ಸಂಘದಿಂದ ಮಹಿಳಾ ಸಶಕ್ತಿಕರಣದಲ್ಲಿ ಆರ್ಥಿಕ/ಸಾಮಾಜಿಕ ಅಭಿವೃದ್ಧಿಯ ಪ್ರಭಾವ:

೧೯) ಆರ್ಥಿಕ ಪ್ರಗತಿ ಸಾಧ್ಯವಾಗಿದೆಯೇ

ಅ) ಗಣನೀಯ ☐

ಆ) ಸಾಮಾನ್ಯ ಪ್ರಗತಿ ☐

ಇ) ವಿಶೇಷವೇನೂ ಇಲ್ಲ ☐

೨೦) ಸದಸ್ಯರಲ್ಲಿ ಉಳಿತಾಯ ಪ್ರವೃತಿ

ಅ) ಗಣನೀಯ ವೃದ್ಧಿಸಿದೆ ☐

ಆ) ಸಾಮಾನ್ಯವಾಗಿ ವೃದ್ಧಿಸಿದೆ ☐

ಇ) ವಿಶೇಷವೇನೂ ಇಲ್ಲ ☐

೨೧) ನಿಮಗೆ ಸಹಕಾರಿ ತತ್ವದ ಬಗ್ಗೆ ಇರುವ ಅನುಭವ

ಅ) ತುಂಬಾನೆ ಇದೆ ☐

ಆ) ಸಾಮಾನ್ಯವಾಗಿದೆ ☐

ಇ) ಕಡಿಮೆ ☐

೨೨) ಸಂಘದ ಸದಸ್ಯರಾಗಿ ನಿಮ್ಮ ಸಾಮಾಜಿಕ ಸಂಪರ್ಕದ ಪ್ರಮಾಣ

ಅ) ತುಂಬಾನೆ ಜಾಸ್ತಿಯಾಗಿದೆ ☐

ಆ) ಸಾಮಾನ್ಯವಾಗಿದೆ ☐

ಇ) ಕಡಿಮೆ ☐

೨೩) ನಿಮ್ಮ ಬ್ಯಾಂಕಿನ ಗ್ರಾಹಕರ ಸೇವೆಯ ಬಗ್ಗೆ

ಅ) ಉತ್ತಮ ☐

ಆ) ಅತೀ ಉತ್ತಮ ☐

ಇ) ಸಾಧಾರಣ ☐

ಈ) ಚೆನ್ನಾಗಿಲ್ಲ ☐

೨೪) ನಿಮ್ಮ ಸಹಕಾರಿ ಸಂಘವು ಸಮಾಜ ಸೇವೆ ಸಲ್ಲಿಸುತ್ತಿರುವ ಬಗ್ಗೆ

ಅ) ಉತ್ತಮ ☐

ಆ) ಅತೀ ಉತ್ತಮ ☐

ಇ) ಸಾಧಾರಣ ☐

ಈ) ಚೆನ್ನಾಗಿಲ್ಲ ☐

೨೫) ಸಹಕಾರಿ ಸಂಘದಿಂದ ನಿಮ್ಮ ಕುಟುಂಬಕ್ಕೆ ಆದ ಲಾಭ

ಅ) ಆರ್ಥಿಕವಾಗಿ ಸ್ವಾವಲಂಬನೆ ☐

ಆ) ಸಾಮಾಜಿಕವಾಗಿ ಪ್ರಬಲವಾಗಿರುವುದು ☐

ಇ) ಶೈಕ್ಷಣಿಕವಾಗಿ ಸದೃಢವಾಗಿದೆ ☐

ಈ) ಇತರ ☐

೨೬) ನಿಮ್ಮ ಕುಟುಂಬದ / ಮಕ್ಕಳ ವಿದ್ಯಾಭ್ಯಾಸದ ಮಟ್ಟ

ಅ) ಪ್ರಾಥಮಿಕ ☐

ಆ) ಪ್ರೌಢ ಶಿಕ್ಷಣ ☐

ಇ) ಪದವಿ ಮಟ್ಟ ☐

ಈ) ಸ್ನಾತಕೋತ್ತರ ಮಟ್ಟ ☐

೨೭) ನೀವು ಸ್ವಂತ ಮನೆಯಲ್ಲಿ ವಾಸವಾಗಿರುವಿರೋ ಅಥವಾ ಬಾಡಿಗೆ ಮನೆಯಲ್ಲಿಯೋ

ಅ) ಸ್ವಂತ ಮನೆ ☐

ಆ) ಬಾಡಿಗೆ ಮನೆ ☐

೨೮) ನೀವು ಯಾವ ಉದ್ದೇಶಕ್ಕಾಗಿ ಸಂಘದಿಂದ ಸಾಲ ಮಾಡಿರುವೀರಿ

ಅ) ಸಾಲ ಮಾಡಿಲ್ಲ ☐

ಆ) ಕೃಷಿ ಉಪಕರಣ ಖರೀದಿ ☐

ಇ) ಸ್ವಂತ ಉದ್ಯೋಗ ☐

ಈ) ಇತರೆ ಉದ್ದೇಶ ☐

೨೯) ತಾವು ಸಂಘದಲ್ಲಿ ಉಳಿತಾಯ ಮಾಡಿರುವೀರಾ? ಮಾಡಿದಲ್ಲಿ ಯಾವ ಉದ್ದೇಶ?

ಅ) ಉಳಿತಾಯ ಮಾಡಿಲ್ಲ ☐

ಆ) ಮಕ್ಕಳ ವಿದ್ಯಾಬ್ಯಾಸ ☐

ಇ) ಕುಟುಂಬದ ನಿರ್ವಹಣೆ ☐

ಈ) ಇತರೆ ಕಾರಣಗಳು ☐

೩೦) ಯಾರು ನಿಮ್ಮನ್ನು ಸಂಘಕ್ಕೆ ಸದಸ್ಯರಾಗಲು ಪ್ರೇರೆಪಿಸಿದರು

ಅ) ನೆರೆಹೊರೆಯರು ☐

ಆ) ಸಂಘದ ಸದ್ಯಸರು ☐

ಇ) ಸಂಘದ ಉದ್ಯೋಗಿಗಳು ☐

ಈ) ಇತರರು ☐

೩೧) ನಿಮ್ಮ ಕುಟುಂಬದ ನಿರ್ವಹಣೆ ಯಾರಿಂದ ಆಗುತಿದೆ

ಅ) ಸ್ವಂತ ☐

ಆ) ಗಂಡ/ಹೆಂಡತಿ ☐

ಇ) ತಂದೆ/ತಾಯಿ ☐

ಈ) ಇತರರು ☐

೩೨) ನಿಮ್ಮ ಬ್ಯಾಂಕೀಗೆ ಸಾಮಾನ್ಯವಾಗಿ ಭೇಟಿ ನೀಡುವ ಸಂದರ್ಭ ಯಾವಾಗ?

ಅ) ವಾರಕ್ಕೆ ಒಂದು/ಅಥವಾ ಹೆಚ್ಚು ☐

ಆ) ತಿಂಗಳಿಗೊಮ್ಮೆ ☐

ಇ) ಆರು ತಿಂಗಳಿಗೊಮ್ಮೆ ☐

ಈ) ವರ್ಷಕೊಮ್ಮೆ/ಹೆಚ್ಚು ☐

೩೩) ನಿಮ್ಮ ಸಹಕಾರಿ ಸಂಘವು ಲಾಭಾಂಶದಲ್ಲಿ/ನಷ್ಟದಲ್ಲಿ ನೆಡೆಯುತೀದೆಯಾ

ಅ) ನಷ್ಟದಲ್ಲಿ ☐

ಆ) ಲಾಭಾಂಶ ☐

ಇ) ಗೊತ್ತಿಲ್ಲ ☐

ಈ) ಕಡಿಮೆ ಪ್ರಮಾಣದಲ್ಲಿ ಲಾಭಾಂಶ ☐

೩೪) ತಿಂಗಳಿಗೆ ಸರಾಸರಿ ಉಳಿತಾಯದ ಪ್ರಮಾಣ ತಿಳಿಸಿ

ಅ) ಮಾಡುತ್ತಿಲ್ಲ ☐

ಆ) ೫೦೦ ಕಡೀಮೆ ☐

ಇ) ೫೦೦-೧೦೦೦ ☐

ಈ) ೧೦೦೦ ಕ್ಕಿಂತ ಹೆಚ್ಚು ☐

೩೫) ನೀವು ಯಾವಗಾದರು ಸಂಘದ ಆಡಳಿತ ನೀರ್ದೆಶಕರು ಆಗೀರುವೀರಾ? ಆಗಿದ್ದಲ್ಲಿ ತಿಳಿಸುವೀರಾ

ಅ) ಆಗಿಲ್ಲ ☐

ಆ) ಆಗಿದ್ದೆ ☐

ಇ) ಒಂದರಿಂದ ಮೂರು ಸಲಕ್ಕಿಂತ ಜಾಸ್ತಿ ☐

ಈ) ಮೂರು ಸಲಕ್ಕಿಂತ ಜಾಸ್ತಿ ☐

೩೬) ಸಹಕಾರಿ ಸಂಘವು ಸದಸ್ಯರ ಆರ್ಥಿಕ ಅಗತ್ಯಗಳನ್ನು ಪೂರೈಸುತಿದೆಯಾ?

ಅ) ಇಲ್ಲಾ ☐

ಆ) ಪೂರೈಸುತಿದೆ ☐

ಇ) ಸಾಧಾರಣ ☐

ಈ) ಅತೀ ಹೆಚ್ಚು ರೀತಿಯಲ್ಲಿ ☐

೩೭) ಸಹಕಾರಿ ಸಂಘ ಮಾತ್ರವಲ್ಲದೆ ಬೇರೆ ಯಾವುದಾದರು ಬ್ಯಾಂಕಿನಲ್ಲಿ ಉಳಿತಾಯ ಮಾಡಿರುವೀರಾ?

ಅ) ಹೌದು ☐

ಆ) ಇಲ್ಲಾ ☐

೩೮) ನಿಮ್ಮ ಸಂಬಂಧಿಕರು ಯಾರಾದರು ಮಹಿಳಾ ಸಹಕಾರಿ ಸಂಘದಲ್ಲಿ ಉದ್ಯೋಗಿಯಾಗಿ ಸೇವೆ ಸಲ್ಲಿಸುತಿರುವೀರಾ?

ಅ) ಹೌದು ☐

ಆ) ಇಲ್ಲಾ ☐

ಇ) ಗೊತ್ತಿಲ್ಲ ☐

ಈ) ಒಂದಕ್ಕಿಂತ ಹೆಚ್ಚು ☐

೩೯) ಸಂಘದ ಸದಸ್ಯರಾಗಿ ತಾವು ಹೊಂದಿರುವ ಸೌಲಭ್ಯಗಳು

ಅ) ಅಡುಗೆ ಇಂಧನ

ಗ್ಯಾಸ್ ☐ ಮರ/ಇದ್ದಿಲು ☐ ಸೀಮೆ ಏಣ್ಣೆ ☐

ಆ) ಕುಡಿಯುವ ನೀರಿನ ಸೌಲಭ್ಯಗಳು

ಸ್ವಂತ ☐ ಪಬ್ಲಿಕ್ ☐

ಇ) ಸ್ವಂತ ಟಾಯ್ಲೆಟ್ ವ್ಯವಸ್ಥೆ ಇದೆಯಾ

ಹೌದು ☐ ಇಲ್ಲಾ ☐

೪೦) ನಿಮ್ಮ ಬ್ಯಾಂಕೀನ ಉದ್ಯೋಗಿಗಳು ನಿಮಗೆ ಸಾಲ ದೊರೆಕೀಸಿಕೊಡುವಲ್ಲಿ ನಿಮ್ಮ ಅಭಿಪ್ರಾಯವೆನು?

ಅ) ಉತ್ತಮ ☐

ಆ) ಅತೀ ಉತ್ತಮ ☐

ಇ) ಸಾಧಾರಣ ☐

ಈ) ಉತ್ತಮವಾಗಿಲ್ಲ ☐

೪೧) ನೀವು ಕೃಷಿ ಭೂಮಿ ಹೊಂದಿರುವೀರಾ? ಹೌದಾದ್ದಲ್ಲಿ ತಿಳಿಸುವೀರಾ.

ಅ) ಹೊಂದಿಲ್ಲ ☐

ಆ) ಒಂದು ಎಕ್ರೆಗಿಂತ ಕಡಿಮೆ ☐

ಇ) ಒಂದರಿಂದ ಐದು ಎಕ್ರೆಯ ಒಳಗೆ ☐

ಈ) ಐದು ಎಕ್ರೆಯಕ್ಕಿಂತ ಜಾಸ್ತಿ ☐

೪೨) ನಿಮ್ಮ ಸಹಕಾರಿ ಸಂಘದಿಂದ ಲಾಭಾಂಶವನ್ನು ಪಡೆಯುತಿದೀರಾ?

ಅ) ಹೌದು ☐

ಆ) ಇಲ್ಲಾ ☐

೪೩) ನಿಮ್ಮ ಸಂಘದಿಂದ ಮಹಿಳೆಯರ ಎಲ್ಲಾ ರೀತಿಯಾ ಅಭಿವೃದ್ಧಿ ಸಾಧ್ಯವಿದೆ ಎಂದು ನಿಮಗೆ ಅನಿಸುತೀದೆಯಾ?

ಅ) ಹೌದು ☐

ಆ) ಇಲ್ಲಾ ☐

ಇ) ಕಡಿಮೆ ☐

ಈ) ಅತಿ ಹೆಚ್ಚು ☐

೪೪) ಇತರ ಸಲಹೆಗಳು ಇದ್ದಲ್ಲಿ______________

____

____

____

____

ಧನ್ಯವಾದಗಳು

ಅನುಬಂಧ-೩

ಉಲ್ಲೇಖಗಳು

- ೧. ನಾರಾಯಣ ದಾಮೋಧರ, ಅಸೀಮಾ, ಸಂಪುಟ ೪, ಸಂಚಿಕೆ ೪, ಮೇ ತಿಂಗಳು ೧೯೯೭, ಪುಟ ೩೪
- ೨. ನೇಮಿಚಂದ್ರ ಮಹಿಳಾ ಅಧ್ಯಯನ,ಅಂಕಿತ ಪುಸ್ತಕ, ಬೆಂಗಳೂರು ೨೦೦೧ ಪುಟ ೧-೩೦
- ೩. ಅಭಾಗುಪ್ತ ಮತ್ತು ಸ್ಮಿತಾ(ಸಂ), ಎಂಪವರ್ ಮೆಂಟ್ ಆಫ್ ವುಮನ್, ಲ್ಯಾಂಗ್ ವೇಜ್ ಅಂಡ ಅದರ ಫ್ಯಾಕ್ಟ್, ಮಂಗಳದೀಪ ಪಬ್ಲೀಕೇಷನ್ಸ್, ದುರ್ಗಾಪುರ, ಜೈಪುರ.
- ೪. ಡಾ॥.ಕೆ.ಚೆನ್ನಪ್ಪ ಗೌಡ,ಮಹಿಳೆ ಅಭಿವೃದ್ದಿ ಕಥನ ಮಹಿಳೆ ಮತ್ತು ಅಭಿವೃದ್ದಿ, ಡಾ॥ ಜಯಶೀಲ,ಸೌಕತ್ ಅಲಿ ಎಂ.ಮೇಗಲಮನಿ, ಸುಧಾಕರ.ಎಸ್(ಸಂಪಾದಕರು),ಕಿಸಾನ್ ಪಬ್ಲೀಕೇಷನ್ ಮಂಗಳೂರು,೨೦೦೭ ಪುಟ ೫-೮
- ೫. ಪ್ರೊ॥.ಎಚ್.ಆರ್.ಕೃಷ್ಣಮೂರ್ತಿ ಹೊಸಬೀಡು, ಪ್ರೊ॥.ಎಚ್.ಸಿ.ವೀರಪ್ಪಗೌಡ ಅಭಿವೃದ್ದಿ ಅರ್ಥಶಾಸ್ತ್ರ, ಸ್ವಪ್ನ ಬುಕ್ ಹೌಸ್, ಬೆಂಗಳೂರು ೨೦೦೪.
- ೬.ಮನು ಚಕ್ರವರ್ತಿ ಭಾರತೀಯ ಸ್ತ್ರೀವಾದ,ಅಕ್ಷರ ಪ್ರಕಾಶನ ಸಾಗರ ಡಿಸೆಂಬರ್ ೧೯೯೩.
- ೭. ಡಾ॥ ಪ್ರೀತಿ ಶುಭಚಂದ್ರ,ಮಹಿಳಾ ಅಧ್ಯಯನದ ತಾತ್ವಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು, ಪ್ರಸಾರಾಂಗ,ಕನ್ನಡ ವಿಶ್ವವಿದ್ಯಾನಿಲಯ ಹಂಪಿ ೨೦೦೨
- ೮. ಡಾ॥ ಬಿ.ಎನ್. ಸುಮಿತ್ರಾ ಬಾಯಿ, ಸ್ತ್ರೀವಾದ, ಜಿ.ಎಸ್. ದಕ್ಷಿಣಾಮೂರ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೯೯
- ೯. ಮೇರುನಂದನ್ ಕೆ.ಬಿ.ನವೀದ್ ಅಹಮದ್,ಭಾರತ ಸಂವಿಧಾನ,ಮೆರಗು ಪ್ರಕಾಶನ ಬೆಂಗಳೂರು ೨೦೧೧ ಪುಟ ೩೦-೫೦,೧೭೨-೧೯೦.
- ೧೦. ಮಂಜುಳಾ ಬಿ.ಸಿ''ಬ್ಯಾಂಕ್ ಪೈನಾನ್ಸ್ ಪಾರ್ ಸೆಲ್ಫ್ ಎಂಪ್ಲಾಯಿಮೆಂಟ್ ಆಫ್ ವುಮೆನ್-ಎ ಕೇಸ್ ಸ್ಟಡಿ ಆಫ್ ದ ಸೆಲ್ಫ್ ಎಂಪ್ಲಾಯ್‌ಮೆಂಟ್ ಪ್ರೋಗ್ರಾಮ್ ಫಾರ್ ಅರ್‌ಬನ್ ಪೂವರ್ ಇನ್ ಮಂಗಳೂರು ಸಿಟಿ ಕಾರ್ಪೊರೇಶನ್ ಎರಿಯಾ'' ಮಂಗಳೂರು ವಿಶ್ವವಿದ್ಯಾನಿಲಯದ ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ,೧೯೮೯,ಪುಟ-೫
- ೧೧. ರಾಣಿ ಸಿ,ಪೊಟೆಂಷಯಲ್ ವುಮನ್ ಎಂಟರ್ ಪ್ರೀನರ್ಸ್ ಎಸ್‌ಇಡಿ ಎಮ್ ಇ,ವಾಲ್ಯುಮ್ ೧೩, ನಂ೪, ೧೯೮೬, ಪುಟ ೫೩-೬೦

- ೧೨. ಹನ್ಸ್ ವಿ ಬಾಸಿಲ್,''ವಿಮನ್ ಹೆಲ್ತ್ ಅಂಡ್ ಪೊಡಕ್ಟಿವಿಟಿ'',ಸರ್ಕಾರ ಸಿದ್ದಾರ್ಥ ಮತ್ತು ಐಸಾಕ್ ವ್ಯಾಕು ಅಚೀಂಪಾಂಗ್,ಜೆಂಡರ ಪವರ್ಟಿ ಅಂಡ್ ಸಸ್ಟನೇಬಲ್ ಲೈವ್ಲಿಹುಡ್,ಅರೈಸ್ ಪಬ್ಲಿಷರ್ಸ್ ಅಂಡ್ ಡಿಸ್ಟ್ರಿಬ್ಯೂಟರ್ಸ್, ನ್ಯೂಡೆಲ್ಲಿ ೨೦೧೦.
- ೧೩. ಜಾನಕಿ ಎಂ,ಮಹಿಳೆಯರ ಮುನ್ನಡೆ ....ಸಾಧನೆ, ದಕ್ಷಿಣ ಕನ್ನಡ ಜಿಲ್ಲಾಕೋ ಅಪರೇಟಿವ್ ಬ್ಯಾಂಕ್ ನಿಗಮ, ಮಂಗಳೂರು ೨೦೦೪
- ೧೪. ಆ್ಯಂಟನಿ ವಲ್ಲಮ್ಮ,ವುಮನ್ ಎಂಟರ್‌ಪ್ರಿನರ್ಸ್ ಆನ್ ದ ಆಪ್‌ಬೀಟ್-ಎ ಸ್ಟಡಿ, ಸದರ್ನ್ ಇಕೋನಾಮಿಸ್ಟ, ವಾಲ್ಯೂಮ್ ೪೫(೨೧)ಮಾರ್ಚ ೩,೨೦೦೭,ಪುಟ ೧೧.

ಅನುಬಂಧ ೪: ಪರಾಮರ್ಶನ ಗ್ರಂಥಗಳು

ಮೇಲಿನ ಎಲ್ಲಾ ಪುಸ್ತಕಗಳು ಮತ್ತು

- ಬಸವೇಗೌಡ,ಶತಮಾನದ ಒಡಲ ಕೂಗು,ಸಹಕಾರ ರಾಜ್ಯ ಸಹಕಾರಿ ಮಹಾಮಂಡಳಿ,ಬೆಂಗಳೂರು,ಮೇ ೮ ೨೦೦೫ ಪುಟ ೨೭.
- ವಗ್ಗನ ವರ ಎಂ.ಎಂ.ಕರ್ನಾಟಕ ಸಹಕಾರಿ ಆಂದೋಲನದ ಪ್ರಗತಿ,ಸವಾಲುಗಳು ಹಾಗೂ ಸಲಹೆಗಳು,ಕರ್ನಾಟಕ ರಾಜ್ಯ ಸಹಕಾರಿ ಮಹಾ ಮಂಡಳಿ ಬೆಂಗಳೂರು,ಏಪ್ರಿಲ್ ೨೭,೨೦೦೮ ಪುಟ ೧೪.
- ಒಟ್ಟೋ ಎಂ ಶೆಟ್ಟರ್,ಕೋ-ಅಪರೇಶನ್ ಅಂಡ್ ಇಂಟಿಗ್ರೇಷನ್ ಅಂಡ್ ಎಗ್ರಿ ಕಲ್ಚರಲ್ ಪ್ರೋಡಕ್ಷನ್,ಎಷ್ಯಾ ಪಬ್ಲಿಶಿಂಗ್ ಹೌಸ್ ನ್ಯೂಡೆಲ್ಲಿ,೧೯೯೬.
- ಅನಂತರಾಮಯ್ಯ ಎನ್,ಭಾರತ ಗ್ರಾಮೀಣಾಭಿವೃದ್ಧಿಯ ಒಂದು ವಿಮರ್ಶೆ,ಅಂಬುಜಾ ಪ್ರಕಾಶನ,ಬೆಂಗಳೂರು ೧೯೯೩.
- ಅನುರಾಗ್‌ಮಿಶ್ರ, ಹಣಕಾಸು ಮತ್ತು ಸಾಮಾಜಿಕ ಭದ್ರತೆ(ವ್ಯಾಖ್ಯಾನ ಉದ್ಧರಣ:ಎಚ್,ಕ್ಯಾಲವರ್ಟ್),ಯೋಜನಾ,ಸಮಚಾರ ಮತ್ತು ಪ್ರಸಾರ ಸಚಿವಾಲಯ ಬೆಂಗಳೂರು,೨೦೦೮ (ಪುಟ ೫೬).
- ಚಿಂಚನಕರ್ ಪಿ.ವೈ.ಎಂ.ವಿ ನಂಜೇಶ್,ಕೋ-ಆಪರೇಶನ್ ಆಂಡ್ ದ ಡೈನಮಿಕ್ ಆಫ್ ಚೇಂಜ್,ಸೋಮಯ್ಯಾ ಪಬ್ಲಿಕೇಷನ್,ನ್ಯೂ ಡೆಲ್ಲಿ,೧೯೭೫ ಪುಟ ೨೫
- ಹಗ್ ಇ.ಎಮ್.ದಿ, ಕೋ-ಅಪರೇಟಿವ್ ಮೂಮೆಂಟ್ ಇನ್ ಇಂಡಿಯಾ,ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್,ಡೆಲ್ಲಿ,೧೯೯೧ (ಪುಟ ೩೪)
- ಭವ್ಯ-ಸಹಕಾರಿ ಸಂಘಟನೆಗಳು ಮತ್ತು ಮಹಿಳಾ ಸಶಕ್ತೀಕರಣ-ದಕ್ಷಿಣ ಕನ್ನಡ ಜಿಲ್ಲಾ ಮಹಿಳಾ ಸಹಕಾರಿ ಬ್ಯಾಂಕಿನ ಒಂದು ಅದ್ಯಯನ,ಎಂ.ಪಿಲ್ ಅಭಿವೃದ್ಧಿ ಅಧ್ಯಯನ,ಹಂಪಿ ವಿಶ್ವವಿದ್ಯಾಲಯ ೨೦೧೨
- ಚಂದ್ರ ಪೂಜಾರಿ, ಸಂಶೋಧನೆ ಏನು? ಏಕೆ? ಹೇಗೆ ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ
- ಶೀಲಾ ಕೆ. ಎಸ್. ಮತ್ತು ಡಾ। ಎ ರಾಮೇಗೌಡ -ಡೈರಿ ಕೊ- ಆಪರೇಟಿವ್ ಮತ್ತು ಮಹಿಳಾ ಸಬಲೀಕರಣ
- ಎಂ ಚಂದ್ರ ಪೂಜಾರಿ -ಸಮಾಜ ಸಂಶೋಧನೆ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ
- ಎಂ. ಚಂದ್ರ ಪೂಜಾರಿ -ಸಂಶೋಧನಾ ಪ್ರಸ್ತಾಪ, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ ಮಂಟಪ ಮಾಲೆ-೧೫೪
- ಅಭಿವೃದ್ಧಿ ಅಧ್ಯಯನ- ಸಮಾಜ ವಿಜ್ಞಾನ ಪತ್ರಿಕೆ-ಸಂಪುಟ೧ ಸಂಚಿಕೆ೧ ಡಿಸೆಂಬರ್೨೦೦೧ ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ

- ಸುದರ್ಶನ ಭಟ್ ನ್ಯಾಯವಾಧಿ ಮತ್ತು ಕೇಸರಿ ಯುವರಾಜ್-ವಿಜಯ ಕರ್ನಾಟಕ ಮಂಗಳೂರು.
- ಡಾ। ಕೆ. ಎಸ್. ಕೊ-ಆಪರೇಟಿವ್ ಮ್ಯಾನೇಜ್‌ಮೆಂಟ್. ಮೂಲತತ್ವಗಳು ಮತ್ತು ತಂತ್ರಗಳು
- ಟಿ ಅರ್ ಚಂದ್ರಶೇಖರ್ ಪ್ರಚಲಿತ ಕರ್ನಾಟಕ, ಅಭಿವೃದ್ಧಿ ಅಧ್ಯಯನ ಸಂಪುಟ೧- ಸಂಚಿಕೆ೧- ಡಿಸೆಂಬರ್ ೨೦೦೧
- ಡಾ.ಬಾಬಾ ಸಾಹೇಬ್ ಅಂಬೇಡ್ಕರ ಬರಹಗಳು ಮತ್ತು ಭಾಷಣಗಳು ಸಂ.೧ ಪು.೬೩(೫)
- ಉದಯಕುಮಾರ ಇರ್ವತ್ತೂರು ಮತ್ತು ತಿ. ನಂ ಶ್ರೀಧರ , ಪ್ರಚಲಿತ ಕರ್ನಾಟಕ, ಅಭಿವೃದ್ಧಿ ಅಧ್ಯಯನ ಸಂಪುಟ೧- ಸಂಚಿಕೆ೧- ಡಿಸೆಂಬರ್ ೨೦೦೧. ಪ್ರತಿಮಾ ಬಿ. ಸ್ವಸಹಾಯ ಗುಂಪುಗಳು ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ ಎಂ.ಫಿಲ್ ಪ್ರಬಂಧ ಹಂಪಿ ಕನ್ನಡ ವಿಶ್ವವಿದ್ಯಾಲಯ
- ಪೂಜಾ ಮಂಡೆಲಾ- ಭಾರತದಲ್ಲಿ ಮಹಿಳಾ ಸಶಕ್ತೀಕರಣ
- ಅಂತರಜಾಲ, ಪತ್ರಿಕಾ ಮಾಧ್ಯಮಗಳು.
- ಸಹಕಾರಿ ಸಿಂದು ವೆಬ್ ಸೈಟ್
- ಗೂಗಲ್ ವೆಬ್ ಸೈಟ್

ಅನುಬಂಧ-೫

ಕರ್ನಾಟಕ ನಕ್ಷೆ



ಅನುಬಂಧ-೬

ಉಡುಪಿ ನಕ್ಷೆ



ಅನುಬಂಧ-೭

ಕುಂದಾಪುರ ನಕ್ಷೆ

